

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 6 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 51 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ನಾನು ಜಲಸಂಪನ್ಮೂಲ ಒಲ್ಲೆ...

ರಾಮಲಿಂಗಾರೆಡ್ಡಿ ರಾಜೀನಾಮೆ

- ಆಹಾರ ಸಚಿವ ಕೆ.ಹೆಚ್. ಮುನಿಯಪ್ಪರಿಗೂ ಅಸಮಾಧಾನ
- ಸಿಎಂ ಡಿ.ಕೆ. ಶಿವಕುಮಾರ್ ಮನವರಿಕೆ ಮುಂದುವರಿಕೆ

ಬೆಂಗಳೂರು, ಜೂ. 5(ಕೆಎಂಶಿ)–ಖಾತೆ ಹಂಚಿಕೆ ಕುರಿತು ತೀವ್ರ ಅಸಮಾಧಾನಗೊಂಡ ಸಚಿವರ ರಾಜೀನಾಮೆ ನಿರ್ಧಾರ ದಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ನೂತನ ಸರ್ಕಾರಕ್ಕೆ ಆರಂಭದಲ್ಲೇ ಆಘಾತ ಉಂಟಾಗಿದೆ.


ರಾಮಲಿಂಗಾ ರೆಡ್ಡಿ

ಕಳೆದ ಗುರುವಾರ ತಡರಾತ್ರಿ ಖಾತೆಗಳ ಹಂಚಿಕೆ ಆದೇಶ ಲೋಕಭವನ ದಿಂದ ಹೊರ ಬೀಳುತ್ತಿದ್ದಂತೆ ಸಚಿವರಾದ ರಾಮಲಿಂಗಾ ರೆಡ್ಡಿ ಮತ್ತು ಸಚಿವ ಕೆ.ಎಚ್.ಮುನಿಯಪ್ಪ ಅಸಮಾಧಾನಗೊಂಡಿದ್ದಾರೆ.

ಸಚಿವ ರಾಮಲಿಂಗಾ ರೆಡ್ಡಿ ರಾಜೀನಾಮೆ ಕುರಿತು ಸಮಜಾಯಿಷಿ ನೀಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಹಿರಿಯರಾದ ರೆಡ್ಡಿ ಹಾಗೂ ಮುನಿಯಪ್ಪ ನನಗೆ ಆತ್ಮೀಯರಾಗಿದ್ದು, ಅವರೊಂದಿಗೆ ಮಾತುಕತೆ ನಡೆಸಿ, ಸಮಸ್ಯೆ ಪರಿಹರಿಸುವುದಾಗಿ ತಿಳಿಸಿದರು. ಇತ್ತ ರಾಜೀನಾಮೆ ಸಲ್ಲಿಸಿದ ನಂತರ ತಮ್ಮ ಶಾಸಕ ಕಚೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ರಾಮಲಿಂಗಾ ರೆಡ್ಡಿ, ಮುಖ್ಯಮಂತ್ರಿ ಶಿವಕುಮಾರ್ ಹಾಗೂ ಪಕ್ಷ ನೀಡಿದ ಭರವಸೆ ಈಡೇರಿಸಿಲ್ಲ ಎಂದರು. ನನಗೆ ಇಷ್ಟವಲ್ಲದ ಖಾತೆ ನಿರ್ವಹಿಸಲು ಸಾಧ್ಯ ವಿಲ್ಲ, ನಾನು ಎಂದೂ ಅಧಿಕಾರಕ್ಕೆ ಅಂಟಿ ಕೊಂಡು ಕೂತವನಲ್ಲ, ನನ್ನ ನಿರ್ಧಾರ ಅಚಲ, ಈ ವಿಷಯದಲ್ಲಿ ಯಾರನ್ನೂ ಭೇಟಿ ಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಮುನಿಯಪ್ಪ, ■6ನೇ ಪುಟಕ್ಕೆ

ಮನವೊಲಿಸಿ ಒಪ್ಪದಿದ್ದರೆ ರಾಜೀನಾಮೆ ಅಂಗೀಕರಿಸಿ

ಸಿಎಂ ಡಿಕೆಶಿಗೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಸೂಚನೆ

ಬೆಂಗಳೂರು, ಜೂ. 5(ಕೆಎಂಶಿ)– ಖಾತೆ ಹಂಚಿಕೆ ಅಸಮಾಧಾನದಿಂದ ರಾಮಲಿಂಗಾ ರೆಡ್ಡಿ ಸಂಪುಟಕ್ಕೆ ನೀಡಿರುವ ರಾಜೀನಾಮೆ ಅಂಗೀಕರಿಸುವಂತೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಸೂಚಿಸಿದ್ದಾರೆ.



ಕರ್ನಾಟಕ ವಿಧಾನಸಭೆ ಯಿಂದ ರಾಜ್ಯಸಭೆಗೆ ನಡೆಯುತ್ತಿರುವ ಚುನಾವಣೆಯಲ್ಲಿ ಕಣಕ್ಕಿಳಿದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಾಮಪತ್ರ ಸಲ್ಲಿಕೆ ವೇಳೆ, ಉಪಸ್ಥಿತರಿರಲು ರಾಜ್ಯಕ್ಕೆ ಆಗಮಿಸಿದ್ದ ರಾಹುಲ್ ಗಾಂಧಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಈ ಸ್ಪಷ್ಟ ಸೂಚನೆ ನೀಡಿದ್ದಾರೆ. ಸಚಿವರಾಗಿ ಪಕ್ಷದ ನಿರ್ಧಾರದ ವಿರುದ್ಧವೇ ನಡೆದುಕೊಂಡರೆ ಅಂತಹವರ ಅಗತ್ಯ ಇಲ್ಲ. ಪಕ್ಷದ ಹಿರಿಯ ನಾಯಕರಲ್ಲಿ ಒಬ್ಬರಾಗಿರುವುದರಿಂದ ಒಮ್ಮೆ ಅವರೊಂದಿಗೆ ಮಾತನಾಡಿ, ಖಾತೆ ಬದಲಾವಣೆ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿ, ಆದಾಗ್ಯೂ ಸಮ್ಮತಿಸದಿದ್ದರೆ ರಾಜೀನಾಮೆ ಅಂಗೀಕರಿಸಿ. ಸಿದ್ದರಾಮಯ್ಯ ಸಂಪುಟ ದಲ್ಲಿ ಕೃಷ್ಣಬೈರೇಗೌಡ ಉತ್ತಮ ಕಾರ್ಯ ನಿರ್ವಹಿಸಿದ್ದನ್ನು ಗಮನದಲ್ಲಿಟ್ಟುಕೊಂಡು, ಅವರಿಗೆ ಬೆಂಗಳೂರು ನಗರದ ಉಸ್ತುವಾರಿ ವಹಿಸುವಂತೆ ನಾನೇ ಸಲಹೆ ಮಾಡಿದ್ದೆ. ■6ನೇ ಪುಟಕ್ಕೆ

ಸರ್ಕಾರಿ ಸಿಬ್ಬಂದಿಗೆ ಬೆಳಗ್ಗೆ 10ಕ್ಕೆ ಹಾಜರಾತಿ ಕಡ್ಡಾಯ

ಸಿಎಂ ಡಿ.ಕೆ.ಶಿವಕುಮಾರ್ ಕಟ್ಟುನಿಟ್ಟಿನ ಆದೇಶ


ಫೈಲ್ ಚಿತ್ರ

ಬೆಂಗಳೂರು, ಜೂ. 5(ಕೆಎಂಶಿ)– ಸರ್ಕಾರದ ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿ ಪ್ರತಿದಿನ ಬೆಳಗ್ಗೆ 10 ಗಂಟೆಯೊಳಗೆ ಕಡ್ಡಾಯವಾಗಿ ಕಚೇರಿಗೆ ಹಾಜರಾಗಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ.

ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆದು, ತಕ್ಷಣದಿಂದಲೇ ಮುಖ್ಯಮಂತ್ರಿ ಆದೇಶ ಪಾಲನೆ ಮಾಡಬೇಕು ಎಂದಿದ್ದಾರೆ. ಇ–ಆಡಳಿತ ಇಲಾಖೆ ಸಿದ್ಧಪಡಿಸಿರುವ 'ಕರ್ತವ್ಯ ಆಪ್'ನ ಎಚ್‌ಆರ್‌ಎಂಎಸ್‌ನಲ್ಲಿ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ಮಾಹಿತಿ ನೋಂದಾಯಿಸಿದ್ದು, ಬಹಳಷ್ಟು ಅಧಿಕಾರಿ ಹಾಗೂ ಸಿಬ್ಬಂದಿ ತಂತ್ರಾಂಶ ಬಳಕೆ ಮಾಡದಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಈ ನಿರ್ದೇಶನಗಳನ್ನು ತಪ್ಪದೇ ಪಾಲಿಸಲು ಸೂಚಿಸಲಾಗಿದೆ. ಎಲ್ಲಾ ಅಪರ ಮುಖ್ಯಕಾರ್ಯದರ್ಶಿಗಳು, ಪ್ರಧಾನಕಾರ್ಯದರ್ಶಿಗಳು, ಕಾರ್ಯದರ್ಶಿಗಳು ■6ನೇ ಪುಟಕ್ಕೆ

ರಾಜ್ಯಸಭೆಗೆ ಪುನರಾಯ್ಕೆ ಬಯಸಿ

ಖರ್ಗೆ ನಾಮಪತ್ರ ಸಲ್ಲಿಕೆ

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಸಿಎಂ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಮಾಜಿ ಸಿಎಂ ಸಿದ್ದರಾಮಯ್ಯ ಸಾಥ್

ಬೆಂಗಳೂರು, ಜೂ.5–ರಾಜ್ಯ ವಿಧಾನ ಸಭೆಯಿಂದ ರಾಜ್ಯಸಭೆಗೆ ಮರು ಆಯ್ಕೆ ಬಯಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ನಾಮಪತ್ರ ಸಲ್ಲಿಸಿದ್ದಾರೆ.

ಖರ್ಗೆ ಅವರು ನಾಮಪತ್ರ ಸಲ್ಲಿಸುವ ವೇಳೆ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಕಾಂಗ್ರೆಸ್ ನಾಯಕರು ಉಪಸ್ಥಿತರಿದ್ದರು.

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ 4 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಇದರಲ್ಲಿ ಮೂರು ಸ್ಥಾನಗಳು ಕಾಂಗ್ರೆಸ್ಸಿಗೆ ಲಭಿಸಲಿವೆ, ಒಂದು ಸ್ಥಾನ ಬಿಜೆಪಿಯ ಪಾಲಾಗಲಿದೆ.

ಕರ್ನಾಟಕ ವಿಧಾನಸಭೆಯಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಮೂರು ಸ್ಥಾನಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಕ್ತಾರ ಪವನ್ ಖೇರಾ, ಮನ್ಸೂರ್ ಅಲಿಖಾನ್ ಅವರ ಹೆಸರನ್ನು ಕಾಂಗ್ರೆಸ್ ಅಂತಿಮಗೊಳಿಸಿದೆ

ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾಗಿದ್ದು, ಸದ್ಯ ಅವರು ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ. ರಾಜ್ಯಸಭೆಯ ಉಪಸಭಾಪತಿಯಾಗಿದ್ದ ಹಾಗೂ ■6ನೇ ಪುಟಕ್ಕೆ


ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಶುಕ್ರವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ, ಮಾಜಿ ಸಿಎಂ ಸಿದ್ದರಾಮಯ್ಯ ಉಪಸ್ಥಿತರಿದ್ದಾರೆ.

ಇಂದು ಯುಜಿ–ಸಿಇಟಿ ಫಲಿತಾಂಶ ಪ್ರಕಟ

ಬೆಂಗಳೂರು, ಜೂ. 5(ಕೆಎಂಶಿ)– ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಯುಜಿ–ಸಿಇಟಿ) ಫಲಿತಾಂಶ ನಾಳೆ (ಜೂನ್ 6ರಂದು) ಪ್ರಕಟವಾಗಲಿದೆ. ವೈದ್ಯಕೀಯ ಶಿಕ್ಷಣ ಸಚಿವ



ಹಾಗೂ ಪ್ರಾಧಿಕಾರದ ಸಹ ಅಧ್ಯಕ್ಷ ಡಾ. ಶರಣಪ್ರಕಾಶ ಪಾಟೀಲ್ ಸುದ್ದಿಗೋಷ್ಠಿಯಲ್ಲಿ ಫಲಿತಾಂಶದ ವಿವರ ಪ್ರಕಟಿಸಲಿದ್ದಾರೆ ಎಂದು ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಅಭ್ಯರ್ಥಿಗಳು ನಾಳೆ ಮಧ್ಯಾಹ್ನ 2 ಗಂಟೆ ನಂತರ ಪ್ರಾಧಿಕಾರದ ಲಿಂಕ್‌ಗಳ ಮೂಲಕ ಫಲಿತಾಂಶ ಪಡೆಯ ಬಹುದಾಗಿದೆ ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಸಿದ್ದರಾಮಯ್ಯ ಒಬ್ಬಂಟಿನಾ!



ಬೆಂಗಳೂರು, ಜೂ.5– ರಾಜಕಾರಣದಲ್ಲಿ ಅಧಿಕಾರವಿದ್ದರೇ ಬೆಲೆ. ಅದರಲ್ಲೂ ಇತ್ತೀಚೆಗೆ ಮನುಷ್ಯನಿಗೆ ಅಧಿಕಾರ–ಅದು ರಾಜಕೀಯವೇ ಆಗಿರಲಿ ಇಲ್ಲ ಆಡಳಿತಾಧಿಕಾರವೇ ಆಗಿರಲಿ ಇದ್ದರೆ ಮಾನ್ಯ–ಸನ್ಮಾನ್ಯ! ಇಲ್ಲದೇ ಹೋದರೆ ಯಾರೂ ಲೆಕ್ಕಿಸರು. ಇದಕ್ಕೆ ನಿದರ್ಶನವಿದು.

ಇಂದು ವಿಧಾನಸೌಧಕ್ಕೆ ಸಿದ್ದರಾಮಯ್ಯ ಬಂದಿದ್ದರು. ಇಷ್ಟು ದಿನ ಸಿದ್ದರಾಮಯ್ಯ ಹಿಂದೆ ಹತ್ತಾರು ಸಚಿವರು, ಶಾಸಕರು ಇರುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಅಧಿಕಾರ ಹೋಗುತ್ತಿದ್ದಂತೆ ಸಿದ್ದರಾಮಯ್ಯ ಏಕಾಂಗಿಯಾಗಿದ್ದಾರೆ. ವಿಧಾನಸೌಧದ ಪಡಸಾಲೆಯಲ್ಲಿ ಸಿದ್ದರಾಮಯ್ಯ ಒಂಟಿಯಾಗಿ ಓಡಾಡುತ್ತಿದ್ದರು. ಇನ್ನು ಕುತೂಹಲಕಾರಿ ವಿಷಯವೆಂದರೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖಾಮುಖಿಯಾದರೂ ಒಬ್ಬರಿಗೊಬ್ಬರು ಮಾತನಾಡಿಸದೇ ಮುಂದೆ ಸಾಗಿದ್ದಾರೆ. ಈ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕೊಡಗಲ್ಲಿ ಕಾಡಾನೆ ದಾಳಿ: ಹಿರಿಯ ಐಪಿಎಸ್ ಅಧಿಕಾರಿ ಪತ್ನಿ ಬಲಿ

ಕೊಡಗು: ಕೊಡಗು ಜಿಲ್ಲೆಯಲ್ಲಿ ನಡೆದ ಕಾಡಾನೆ ದಾಳಿಯಿಂದಾಗಿ ಹಿರಿಯ ಐಪಿಎಸ್ ಅಧಿಕಾರಿ ಸುನಿಲ್ ಅಚ್ಚಯ್ಯ ಅವರ ಪತ್ನಿ ಸಂಧ್ಯಾ ಅಚ್ಚಯ್ಯ ಅವರು ಮೃತಪಟ್ಟಿರುವ ದುರ್ಘಟನೆ ಶುಕ್ರವಾರ ನಡೆದಿದೆ,

ಅಣ್ಣಳಮಾಡ ಸಂಧ್ಯಾ ಬೆಂಗಳೂರಿನಲ್ಲಿ ವಾಸವಾಗಿದ್ದು, ಪತಿ ಸುನೀಲ್ ಅಚ್ಚಯ್ಯ ಅವರು ಹಿರಿಯ ಐಪಿಎಸ್ ಅಧಿಕಾರಿಯಾಗಿ ಕೇಂದ್ರ ಸರಕಾರದ ಅಧೀನದಲ್ಲಿ ಜಿನಿವಾದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗುರುವಾರ ಗೋಣಿಕೊಪ್ಪದ ಸಮೀಪದ ಕೋಣನಕಟ್ಟೆಯಲ್ಲಿ ಕುಟುಂಬಕ್ಕೆ ಸಂಬಂಧಿಸಿದ ಕಾರ್ಯಕ್ರಮಕ್ಕಾಗಿ ಸಂಧ್ಯಾ ಗೋಣಿಕೊಪ್ಪಕ್ಕೆ ಆಗಮಿಸಿದ್ದರು. ಶುಕ್ರವಾರ ಬೆಳಗ್ಗೆ 9ಗಂಟೆ ಸಮಯದಲ್ಲಿ ಎಸ್ಟೇಟ್ ಮ್ಯಾನೇಜರ್, ಕಾರ್ಮಿಕರು, ಹಾಗೂ ಚಾಲಕನ ಜೊತೆಯಲ್ಲಿ ತೋಟದ ಕೆಲಸ ಒಪ್ಪಿಸಲು ಸಂಧ್ಯಾ ಕೋಣನಕಟ್ಟೆ ತೋಟದ ಕಡೆಗೆ ತೆರಳಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಆನೆ ದಾಳಿ ನಡೆಸುತ್ತಿದ್ದಂತೆ ಸ್ಥಳದಲ್ಲಿ

ಮ್ಯಾನೇಜರ್, ಚಾಲಕ ಪಾರು

ಆತಂಕದ ವಾತಾವರಣ ನಿರ್ಮಾಣ ವಾಗಿದ್ದು, ಎಸ್ಟೇಟ್ ಮ್ಯಾನೇಜರ್ ಮತ್ತು ಚಾಲಕ ಅಲ್ಲಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಸಂಧ್ಯಾ ಅವರಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಆನೆ ದಾಳಿಗೊಳಗಾಗಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಗೊಂಡಿದ್ದ ಅವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಬೆಳಗ್ಗೆ ಸುಮಾರು 10.15ರ ವೇಳೆಗೆ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಸಂಧ್ಯಾ ಅಚ್ಚಯ್ಯ

ಘಟನೆ ಕುರಿತು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಮಾಹಿತಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ ಎಂದು ಹೇಳಿದ್ದಾರೆ.

ಆನೆ ದಾಳಿ ಹೇಗೆ ನಡೆಯಿತು ಹಾಗೂ ಘಟನೆಗೆ ಕಾರಣವಾದ ಪರಿಸ್ಥಿತಿಗಳ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆಂದು ತಿಳಿಸಿದ್ದಾರೆ. ದುರ್ಘಟನೆ ಹಿನ್ನೆಲೆ ಕೊಡಗಿನಲ್ಲಿ ಮತ್ತೆ ಮಾನವ–ಪ್ರಾಣಿ ಸಂಘರ್ಷದ ಸಮಸ್ಯೆ ಚರ್ಚೆಗೆ ಬಂದಿದೆ. ನಾಗರಹೊಳೆ ಅಭಯಾರಣ್ಯದ ಸಮೀಪದಲ್ಲಿರುವ ಕಾಫಿ ತೋಟಗಳು ಹಾಗೂ ನಿವಾಸ ಪ್ರದೇಶಗಳಿಗೆ ಕಾಡಾನೆಗಳು ಆಗಾಗ್ಗೆ ನುಗ್ಗುತ್ತಿರುವುದು ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದೆ.

ಕುಟುಂಬದ ಆಪ್ತ ಸ್ನೇಹಿತ ಎಂ.ಟಿ. ಕಾರ್ಯಪ್ಪ ಮಾತನಾಡಿ, ಕಾಡು ಪ್ರದೇಶಗಳಲ್ಲಿ ಸರಿಯಾಗಿ ಬೇಲಿ ಹಾಕಬೇಕು. ಆನೆಗಳಿಗೆ ಕಾಡಿನಲ್ಲೇ ಸಾಕಷ್ಟು ನೀರು ಮತ್ತು ಆಹಾರ ವ್ಯವಸ್ಥೆ ಮಾಡಿದರೆ ಅವು ಮಾನವ ವಸತಿ ಪ್ರದೇಶಗಳಿಗೆ ಬರುವುದಿಲ್ಲ. ಯೂಕಲಿಪ್ಟಸ್ ಮತ್ತು ತೇಗದ ಮರಗಳಿಂದ ತುಂಬಿರುವ ಅರಣ್ಯ ಪ್ರದೇಶಗಳಲ್ಲಿ ಆನೆಗಳಿಗೆ ಆಹಾರ ಸಿಗುವುದಿಲ್ಲ ■6ನೇ ಪುಟಕ್ಕೆ

ಶುದ್ಧ ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ

ಬೆಂಗಳೂರು, ಜೂ. 5(ಕೆಎಂಶಿ)–ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವುದು ಪ್ರಥಮ ಆದ್ಯತೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ 25 ವರ್ಷಗಳ ದೀರ್ಘಾವಧಿಗೆ ಭೂಮೇಲ್ಮೈ ನೀರು ಬಳಸಿ ಗ್ರಾಮೀಣ ಭಾಗಕ್ಕೆ ಪೂರೈಕೆ ಮಾಡುವುದು ಸರ್ಕಾರದ ಸಂಕಲ್ಪವಾಗಿದೆ, ಈ ಕಾರ್ಯ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಗ್ರಾಮೀಣ ಭಾಗದ ಸ್ವಚ್ಛತೆ ಕಾಪಾಡಲು ಮತ್ತು ಹಳ್ಳಿಗಳಲ್ಲಿ ಗುಣಮಟ್ಟದ ಆಸ್ತಿಗಳ ಸೃಜನೆಗೆ ಆದ್ಯತೆ ನೀಡಿ ಕಾರ್ಯ ನಿರ್ವಹಿಸಲಾಗುವುದು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಮುಂದಿನ ಯೋಜನೆ ರೂಪಿಸಲಾಗುವುದು. ಗ್ರಾಮೀಣ ಭಾಗದ ಕೆರೆಗಳು ಮತ್ತು ಜಲ ಮೂಲಗಳನ್ನು ಸಂರಕ್ಷಿಸುವಲ್ಲಿ ಮತ್ತು ಗ್ರಾಮೀಣ ಮೂಲಸೌಕರ್ಯ ವರ್ಧನೆಗೆ ಕ್ರಮ ವಹಿಸಲಾಗುವುದು ಎಂದರು.



ರಕ್ಷಿತ್ ನಗರಾಭಿವೃದ್ಧಿ ಸಚಿವ ಯತೀಂದ್ರ ಆಪ್ತ ಸಹಾಯಕ!? ಎಂಡಿಎನಲ್ಲಿ ಸರಿ ರಾತ್ರಿವರೆಗೆ ಕಡತಗಳ ವಿಲೇವಾರಿ ಸರ್ಕಸ್!!

ಮಧ್ಯವರ್ತಿಗಳ ಅಡ್ಡವಾದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆವರಣ


ಗುರುವಾರ ಸರಿರಾತ್ರಿ ಎಂಡಿಎ ಪಡಸಾಲೆಯಲ್ಲಿ ಮಧ್ಯವರ್ತಿಗಳು.

ಮೈಸೂರು, ಜೂ.5– ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ದಲ್ಲಿ ಗುರುವಾರ ಸರಿರಾತ್ರಿವರೆಗೆ ನಡೆದ ದಾಖಲೆಗಳ ಮಹಾಯಜ್ಞದ ರಹಸ್ಯ ಬಯಲಾಗಿದೆ.

ಶುಕ್ರವಾರ ಎಂಡಿಎ ಆಡಳಿತ ಮಂಡಳಿ ಸಭೆ ಆಯೋಜನೆಗೊಂಡಿದ್ದ ಹಿನ್ನೆಲೆಯಲ್ಲಿ ನಿನ್ನೆ ಸರಿರಾತ್ರಿವರೆಗೂ ದಾಖಲೆಗಳನ್ನು ಸಿದ್ಧಪಡಿಸುವ ಕಾರ್ಯ ಸಮರೋಪಾದಿಯಲ್ಲಿ ಸಾಗಿತ್ತು ಎಂದು ಎಂಡಿಎ ಆಯುಕ್ತರು, ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಮತ್ತೊಂದು ಅಚ್ಚರಿಯ ಸಂಗತಿ ಎಂದರೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನ ಅಧಿಕಾರಿ ಹಾಗೂ ಪ್ರಭಾರ ಆಯುಕ್ತ ರಾಗಿರುವ ಕೆ.ಆರ್.ರಕ್ಷಿತ್, ಕಳೆದ ಎರಡು ದಿನಗಳ ಹಿಂದಷ್ಟೇ ಡಿ.ಕೆ. ಶಿವಕುಮಾರ್ ಅವರ ಸಂಪುಟ ಸೇರ್ಪಡೆಗೊಂಡು, ನಗರಾಭಿವೃದ್ಧಿ ಖಾತೆಯನ್ನು ದಕ್ಕಿಸಿಕೊಂಡಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಪುತ್ರ, ಎಂಎಲ್ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಆಪ್ತ ಸಹಾಯಕ ರಾಗಿ ನಿಯೋಜನೆಗೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕೊನೆ ಗಳಿಗೆಯಲ್ಲಿ ಪ್ರಾಧಿಕಾರದಲ್ಲಿ ನೆನೆಗುದಿಗೆ ಬಿದ್ದಿದ್ದ ತಮ್ಮವರು, ತಮಗೆ ಬೇಕಾದವರ ದಾಖಲೆಗಳನ್ನು ಹೆಕ್ಕಿ ತೆಗೆದು ವಿಲೇವಾರಿ ಮಾಡುವ ಕಾರ್ಯವನ್ನು ರಕ್ಷಿತ್ ಒಮ್ಮೆಲೆ ಕೈಗೆತ್ತಿಕೊಂಡಿದ್ದರಿಂದ ಆ ಕಾರ್ಯ ಸರಿರಾತ್ರಿವರೆಗೂ ಹಿಡಿಯಿತು ಎಂದು ಬಲ್ಲ ಮೂಲಗಳು ತಿಳಿಸಿವೆ. ಹೀಗೆ ತರಾತುರಿಯಲ್ಲಿ ಒಮ್ಮೆಲೆ ಹೆಕ್ಕಿದ ದಾಖಲೆಗಳಲ್ಲಿ ಹಲವು ಪ್ರಭಾವಿಗಳಿಗೆ ಸೇರಿವೆ. ಎನ್ನಲಾಗುತ್ತಿದ್ದು, ಹಾಗಾಗಿಯೇ ಅವರ ಕಡೆಯ ಏಜೆಂಟರು, ಮಧ್ಯವರ್ತಿಗಳು ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದರು. ಎಷ್ಟೊತ್ತಾದರೂ ಸರಿಯೇ ತಮ್ಮ ಕಾರ್ಯ ಸಾಧಿಸಿಕೊಳ್ಳಲೇಬೇಕೆಂದು ತವಕಿಸುತ್ತಿದ್ದರು. ಸರಿರಾತ್ರಿಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿಯ ವಿವಿಧ ವಿಭಾಗಗಳಲ್ಲಿ ದೀಪ ಗಳು ಬೆಳಗುತ್ತಿವೆ. ಮುಂಭಾಗ ಅನೇಕ ಕಾರುಗಳು ನಿಂತಿವೆ. ಅಧಿಕಾರಿ ಹಾಗೂ ಸಿಬ್ಬಂದಿ ತರಾತುರಿಯಲ್ಲಿ ಕಾರ್ಯ ■6ನೇ ಪುಟಕ್ಕೆ


ಯತೀಂದ್ರ

ಇಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯಿದ್ದ ಹಿನ್ನೆಲೆಯಲ್ಲಿ ದಾಖಲಾತಿಗಳನ್ನು ಸಿದ್ದಪಡಿಸಿಕೊಳ್ಳಲು ಅಧಿಕಾರಿಗಳು ಹಾಗೂ ಸಿಬ್ಬಂದಿ ನಿನ್ನೆ ರಾತ್ರಿ ಕರ್ತವ್ಯ ನಿರ್ವಹಿಸುತ್ತಿದ್ದರು. ಎಂಡಿಎ ಮಾತ್ರವಲ್ಲದೆ ನಗರ ಪಾಲಿಕೆ, ಪಟ್ಟಣ ಪಂಚಾಯಿತಿಗಳಲ್ಲಿ ಕೂಡ ಜನರಲ್ ಬಾಡಿ ಮೀಟಿಂಗ್ ಇದ್ದ ಸಂದರ್ಭದಲ್ಲಿ ರಾತ್ರಿ ವೇಳೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೀಗೆ ಕರ್ತವ್ಯ ನಿರ್ವಹಿಸಿದ್ದಾರೆ.
-ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು.



ಸಬ್ಜೆಕ್ಟ್ ಇದೆಯೇ ಎಂದು ಖಚಿತಪಡಿಸಿಕೊಳ್ಳಲು ಬಂದಿದ್ದರು!

ಇಂದಿನ ಎಂಡಿಎ ಸಭೆಯಲ್ಲಿ ತಮ್ಮ ಸಬ್ಜೆಕ್ಟ್ ಇದೆಯೇ ಎಂದು ಖಚಿತಪಡಿಸಿಕೊಳ್ಳಲು ಕೆಲವರು ಅಲ್ಲಿದ್ದರು. ಅವರನ್ನು ಬಿಟ್ಟು ಬೇರೆ ಯಾರೂ ಅಲ್ಲಿರಲಿಲ್ಲ. ಪ್ರಾಧಿಕಾರದ ಸಭೆಯ ಕಾರ್ಯಸೂಚಿ ಅಥವಾ ಪ್ರೊಸಿಡಿಂಗ್ಸ್‌ಗಳನ್ನು ಗುರುವಾರ ರಾತ್ರಿ 9.30 ಗಂಟೆವರೆಗೂ ನಾನು ಅಂತಿಮಗೊಳಿಸಿದೆ. ತರುವಾಯ ಅದಕ್ಕೆ ಸಂಬಂಧಿಸಿದ ದಾಖಲಾತಿಗಳ ಜೆರಾಕ್ಸ್ ಮಾಡುವುದು ಸೇರಿದಂತೆ ಇತರೆ ಪ್ರಕ್ರಿಯೆಗಳಲ್ಲಿ ನಮ್ಮ ಸಿಬ್ಬಂದಿ ತೊಡಗಿದ್ದರು. ಇದು ಬಿಟ್ಟು ಬೇರೆ ಉದ್ದೇಶ ಏನೂ ಇಲ್ಲ ಎಂದು ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ತಿಳಿಸಿದ್ದಾರೆ. ಆದರೆ ಸರಿರಾತ್ರಿವರೆಗೆ ಯಾವ ಕಚೇರಿಯಲ್ಲಿ ಮಧ್ಯವರ್ತಿಗಳಿಗೆ ಅವಕಾಶ ನೀಡಲಾಗುತ್ತದೆ. ಇದಕ್ಕೆ ಸರ್ಕಾರದಲ್ಲಿ ಅವಕಾಶವಿದೆಯೇ. ರಾಜಾರೋಷವಾಗಿ ಕಚೇರಿಯ ಎಲ್ಲಾ ವಿಭಾಗಗಳಲ್ಲಿ ಹೊಂಚು ಹಾಕುತ್ತಿದ್ದ ಮಧ್ಯವರ್ತಿಗಳು ಅಧಿಕಾರಿಗಳ ಕಡೆಯವರೋ ಇಲ್ಲ ಯಾವುದೋ ಪುಢಾರಿ, ಭೂ ಮಾಫಿಯಾ ಕಡೆಯವರೋ!?





ಮೈಸೂರು ಮಿತ್ರ ಶನಿವಾರ 6 ಜೂನ್ 2026

ಮೈಸೂರಿನಲ್ಲಿ ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್ ವಿಶೇಷ ಪ್ರದರ್ಶನ



ಮೈಸೂರು, ಜೂ. 5–ಭಾರತದ ಪ್ರತಿಷ್ಠಿತ ಆಭರಣ ಕಂಪನಿಗಳಲ್ಲಿ ಒಂದಾದ ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್, ಕಾಲಾತೀತ ಸಂಪ್ರದಾಯ ಮತ್ತು ಆಧುನಿಕ ಅತ್ಯಾಧುನಿಕತೆಯನ್ನು ಮಿಶ್ರಣ ಮಾಡುವ ನಾಲ್ಕು ದಿನಗಳ ವಿಶೇಷ ಪ್ರದರ್ಶನದೊಂದಿಗೆ ಮೈಸೂರಿಗರನ್ನು ಬೆರಗುಗೊಳಿಸಲು ಸಜ್ಜಾಗಿದೆ.


ಈ ಪ್ರದರ್ಶನವು ಜೂ.5ರಿಂದ 8ರವರೆಗೆ ಮೈಸೂರಿನ ಹೋಟೆಲ್ ಗ್ರ್ಯಾಂಡ್ ಮರ್ಕ್ಯೂರ್‌ನಲ್ಲಿ ನಡೆಯಲಿದ್ದು, ನಟಿ ಮತ್ತು ರೂಪದರ್ಶಿ ಶ್ರೀಮತಿ ರೋಶನಿ ಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿದರು.

ಬಳಿಕ ಮಾತನಾಡಿದ ನಟಿ ಮತ್ತು ರೂಪದರ್ಶಿ ಶ್ರೀಮತಿ ರೋಶನಿ ಪ್ರಕಾಶ್, ಶ್ರೀಮಂತ ಇತಿಹಾಸ ಹೊಂದಿರುವ ಬ್ರ್ಯಾಂಡ್ ಮೈಸೂರಿಗೆ ಆಗಮಿಸಿರುವುದು ಸಂತೋಷಕರವಾಗಿದೆ. ಈ ಸುಂದರವಾದ ಆಭರಣಗಳಲ್ಲ–ಅವು ಕಥೆಗಳು, ಸಂಪ್ರದಾಯಗಳು ಮತ್ತು ಭಾವನೆಗಳಿಗೆ ಜೀವ ತುಂಬಿವೆ. ಪ್ರತಿ ವಿನ್ಯಾಸದಲ್ಲೂ ತೋರಿಸಿರುವ ಕರಕುಶಲತೆ ಮತ್ತು ಕಾಳಜಿಯನ್ನು ಇಲ್ಲಿನ ಜನರು ಮೆಚ್ಚುತ್ತಾರೆ ಎಂದು ಖಚಿತವಾಗಿದೆ ಎಂದರು.

ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್‌ನ ಮಳಿಗೆಯ ಮುಖ್ಯಸ್ಥ ಗೋಪಾಲ್ ಸಿಂಗ್ ಮಾತನಾಡಿ, ಆಭರಣಗಳು ಅರ್ಥಪೂರ್ಣವಾಗಿರುವುದರ ಜೊತೆಗೆ ಅದ್ಭುತವಾಗಿರಬೇಕು ಎಂದು ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ನಂಬಿದೆ ಎಂದರು.

ಈ ಪ್ರದರ್ಶನವು ಕೇವಲ ಪ್ರದರ್ಶನಕ್ಕಿಂತ ಹೆಚ್ಚಿನದಾಗಿದೆ. ಕಲಾತ್ಮಕತೆ, ಪರಂಪರೆ ಮತ್ತು ಉದ್ದೇಶದ ತಲ್ಲೀನಗೊಳಿಸುವ ಅನುಭವವಾಗಿದೆ. ಸಂದರ್ಶಕರು ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಭರಣಗಳ ಭವಿಷ್ಯವನ್ನು ಹೇಗೆ ರೂಪಿಸುತ್ತಿದೆ ಎಂಬುದನ್ನು ವೀಕ್ಷಿಸುತ್ತಾರೆ. ಇಲ್ಲಿ ಸೌಂದರ್ಯವು ಜವಾಬ್ದಾರಿಯನ್ನು ಪೂರೈಸುತ್ತದೆ ಮತ್ತು ಪ್ರಜ್ಞಾಪೂರ್ವಕ ಆಯ್ಕೆಯಾಗುತ್ತದೆ ಎಂದು ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್‌ನ ಪಿಆರ್ ಮುಖ್ಯಸ್ಥ ತೇಜಸ್ ಕಲ್ರಾ ಹೇಳಿದರು.

ಬಿಜೆಪಿಗೆ ಅಣ್ಣಾಮಲೈ ಗುಡ್‌ಬೈ



ನವದೆಹಲಿ: ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ, ತಮಿಳುನಾಡಿನ ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಅಣ್ಣಾಮಲೈ ಅವರ ರಾಜೀನಾಮೆಯನ್ನು ಹೈಕಮಾಂಡ್ ಕೊನೆಗೂ ಅಂಗೀಕರಿಸಿದೆ. ಇದರೊಂದಿಗೆ ಪಕ್ಷದೊಂದಿಗಿನ ಅವರ ಆರು ವರ್ಷಗಳ ಸಖ್ಯ ಕೊನೆಗೊಂಡಿದೆ. ಅಣ್ಣಾಮಲೈ ಅವರ ರಾಜೀನಾಮೆಯನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅಂಗೀಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಣ್ಣಾಮಲೈ ಅವರು ಜೂನ್ 2ರಂದು ನಿತಿನ್ ನವೀನ್, ಅಮಿತ್ ಶಾ ಸೇರಿದಂತೆ ಹಿರಿಯ ನಾಯಕರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಿದ್ದರು. ತಮ್ಮ ನಿರ್ಧಾರಕ್ಕೆ ಕಾರಣವನ್ನೂ ವಿವರಿಸಿದ್ದರು. ಆದರೆ, ರಾಜೀನಾಮೆ ನಿರ್ಧಾರವನ್ನು ಮರು ಪರಿಶೀಲಿಸಿ ಎಂದು ಬಿಜೆಪಿ ಹೈಕಮಾಂಡ್ ಅಣ್ಣಾಮಲೈ ಅವರಿಗೆ ಮನವಿ ಮಾಡಿತ್ತು. 2021ರಿಂದ 2025ರವರೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪಕ್ಷದ ಭವಿಷ್ಯ ಅಣ್ಣಾಮಲೈ ಎಂದೇ ಹೇಳಲಾಗಿತ್ತು. ಆದರೆ, ಇತ್ತೀಚೆಗೆ ನಡೆದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಎಐಎಡಿಎಂಕೆ ಜತೆ ಬಿಜೆಪಿ ಮೈತ್ರಿ ಮಾಡಿಕೊಂಡಿದ್ದರಿಂದ ಅವರು ಅಸಮಾಧಾನಗೊಂಡಿದ್ದರು.

ಮೈಸೂರಿನ ಮೂಗೂರು ಕರ್ನಾಟಕ ಬ್ರಾಹ್ಮಣ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.5– ಮೈಸೂರಿನ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಈ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೂಗೂರು ಕರ್ನಾಟಕ ಬ್ರಾಹ್ಮಣ ಸಮುದಾಯದ 2025–26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯ ಪಠ್ಯಕ್ರಮ ಆಧಾರಿತ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಹಾಗೂ ಸಿಬಿಎಸ್‌ಸಿ ಪಠ್ಯಕ್ರಮದಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ಪ್ರತಿಭಾವಂತ ವಿದ್ಯಾರ್ಥಿಗಳು ಜೂನ್ 8 ಸಂಜೆ 5 ಗಂಟೆ ಒಳಗೆ ಅಂಕಪಟ್ಟಿ, ಆಧಾರ್ ಪ್ರತಿ ಹಾಗೂ 2 ಪಾಸ್‌ಪೋರ್ಟ್ ಅಳತೆ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬಹುದು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಸಂಘದ ನಿರ್ದೇಶಕರಾದ ಹೊಮ್ಮ ಮಂಜುನಾಥ್ (9019076842), ತುಪ್ಪೂರ್ ನಾಗೇಂದ್ರ (9845112625), ರಾಜರತ್ನಮ್ (9449993322), ಕಾರ್ಯದರ್ಶಿ ಕೆ.ಆರ್.ಮಂಜುನಾಥ್(9945657522) ಅವರನ್ನು ಸಂಪರ್ಕಿಸಬಹುದು. ಜೂ.14ರಂದು ಸಂಜೆ 5ಕ್ಕೆ ಶ್ರೀ ಶಾರದಾ ನಿಕೇತನದಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ ಎಂದು ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಶೀರ್ವಾದ...



ಅಧಿಕ ಮಾಸ ಮಹೋತ್ಸವದ ಪ್ರಯುಕ್ತ ಮೈಸೂರಿಗೆ ಆಗಮಿಸಿರುವ ಉತ್ತರಾದಿ ಮಠದ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಲ್ ಅವರು ಕಾಂಗ್ರೆಸ್ ಮುಖಂಡರು, ಅಖಿಲ ಭಾರತೀಯ ಬ್ರಾಹ್ಮಣ ಏಕೀಕೃತ ಪರಿಷತ್ ಕರ್ನಾಟಕ ರಾಜ್ಯಾಧ್ಯಕ್ಷ ಎನ್.ಎಂ. ನವೀನ್‌ಕುಮಾರ್ ಅವರಿಗೆ ಆಶೀರ್ವಾದ ಮಾಡಿದರು. ಚಿತ್ರದಲ್ಲಿ ಉತ್ತರಾದಿ ಮಠದ ವ್ಯವಸ್ಥಾಪಕರಾದ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ, ಶ್ರೀ ಮಠದ ಶಿಷ್ಯರು, ವಿಪ್ರ ಮುಖಂಡರು ಆದ ಎಸ್.ಬಿ.ವಾಸುದೇವಮೂರ್ತಿ, ಎನ್.ಎಂ.ಪ್ರವೀಣ್‌ಕುಮಾರ್, ವಿಪ್ರ ಮುಖಂಡರಾದ ಆರ್.ಎಸ್.ಸತ್ಯನಾರಾಯಣ, ಶ್ರೀಕಾಂತ್ ಇನ್ನಿತರರಿದ್ದರು.

ಇಂದಿನಿಂದ ಅಂಜನಾನಂದನೋತ್ಸವ

ಮೈಸೂರು, ಜೂ.5– ಮೈಸೂರಿನ ಶಿವರಾಮಪೇಟೆಯ ವಿನೋಬ ರಸ್ತೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಅಧಿಕಮಾಸದ ಪ್ರಯುಕ್ತ ಎಸ್.ಕೆ.ರಾಮಶೇಷನ್ ಅವರಿಂದ ಅಂಜನಾನಂದನೋತ್ಸವ ಶ್ರೀ ಸುಂದರಕಾಂಡ ಪ್ರವಚನವನ್ನು ಜೂನ್ 6 ರಿಂದ 12ರವರೆಗೆ ಶ್ರೀರಾಮ ಮಂದಿರದ ಆವರಣದಲ್ಲಿ ಪ್ರತಿದಿನ ಸಂಜೆ 6.30ರಿಂದ ರಾತ್ರಿ 8 ಗಂಟೆಯವರೆಗೆ ಏರ್ಪಡಿಸಲಾಗಿದೆ ಎಂದು ಟ್ರಸ್ಟ್‌ನ ಕಾರ್ಯಕಾರಿ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ

ಟಿ.ಎಂ.ಗೌರಮ್ಮ



ಮೈಸೂರು, ಜೂ.5–ಮೈಸೂರಿನ ಸಿದ್ಧಾರ್ಥನಗರ, ವಿನಯ ಮಾರ್ಗದ ದಿವಂಗತ ಎಂ.ತಿಬ್ಬಯ್ಯ(ನಿವೃತ್ತ ಇಇ) ಅವರ ಧರ್ಮಪತ್ನಿ ಶ್ರೀಮತಿ ಟಿ.ಎಂ.ಗೌರಮ್ಮ(79) ಅವರು ನಿಧನರಾದರು. ಇವರು, ಮಕ್ಕಳಾದ ಎಂ.ಟಿ.ವಿಜಯ್‌ಕುಮಾರ್, ಎಂ.ಟಿ.ರಾಜ್‌ಕುಮಾರ್, ಎಂ.ಟಿ.ರವೀಂದ್ರ, ಡಾ.ಎಂ.ಟಿ.ಮಹೇಶ್ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ (ಜೂ.6) ಬೆಳಗ್ಗೆ 11.30ಕ್ಕೆ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮುಂಡಿಬೆಟ್ಟ ದೇವಾಲಯದ ಪ್ರವೇಶ ದರ ಹೆಚ್ಚಳ ಮಾಡಿಲ್ಲ

ಸಾಮಾಜಿಕ ಜಾಲತಾಣದಲ್ಲಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷೆ ಡಾ.ಎಂ.ಜೆ.ರೂಪ ಸ್ಪಷ್ಟನೆ

ಮೈಸೂರು, ಜೂ.5(ಎಂಟಿವೈ)–ಬೆಟ್ಟದ ಚಾಮುಂಡೇಶ್ವರಿ ದೇವಾಲಯಕ್ಕೆ ವಿಶೇಷ ದರ್ಶನಕ್ಕೆ ಟಿಕೆಟ್ ದರ ಹೆಚ್ಚಿಸಿಲ್ಲ. ತಾಂತ್ರಿಕ ದೋಷದಿಂದ 50 ರೂ. ಮುಖಬೆಲೆಯ ಟಿಕೆಟ್ ವಿತರಣೆ ಎರಡು ದಿನ ಸ್ಥಗಿತಗೊಂಡಿತ್ತು ಎಂದು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಎಂ.ಜೆ.ರೂಪ ಸ್ಪಷ್ಟಪಡಿಸಿದ್ದಾರೆ.



ಸಾಮಾಜಿಕ ಮಾಧ್ಯಮಗಳಲ್ಲಿ ಚಾಮುಂಡಿಬೆಟ್ಟದಲ್ಲಿ ವಿಶೇಷ ಪ್ರವೇಶದ ಟಿಕೆಟ್ ದರ ಹೆಚ್ಚಿಸಲಾಗಿದೆ ಎಂದು ತಪ್ಪು ಸಂದೇಶ ರವಾನಿಸಲಾಗಿದೆ. ಅದು ಸತ್ಯಕ್ಕೆ ದೂರವಾದ ಸಂಗತಿ. ಸದ್ಯಕ್ಕೆ ಟಿಕೆಟ್ ದರ ಹೆಚ್ಚಳ ಮಾಡಿಲ್ಲ. ತಾಂತ್ರಿಕ ದೋಷದಿಂದ ಕಳೆದ ಎರಡು ದಿನದಿಂದ 50 ರೂ. ಮುಖ ಬೆಲೆಯ ಟಿಕೆಟ್ ಮುದ್ರಣವಾಗುತ್ತಿರಲಿಲ್ಲ. ಇದರಿಂದ 50 ರೂ. ಟಿಕೆಟ್ ವಿತರಣೆಯಲ್ಲಿ ಅಡಚಣೆಯುಂಟಾಗಿತ್ತು. ಇದೀಗ ತಾಂತ್ರಿಕ ದೋಷ ಸರಿಪಡಿಸಲಾಗಿದೆ. ನಾಳೆಯಿಂದ ಎಂದಿನಂತೆ ಟಿಕೆಟ್ ವಿತರಣೆಯಾಗಲಿದೆ ಎಂದು ತಿಳಿಸಿದರು.

ಕಳೆದ ವರ್ಷದ ಡಿಸೆಂಬರ್ ಮೂರರಂದು 100 ರೂ. ಇದ್ದ ಟಿಕೆಟ್ ದರ 200ಕ್ಕೆ ಹೆಚ್ಚಿಸಿ, ಪ್ರತಿ ಟಿಕೆಟ್‌ಗೆ ಪ್ರಸಾದವಾಗಿ 2 ಲಾಡು (ಉಚಿತ) ನೀಡಲಾಗುತ್ತಿತ್ತು. ದೇವಾಲಯಕ್ಕೆ ಅಕ್ರಮವಾಗಿ ಪ್ರವೇ ಶಿಸುವವರನ್ನು ತಡೆಗಟ್ಟಲು ಜನವರಿ 1ರಂದು 1000 ರೂ. ಟಿಕೆಟ್ ವ್ಯವಸ್ಥೆ ಚಾಲನೆಗೆ ತರಲಾಯಿತು. ಈ ಟಿಕೆಟ್ ಪಡೆದವರಿಗೆ 4 ಲಾಡು, ದೇವರ ಪಟ ಹಾಗೂ ಕುಂಕುಮ ಪ್ರಸಾದ ನೀಡಲಾಗುತ್ತಿದೆ. ಇದಕ್ಕೆ ಜಿಲ್ಲಾಧಿಕಾರಿಗಳು ಹಾಗೂ ಎಸಿಎಸ್ ಅನುಮೋದಿಸಿದ್ದಾರೆ. ಅದನ್ನು ಹೊರತುಪಡಿಸಿದರೆ ಇತ್ತೀಚೆಗೆ ಯಾವುದೇ ದರ ಹೆಚ್ಚಳ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸುಧಾರಣೆ ತರಲಾಗಿದೆ: ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ತಾವು ಬಂದ ಬಳಿಕ ಹಲವು ಸುಧಾರಣೆ ತರಲಾಗಿದೆ. ಇದರಿಂದ ಕೆಲವರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ಆ ಕಾರಣದಿಂದ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ. ಅಲ್ಲದೆ, ಸಾಮಾಜಿಕ ಜಾಲತಾಣದಲ್ಲಿ ತಪ್ಪು ಸಂದೇಶ ರವಾನಿಸಿ, ಜನರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಆರ್‌ಟಿಐ ಕಾರ್ಯಕರ್ತ ಗಂಗರಾಜುಗೆ ಜಾಮೀನು



ಮೈಸೂರು, ಜೂ.5(ಬಿಎಲ್‌ಯು)–ಹಣಕಾಸು ವಿಚಾರದಲ್ಲಿ ಕಾರು ಡಿಕ್ಕಿ ಹೊಡೆಸಿ ಕೊಲೆಗೆ ಯತ್ನಿಸಿದ ಆರೋಪ ಹೊತ್ತ ಆರ್‌ಟಿಐ ಕಾರ್ಯಕರ್ತ ಗಂಗರಾಜುಗೆ ಮೈಸೂರು ಕೋರ್ಟ್ ಜಾಮೀನು ನೀಡಿದೆ. ಮೈಸೂರಿನ 2ನೇ ಎಡಿಜೆ ಹಾಗೂ ಸೆಷನ್ ಕೋರ್ಟ್‌ನಲ್ಲಿ ಗಂಗರಾಜುಗೆ ಜಾಮೀನು ನೀಡುವ ಸಂಬಂಧ ವಿಚಾರಣೆ ನಡೆದಿತ್ತು. ಜಾಮೀನು ನೀಡದಂತೆ ಸರ್ಕಾರಿ ವಕೀಲರು ಜೂ.2ರಂದು ಆಕ್ಷೇಪಣೆ ಸಲ್ಲಿಸಿದ್ದರು. ಜಾಮೀನು ನೀಡುವ ಸಂಬಂಧ ವಾದ–ಪ್ರತಿವಾದ ಆಲಿಸಿದ ಮೈಸೂರಿನ 2ನೇ ಎಡಿಜೆ ಹಾಗೂ ಸೆಷನ್‌ಕೋರ್ಟ್‌ನ ನ್ಯಾಯಾಧೀಶರಾದ ಮೋಹನ್ ಅವರು ಗಂಗರಾಜುವಿಗೆ ಜಾಮೀನು ಮಂಜೂರು ಮಾಡಿದರು.

ರಾಜ್ಯದಲ್ಲಿ ಉದ್ಯಮಶೀಲತಾ ಬಲವರ್ಧನೆಗಾಗಿ ಇಂದು ಮೈಸೂರಲ್ಲಿ

‘ಮುಂದೆ ಬನ್ನಿ ಮೀಟ್ ಅಪ್ ಮೈಸೂರು’ ಕಾರ್ಯಕ್ರಮ

ಮೈಸೂರು, ಜೂ.5(ಜಿಎ)–ಎಸ್‌ಜೆಸಿಇ–ಸ್ಟೆಪ್ ವತಿಯಿಂದ ರಾಜ್ಯದ ಉದ್ಯಮಶೀಲತಾ ಬಲವರ್ಧನೆ ನಿಟ್ಟಿನಲ್ಲಿ ಜೂ. 6ರಂದು ಸಂಜೆ 4 ಗಂಟೆಗೆ ಎಸ್‌ಜೆಸಿಇ ಆವರಣದ ಆರ್.ಪಿ.ಸಿಂಘಾನಿಯಾ ಸಭಾಂಗಣದಲ್ಲಿ ‘ಮುಂದೆ ಬನ್ನಿ ಮೀಟ್ ಅಪ್ ಮೈಸೂರು’ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸ್ಟೆಪ್ ವ್ಯವಸ್ಥಾಪಕರಾದ ಎಸ್.ಡಿ.ಮೇಘನಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯಮಿಗಳು, ನವೋದ್ಯಮ ಸಂಸ್ಥಾಪಕರು, ಕೈಗಾರಿಕಾ ತಜ್ಞರು, ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಉದ್ಯಮಶೀಲತಾ ಪರಿಸರ ವ್ಯವಸ್ಥೆಯ ವಿವಿಧ ಭಾಗೀದಾರರನ್ನು ಒಂದೆಡೆ ಒಗ್ಗೂಡಿಸಿ, ವಿಚಾರ ವಿನಿಮಯ, ಅನುಭವ ಹಂಚಿಕೆ ಹಾಗೂ ನವೋದ್ಯಮ ಸಂಸ್ಕೃತಿಗೆ ಉತ್ತೇಜನ ನೀಡುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದರು.

ಮುಂದೆ ಬನ್ನಿ ಎಂಬುದು ರಾಜ್ಯದ ಅತ್ಯಂತ ಸಕ್ರಿಯ ಹಾಗೂ ಪ್ರಭಾವಶೀಲ ಸಮುದಾಯಗಳಲ್ಲಿ ಒಂದಾಗಿದ್ದು, ಕನ್ನಡಿಗ ಉದ್ಯಮಿಗಳು, ವೃತ್ತಿಪರರು, ಉದ್ಯಮ ನಾಯಕರು, ಉದ್ಯಮಾಕಾಂಕ್ಷಿಗಳನ್ನು ಜಾಲತಾಣ ನಿರ್ಮಾಣ, ಮಾರ್ಗದರ್ಶನ ಮತ್ತು ಜ್ಞಾನ ಹಂಚಿಕೆ ಚಟುವಟಿಕೆಗಳ ಮೂಲಕ ಸಂಪರ್ಕಿಸುವ ಕಾರ್ಯದಲ್ಲಿ ನಿರತವಾಗಿದೆ. ಈ ವೇದಿಕೆಯನ್ನು ಬಳಸಿಕೊಂಡು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮವನ್ನು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರು ಹಾಗೂ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಪ್ರೋ ಚಾನ್ಸಲರ್ ಡಾ.ಬಿ.ಸುರೇಶ್ ಉದ್ಘಾಟಿಸಲಿದ್ದಾರೆ. ನಂತರ ಸಂವಾದ ನಡೆಯಲಿದ್ದು, ಇದರಲ್ಲಿ ಕೆಡಿಇಎಂ ಕ್ಲಸ್ಟರ್ ಮುಖ್ಯಸ್ಥ ಸುಧೀರ್ ಶಂಕರ್, ಸ್ಟೆಪ್ ಸಿಇಓ ಶಿವಶಂಕರ್, ಮುಂದೆ ಬನ್ನಿ ಸಂಸ್ಥೆಯ ಸಿಇಓ ವಸಂತ ಶೆಟ್ಟಿ ಮಾತನಾಡಲಿದ್ದಾರೆ. ತದ ನಂತರ ಯಶಸ್ವಿ ಉದ್ಯಮಿಗಳ ಪಯಣದಲ್ಲಿ ಜೆನ್‌ವೀಶನ್ ಟೆಕ್ನಾಲಜಿಯ ಸಂಸ್ಥಾಪಕರಾದ ಎಂ.ಪಿ.ಪೃಥ್ವಿ, ಕಾರ್ನಾಡ್ ಇಂಜಿನಿಯರಿಂಗ್‌ನ ಸಂಸ್ಥಾಪಕ ಪಿ.ನಿಶಾಂತ್, ಸಂಪರ್ಕರಿಸು ಸಂಸ್ಥೆಯ ಸಂಸ್ಥಾಪಕಿ ಎನ್.ಲಾವಣ್ಯ ಪಾಲ್ಗೊಳ್ಳಲಿದ್ದಾರೆ. ಹೇವಿ ಮೈಂಡ್ ಸಂಸ್ಥಾಪಕರಾದ ಜೆ.ಟಿ.ಜ್ಯೋತಿರ್ಮಯಿ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಯೋಜನಾಧಿಕಾರಿ ಬಿ.ಎಂ.ಚಂದ್ರಶೇಖರ್, ವಿಜೇಂದ್ರ ಕುಮಾರ್, ವಿ.ಮಹಾಲಕ್ಷ್ಮಿ ಇದ್ದರು.



ನೂತನ ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಅವರನ್ನು ಗ್ರಾಪಂ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಮಾಜಿ ಸದಸ್ಯರಾದ ಪಟೇಲ್ ರವಿ, ಹುಚ್ಚಪ್ಪ, ಬಡಗಲಹುಂಡಿ ಪ್ರಕಾಶ್, ಕೃಷ್ಣಪ್ಪ, ವ್ಯಾನ್ ಸ್ವಾಮಿ ಅಭಿನಂದಿಸಿದರು.

ಅಭಿನಂದನೆ...



ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ವಿಶ್ವನಾಥ್, ಮಹ್ಮದ್ ನೂರುಲ್ಲಾ, ನಿತಿನ್ ಪಾಟೀಲ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಕಲ್ಪನಾ, ಉಪಾಧ್ಯಕ್ಷರಾಗಿ ಪ್ರಭಾ ಸುರೇಂದ್ರ ಆಯ್ಕೆಯಾದರು. ಇವರನ್ನು ಬ್ಯಾಂಕಿನ ಸಿಬ್ಬಂದಿ ಅಭಿನಂದಿಸಿದರು.

ಕೃಷಿ ಭೂಮಿಯಲ್ಲೂ ಮರ–ಗಿಡ ಬೆಳೆಸಿ, ಪರಿಸರ ಸಮತೋಲನ ಕಾಪಾಡಬಹುದು

● ಕಾವೇರಿ ವನ್ಯಧಾಮದ ಡಿಸಿಎಫ್ ಎನ್.ಹೆಚ್.ಜಗನ್ನಾಥ್ ಅಭಿಮತ ● ಓಡಿಪಿ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಮೈಸೂರು, ಜೂ.5(ಎಂಟಿವೈ)– ಹೊಲ–ಗದ್ದೆಗಳಲ್ಲಿ ಗಿಡ–ಮರ ಹೆಚ್ಚಾಗಿ ಬೆಳೆಸುವುದರಿಂದ ಪರಿಸರ ಸಮತೋಲನ ಕಾಪಾಡಿಕೊಳ್ಳುವುದರೊಂದಿಗೆ ಮಣ್ಣಿನ ಸವಕಳಿ ತಪ್ಪಿಸಬಹುದು ಎಂದು ಕಾವೇರಿ ವನ್ಯಧಾಮದ ಡಿಸಿಎಫ್ ಎನ್.ಹೆಚ್.ಜಗನ್ನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬನ್ನಿಮಂಟಪದಲ್ಲಿರುವ ಓಡಿಪಿ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪರಿಸರ ಸಂರಕ್ಷಣೆ ದೊಡ್ಡ ಸವಾಲಾಗಿ ಪರಿಣಮಿಸಿದ್ದು, ಅರಣ್ಯ ಇಲಾಖೆ ಪರಿಸರ ಸಂರಕ್ಷಣೆ ಮಹಿತ್ವ ಸಾರುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ರೂಪಿಸುತ್ತಿದೆ. ಪರಿಸರ ಸಂರಕ್ಷಣೆ ಎಲ್ಲರ ಹೊಣೆಯೂ ಆಗಿದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮಾತ್ರವಲ್ಲದೆ ಎಲ್ಲಾ ಇಲಾಖೆಗಳು, ಸಂಘ–ಸಂಸ್ಥೆಗಳು ಪರಿಸರ ಸಂರಕ್ಷಣೆಗೆ ಶ್ರಮಿಸಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರಿತ್ಯದಿಂದಾಗಿ ವಾತಾವರಣದಲ್ಲಿ ಏರುಪೇರಾಗುತ್ತಿದೆ. ಮುಂಬರುವ ದಿನಗಳಲ್ಲಿ ಪರಿಸರ ಸಮತೋಲನ ಕಾಪಾಡಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಗಿಡ–ಮರ ನೆಟ್ಟು ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ರೈತರು ತಮ್ಮ ಹೊಲ–ಗದ್ದೆಗಳ ಬದಿಯಲ್ಲಿ ಹೆಚ್ಚಾಗಿ ಗಿಡ–ಮರ ಬೆಳೆಸಿದರೆ ಪರಿಸರ ಸಂರಕ್ಷಣೆಯೊಂದಿಗೆ ಮಣ್ಣಿನ ಸವಕಳಿ ತಪ್ಪಿಸಬಹುದು. ಗಿಡ, ಮರಗಳ ಬೇರು ಮಣ್ಣನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವುದರಿಂದ ಫಲವತ್ತಾದ ಮಣ್ಣಿನ ಮೇಲ್ಮೈ ಸವಕಳಿಯಾಗದಂತೆ ತಡೆಗಟ್ಟುತ್ತದೆ ಎಂದು ತಿಳಿಸಿದರು.



ಮೈಸೂರಿನ ಬನ್ನಿಮಂಟಪದಲ್ಲಿರುವ ಓಡಿಪಿ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಕಾವೇರಿ ವನ್ಯಧಾಮದ ಡಿಸಿಎಫ್ ಎನ್.ಹೆಚ್.ಜಗನ್ನಾಥ್ ಉದ್ಘಾಟಿಸಿದರು.

ಮೈಸೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರೂ ಹಾಗೂ ಓಡಿಪಿ ಅಧ್ಯಕ್ಷರಾದ ವಂ.ಫ್ರಾನ್ಸಿಸ್ ಸೆರಾವೋ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾನವನ ದುರಾಸೆಯ ಫಲವಾಗಿ ಪ್ರಕೃತಿ ನಾಶವಾಗುತ್ತಿದೆ. ಪರಿಸರ ಸಂರಕ್ಷಣೆ ಕುರಿತಂತೆ ವೇದಿಕೆಗಳಲ್ಲಿ ಭಾಷಣ ಮಾಡುವವರೇ ಅರಣ್ಯ ಪ್ರದೇಶವನ್ನು ನಾಶ ಮಾಡುವ ಮೂಲಕ ಪರಿಸರದ ಮೇಲಿನ ನಿರ್ಲಕ್ಷ್ಯವನ್ನು ತೋರ್ಪಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದುರಾಸೆ ತ್ಯಜಿಸಿ, ಪರಿಸರ ಸಂರಕ್ಷಣೆಗೆ ಪಣ ತೊಡಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಜೈವಿಕ ತಂತ್ರಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಉಮೇಶ್ ಅವರು ‘ಪ್ರಕೃತಿಯಿಂದ ಪ್ರೇರಣೆ–ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ’ ವಿಷಯ ಕುರಿತು ಮಾತನಾಡಿ, ಪೂರ್ವಜರು ನದಿ, ಮರ, ಭೂಮಿ ಸೇರಿದಂತೆ ಪರಿಸರದಲ್ಲಿ ಸಿಗುವ ಎಲ್ಲವನ್ನೂ ಪೂಜ್ಯನೀಯ ಭಾವದಿಂದ ನೋಡುತ್ತಿದ್ದರು. ಇದರಿಂದ ಪರಿಸರಕ್ಕೆ ಹಾನಿ ಮಾಡಲು ಯಾರು ಬಯಸುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಕೃಷಿ ಭೂಮಿಯನ್ನು ಬೇರೆ ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಇದರಿಂದ ಮುಂಬರುವ ದಿನಗಳಲ್ಲಿ ಆಹಾರ ಪದಾರ್ಥಗಳ ಕೊರತೆ ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ. ಕೃಷಿಕರು ವಲಸೆ ಹೋಗುವ ದುಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾಧಿಸಿದರು.

ಓಡಿಪಿ ನಿರ್ದೇಶಕ ವಂ.ಸ್ವಾಮಿ ಟೆನ್ನಿಕುರಿಯನ್ ಮಾತನಾಡಿ, ಮನುಷ್ಯ 10 ವರ್ಷ ಜೀವಿಸಬೇಕಾದರೆ 1 ಗಿಡ ನೆಟ್ಟು ಪೋಷಿಸಬೇಕಾಗಿದೆ. 100 ವರ್ಷ ಬದುಕಬೇಕೆನ್ನುವವರು ಹತ್ತಾರು ಗಿಡ–ಮರ ಬೆಳೆಸಬೇಕಾಗುತ್ತದೆ. ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು. ಶ್ರೀಕೃಷ್ಣ ಹೇಳಿರುವ ‘ಧರ್ಮೋ ರಕ್ಷತಿ ರಕ್ಷಿತಃ’ ನಾಣ್ನುಡಿಯನ್ನು ಈಗಿನ ಕಾಲಕ್ಕೆ ವೃಕ್ಷೋ ರಕ್ಷತಿ ರಕ್ಷಿತಃ ಎಂದು ಪರಿವರ್ತಿಸಿಕೊಂಡು ಗಿಡ ನೆಡಲು ಪ್ರೇರೇಪಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕೃಷಿಯಲ್ಲಿ ಸಾಧನೆ ಮಾಡಿರುವ 28 ಮಂದಿ ರೈತರಿಗೆ ‘ಉತ್ತಮ ಕೃಷಿಕ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಓಡಿಪಿ ಸಹಾಯಕ ನಿರ್ದೇಶಕರಾದ ವಂ. ಜಾನ್ ಫರ್ನಾಂಡೀಸ್, ವಂ.ಅಶ್ವಿನ್, ಪರಿಸರ ಪ್ರೇಮಿ ರಮೇಶ್, ಗ್ರಾಮ ವಿಕಾಸ ಸ್ವ–ಸಹಾಯ ಸಂಘದ ಅಧ್ಯಕ್ಷ ಎಂ.ಬಿ.ಅನೀಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.06.2026 ಶನಿವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಶ್ರೀ ಸೂತ್ರ ಆಯುರ್ಧಾಮ:** ಮೊಣಕಾಲು ನೋವಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ ಆಸ್ಪತ್ರೆ, ಜೆಎಲ್‌ಬಿ ರಸ್ತೆ, ಬೆಳಗ್ಗೆಯಿಂದ.

■ **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ** : ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 7ಕ್ಕೆ ಶಯನೋತ್ಸವ, ಸ್ಥಳ: ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ, ಶ್ರೀ ಶ್ರೀನಿವಾಸಸ್ವಾಮಿ ದೇವಸ್ಥಾನದ ರಸ್ತೆ, ತಿಲಕ್‌ನಗರ.

■ **ಸುಯೋಗ್ ಆಸ್ಪತ್ರೆ** : ಮಕ್ಕಳ ಆರೋಗ್ಯ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಶಾರದಾ ವಿಲಾಸ ಕಾಲೇಜು** : ಎಸ್.ಆರ್.ಎಸ್. ಮೋಹನ್ ಅವರು ಬರೆದಿರುವ ಸೋಸಲೆ ರಂಗಪ್ಪ–ಜೀವನ ಚರಿತ್ರೆ ಮತ್ತು ಸಾಹಸಗಳು ಅದರ ಇಂಗ್ಲೀಷ್ ಭಾಷಾಂತರ, ಸೋಸಲೆ ರಾಜಗೋಪಾಲ ಅಯ್ಯಂಗಾರ್–ವ್ಯಕ್ತಿ ಚಿತ್ರ ಪುಸ್ತಕಗಳ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ, ಅಧ್ಯಕ್ಷತೆ : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಸ್ಥಳ: ಚಿನ್ನಸ್ವಾಮಿ ಸಭಾಂಗಣ, ಶಾರದಾ ವಿಲಾಸ ಔಷಧ ಮಹಾವಿದ್ಯಾಲಯ, ಬೆಳಗ್ಗೆ 10.30ಕ್ಕೆ.

■ **ಕಲಾಸುರುಚಿ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 935, ಕಥೆ ಹೇಳುವವರು: ಶ್ರೀಮತಿ ಪುಷ್ಪಾವತಿ ವಿ, ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೋಗಾದಿ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಸಂಗೀತ ಪ್ರಿಯರ ಬಳಗ** : ಡಾ. ರಾಜ್ ಅಮರ ಗೀತೆಗಳು, ಡಾ. ರಾಜಕುಮಾರ ಅವರು ನಟಿಸಿ ಹಾಡಿರುವ ಕನ್ನಡ ಚಿತ್ರಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಓಂ ಶ್ರೀ ಸಾಯಿರಾಂ ಸಾಂಸ್ಕೃತಿಕ ಕಲಾ ವೇದಿಕೆ** : ನನ್ನ ಗಂಡ ಬಲು ಬಂಡ ನಾಟಕೋತ್ಸವ, ಮುಖ್ಯ ಅತಿಥಿಗಳು : ಕರ್ನಾಟಕ ಸಂಗೀತ ಪರಿಷತ್, ಮೈಸೂರು ಘಟಕದ ಅಧ್ಯಕ್ಷ ಡಾ. ನಾಗರಾಜ್ ವಿ. ಬೈರಿ, ಕೆ.ಆರ್. ಆಸ್ಪತ್ರೆ ಅಧೀಕ್ಷಕ ಡಾ. ಶೋಭಾ, ಗೋಲ್ಡನ್ ಸುರೇಶ್, ಮಹೇಂದ್ರ ಮನೋತ್, ಗಂಡಸಿ ಸದಾನಂದಸ್ವಾಮಿ, ಎಂ.ಪಿ. ಮಧು, ಎಚ್. ಗುರುಸ್ವಾಮಿ, ಸ್ಥಳ: ಪುರಭವನ, ಸಂಜೆ 5ಕ್ಕೆ.

■ **ಗಾನಭಾರತೀ** : ಪ್ರೊ. ಜಿ.ಟಿ. ನಾರಾಯಣರಾಯರ ಜನ್ಮ ಶತಮಾನೋತ್ಸವ, ಜಿಟಿಎನ್ ನುಡಿನಮನ–ಡಾ. ಟಿ.ಎನ್. ನಾಗರತ್ನ, ಅಧ್ಯಕ್ಷತೆ : ಹಿರಿಯ ವಿದ್ವಾಂಸರಾದ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ವಿದುಷಿ ಪ್ರತಿಭಾ ರಾಮಸ್ವಾಮಿ ಮತ್ತು ವಿದುಷಿ ಜನನಿ ಮುರಳಿ ಅವರಿಂದ ವರಕವಿ ದ.ರಾ.ಬೇಂದ್ರೆಯವರ ಕವನಗಳನ್ನು ಆಧರಿಸಿದ ‘ಪ್ರತಿಬಿಂಬ’ ವಿಶೇಷ ನೃತ್ಯ ಕಾರ್ಯಕ್ರಮ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ, ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯ ಸಂತುಷ್ಠ ತೀರ್ಥರ ಸನ್ನಿಧಾನ:** ಅಧಿಕ ಮಾಸೋತ್ಸವ, ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾನ್ ರಾಯಚೂರು ಶೇಷಗಿರಿದಾಸ್ ಅವರಿಂದ ದಾಸಾಂಜಲಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 6.30ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್** : ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಸುಂದರಕಾಂಡ ಪ್ರವಚನ, ಸ್ಥಳ: ಶ್ರೀರಾಮ ಮಂದಿರದ ಆವರಣ, ಶ್ರೀರಾಂಪೇಟೆ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ–ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ –ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯೋಗದ ಜಗತ್ತು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಎನ್. ಸುರೇಂದ್ರ ಮತ್ತು ತಂಡದವರಿಂದ ನಾದಸ್ವರ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ಮಹಾಕಲ್ಯಾಣ, ರಚನೆ–ಎಸ್. ವಿ. ಕೃಷ್ಣಶರ್ಮಾ, ನಿರ್ಮಾಣ–ಉಮೇಶ್ ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸೊಪ್ಪು ತರಕಾರಿ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ ಮಂಡ್ಯ ತಾಲ್ಲೂಕು ಕಾಗೆಹಳ್ಳದದೊಡ್ಡಿ ಗ್ರಾಮದ ಕೃಷಿಕ ದಂಪತಿ ವಸಂತ ಮತ್ತು ಶಂಕರ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಹೃಷಿಕೇಶ್ ಗಾಗುರ್ಡೆ–ಖ್ಯಾಲ್ ಗಾಯನ

ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಮಹಿಳೆಗೆ ಸ್ಥಾನ



ಬೆಂಗಳೂರು, ಜೂ.5–ಬೆಳಗಾವಿ ರಾಜ್ಯದಲ್ಲಿಯೇ ಅತ್ಯಂತ ದೊಡ್ಡ ಜಿಲ್ಲೆಯಾಗಿದೆ. ಬೆಳಗಾವಿಗೆ ರಾಜ್ಯಸಂಪುಟದಲ್ಲಿ ಕನಿಷ್ಠ ಮೂರು ಮಂತ್ರಿ ಸ್ಥಾನ ನೀಡಬೇಕು ಎಂದು ಹೇಳಿರುವ ಮಾಜಿ ಮಂತ್ರಿ ಲಕ್ಷ್ಮಿ ಹೆಬ್ಬಾಳ್ಕರ್ ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಮಹಿಳೆಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎನ್ನುವ ವಿಶ್ವಾಸ ಇದೆ ಎಂದು ಹೇಳಿದ್ದಾರೆ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ವಿಚಾರವಾಗಿ ಪಕ್ಷದ ಹೈಕಮಾಂಡ್ ಏನು ನಿರ್ಧಾರ ತೆಗೆದುಕೊಳ್ಳುತ್ತದೋ ಅದಕ್ಕೆ ಬದ್ಧರಾಗಿದ್ದೇವೆ ಎಂದು ಹೇಳಿದರು. ರಾಜ್ಯ ಸರ್ಕಾರದಲ್ಲಿ ಯಾವುದೇ ಗೊಂದಲಗಳಿಲ್ಲ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಿರಿಯರಿದ್ದಾರೆ ಮತ್ತು ಸಮರ್ಥರಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ನಡೆಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು

ರಾಮಲಿಂಗಾರೆಡ್ಡಿ ರಾಜೀನಾಮೆ ಕುರಿತಂತೆ ಮಾತನಾಡಿದ ಅವರು ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯಗಳಿಗೆ ಬೆಲೆ ಇರುತ್ತದೆ. ಪಕ್ಷದ ಹಿರಿಯರು ಇದರ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದರು. ಬೆಳಗಾವಿ ರಾಜಕಾರಣ ತಮಗೆ ಮಂತ್ರಿ ಸ್ಥಾನ ಸಿಗಲು ಅಡ್ಡಿಯಾಗಿದೆಯಾ ಎಂಬ ಕುರಿತಂತೆ ಪ್ರತಿಕ್ರಿಯಿಸಿದ ಅವರು ಖಂಡಿತವಾಗಿಯೂ ಅಂತಹದ್ದೇನೂ ಇಲ್ಲ. 2023ರಲ್ಲಿಯೇ ಆ ಕುರಿತು ಎಲ್ಲ ತೀರ್ಮಾನ ಆಗಿದೆ. ಎಲ್ಲ ಸಮಾಧಾನದಿಂದ ಮುಂದೆ ಹೋಗ್ತಾ ಇದ್ದೇವೆ. ಬೆಳಗಾವಿ ದೊಡ್ಡ ಜಿಲ್ಲೆಯಾಗಿದ್ದು ಇನ್ನೂ ಎರಡು ಸಚಿವ ಸ್ಥಾನ ನೀಡಬೇಕೆಂದು ಬೇಡಿಕೆ ಇಟ್ಟಿದ್ದೇವೆ. ಬೆಳಗಾವಿ ಮೂರು ಜಿಲ್ಲೆಗಳಿಗೆ ಸಮನಾಗುವಷ್ಟು ದೊಡ್ಡದಿದೆ. ಹಾಗಾಗಿ ನಾವು ಹೆಚ್ಚುವರಿ ಸಚಿವ ಸ್ಥಾನ ಕೇಳಿದ್ದೇವೆ ಎಂದರು.

ಮಹಿಳೆಯರಿಗೆ ಉಚಿತ ಹೊಲಿಗೆ ತರಬೇತಿ ಶಿಬಿರ

ಮೈಸೂರು, ಜೂ.5– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಡಾ.ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘದ ವತಿಯಿಂದ ನಿರುದ್ಯೋಗಿ ಮಹಿಳೆಯರಿಗೆ ಮೂರು ತಿಂಗಳ ಉಚಿತ ಹೊಲಿಗೆ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ತರಬೇತಿಯು ಮೈಸೂರು–ತಿ.ನರಸೀ ಪುರ ರಸ್ತೆಯ ಆಲನಹಳ್ಳಿಯಲ್ಲಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್ ಕಟ್ಟಡದ ಮೊದಲನೇ ಮಹಡಿಯಲ್ಲಿ ನಡೆಯಲಿದೆ. ಆಸಕ್ತ ಮಹಿಳೆಯರು ಜೂನ್ 30 ರೊಳಗೆ ತಮ್ಮ ಹೆಸರು ನೋಂದಾಯಿಸಬೇಕು. ಮಾಹಿತಿಗೆ ಮೊ: 9739271882 (ಪ್ರೊ.ಮೋಹನಕುಮಾರಿ) ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ

(ವಿದ್ಯುತ್ ಪರಿವೀಕ್ಷಣಾಲಯ)

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,

ನಂ.2587,ನೆಲಮಹಡಿ,ಅಂಜನಾದ್ರಿ ಕಾಂಪ್ಲೆಕ್ಸ್, ಕರ್ನಾಟಕ ಬ್ಯಾಂಕ್ ಹತ್ತಿರ, ನೇತಾಜಿ ವೃತ್ತ, ವರ್ತುಲ ರಸ್ತೆ, ದಟ್ಟಗಳ್ಳಿ, ಮೈಸೂರು–570033.

ಸಂಖ್ಯೆ: ಅಮುವಿಪ (ವೈಸೂರು)/ವಾಹನಟೆಂಡರ್/2026–27

ದಿನಾಂಕ: 03/06/2026

ಟೆಂಡರ್ ಅಧಿಸೂಚನೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಸೂರು ಕಚೇರಿಯ ಅಧಿಕೃತ ಕೆಲಸಗಳಿಗಾಗಿ 4 ಸಂಖ್ಯೆ ಎಸಿ ವಾಹನ (ಕಾರು) ಮತ್ತು 2 ಸಂಖ್ಯೆ ನಾನ್ ಎಸಿ ವಾಹನ(ಕಾರು)ಗಳನ್ನು ಮಾಸಿಕ ಬಾಡಿಗೆ ಹೊರಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ಸೇವೆಯನ್ನು ಪಡೆಯಲು ದಿನಾಂಕ:03.06.2026 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಅಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:18.06.2026ರ ಮಧ್ಯಾಹ್ನ 12:30 ಗಂಟೆಯವರೆಗೆ ನಿಗಧಿಪಡಿಸಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಚೇರಿ ದೂರವಾಣಿ ಸಂಖ್ಯೆ: 0821–2463178ರ ಮೂಲಕ ಪಡೆಯಬಹುದು.

ಸಹಿ/– ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಸೂರು.

DIPR/DDMYS/262/KSMCA/187/2026-27

ನಗರಸಭಾ ಕಾರ್ಯಾಲಯ, ಹುಣಸೂರು

ಸಂ:ಹುನಕಾ:/ಆಶ್ರಯ/ಪಿಎಂಎವೈ–2.0/ಸಿ.ಆರ್/01/2026–27

ಸಾರ್ವಜನಿಕ ಪ್ರಕಟಣೆ

ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) 2.0 ಯೋಜನೆಯಡಿ ನಿವೇಶನ ರಹಿತ ಮತ್ತು ವಸತಿ ರಹಿತ ಫಲಾನುಭವಿಗಳ ಸಮೀಕ್ಷೆ ನಡೆಸಲು ದಿನಾಂಕ 30–06–2026 ರವರೆಗೆ ಅವಧಿಯನ್ನು ವಿಸ್ತರಿಸಲಾಗಿರುತ್ತದೆ. ಆದ್ದರಿಂದ ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿರುವ ಅರ್ಹ ವಸತಿ ರಹಿತ/ ನಿವೇಶನ ರಹಿತ ಫಲಾನುಭವಿಗಳು ಪ್ರಧಾನಮಂತ್ರಿ ಆವಾಸ್ (ನಗರ) 2.0 ಯೋಜನೆಯಡಿ ವಸತಿ ಸೌಕರ್ಯ ಪಡೆಯಲು ದಿನಾಂಕ 30–06–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ಅರ್ಜಿದಾರರು ಹೊಂದಿರಬೇಕಾದ ದಾಖಲೆಗಳು :

ಆಧಾರ್ ಕಾರ್ಡ್, ವಸತಿ ರಹಿತರಾದಲ್ಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು (ಹಕ್ಕುಪತ್ರ/ ಕ್ರಯಪತ್ರ/ ದಾನಪತ್ರ/ ಉಡುಗೊರೆ ಪತ್ರ/ ಖಾತಾ), ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಪಡಿತರ ಚೀಟಿ, ಬ್ಯಾಂಕ್ ಖಾತೆಯ ವಿವರ, ಮೊಬೈಲ್ ಸಂಖ್ಯೆ, ಕಟ್ಟಡ ಪರವಾನಗಿ , ಪ್ಯಾನ್ ಕಾರ್ಡ್ (ಲಭ್ಯವಿದ್ದಲ್ಲಿ ಮಾತ್ರ)

ದಿನಾಂಕ :02/06/2026

ಸಹಿ/– ಪೌರಾಯುಕ್ತರು
ನಗರಸಭೆ, ಹುಣಸೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ನಗರ, ದೇವನೂರು ಬಡಾವಣೆ, ರಾಜೀವನಗರ, 1ನೇ ಹಂತ, 3ನೇ ಕ್ರಾಸ್, ಎಂ.ಐ.ಜಿ.–1, ಮನೆ ನಂ.375 ರಲ್ಲಿ ವಾಸವಾಗಿರುವ ಲೇಟ್ ಶ್ರೀ. ಹೆಚ್.ಕೆ.ಬಾಬಾ ಜಾನ್ ರವರ ಮಗನಾದ ಶ್ರೀ ಹೆಚ್.ಬಿ. ರಿಜ್ವಾನ್ ಪಾಷ ರವರಿಂದ ಶುದ್ಧ ಕ್ರಯ ಪತ್ರದ ಮೂಲಕ ಖರೀದಿ ಮಾಡಲು ಮುಂದಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯಾದ 10 (ಹತ್ತು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣ ಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಶುದ್ಧ ಕ್ರಯ ಪತ್ರವನ್ನು ನೊಂದಣೀ ಮಾಡಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ಎನ್.ಆರ್. ಮೊಹಲ್ಲಾ, ದೇವನೂರು 2ನೇ ಹಂತ, ನಿವೇಶನ ನಂ.2568, ಇದರ ಅಳತೆ ಪೂರ್ವ ಪಶ್ಚಿಮ 9 ಮೀಟರ್, ದಕ್ಷಿಣೋತ್ತರ 6 ಮೀಟರ್ ಉಳ್ಳ ಸ್ವತ್ತಿಗೆ ಚಕ್ಕುಬಂಧಿ :– ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : 2557 ನೇ ನಂಬರ್ ಸ್ವತ್ತು, ಉತ್ತರಕ್ಕೆ : 2567 ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ : 2569 ನೇ ನಂಬರ್ ಸ್ವತ್ತು

ಸಹಿ/– ರವಿಕಿರಣ್ ಎಸ್. ಬಿ.ಎಸ್‌ಸಿ., ಎಲ್‌ಎಲ್.ಬಿ. ವಕೀಲರು, KAR No 713/2000. ಸ್ಥಳ: 1143/E, ಮೊದಲನೇ ಹಂತ, ಚಾಣಕ್ಯ ವೃತ್ತ, ಗೀತ ರಸ್ತೆ, ಚಾಮರಾಜಪುರಂ, ಮೈಸೂರು–570004 ಮೊ: 9980776068

ದಿನಾಂಕ: 04.06.2026, ಸ್ಥಳ:ಮೈಸೂರು

ಕರ್ನಾಟಕ ಸರ್ಕಾರ

ಪುರಸಭಾ ಕಾರ್ಯಾಲಯ, ಪಾಂಡವಪುರ, ಮಂಡ್ಯ ಜಿಲ್ಲೆ–571434.

ಇ–ಮೇಲ್ : itstaff ulb pandavapura@yahoo.com

ದೂರವಾಣಿ : 08236:255137

ಸಂಖ್ಯೆ:ಪುಸಕಾಪಾಂ/ಜೆ.ಇ/ನೀ.ಸ.ವಿ/ಮೋಟಾರ್ ಪಂಪ್/ವಾರ್ಷಿಕ ಟೆಂಡರ್–02/2026–27

ದಿನಾಂಕ:04.06.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪಾಂಡವಪುರ ಪುರಸಭಾ ವ್ಯಾಪ್ತಿಯ ನೀರು ಸರಬರಾಜು ವಿಭಾಗದ ವಿವಿಧ ಸಾಮರ್ಥ್ಯದ ಸಬ್ ಮರ್ಸಿಬಲ್, VTP, ಮತ್ತು ಸೆಂಟ್ರಿಫ್ಯೂಗಲ್ ಮೋಟಾರ್ ಪಂಪ್‌ಗಳು ಹಾಗೂ ಸ್ಟಾರ್ಟರ್ ಗಳಿಗೆ 'ಅವಶ್ಯಕ ಬಿಡಿಭಾಗಗಳನ್ನೊದಗಿಸಿ ಅಳವಡಿಸಿ, ಚಾಲನೆಪಡಿಸುವ ಅಂಶಗಳಿಗೆ KTPP Act 1999 & 2000ದಂತೆ, ಲೋಕೋಪಯೋಗಿ ಇಲಾಖೆ, ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಅಧಿಕೃತ SUPPLIER/DISTRUBUTOR/AGENCY/CALSS-I ELECTRICALS CONTRACTOR ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಹಾಗೂ ಪುರಸಭೆ ಪಾಂಡವಪುರ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್ ಸೈಟ್ www.pandavapuratown.mrc.gov.in ನಲ್ಲಿ ವೀಕ್ಷಿಸಬಹುದು.(ಮ್ಯಾನುಯೆಲ್ ಟೆಂಡರ್‌ಗಳನ್ನು ಸ್ವೀಕರಿಸುವುದಿಲ್ಲ). (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಸ್ವೀಕರಿಸಲು ಕೊನೆಯ ದಿನಾಂಕ:22.06.2026ರಂದು ಸಂಜೆ: 5.30 ಗಂಟೆವರೆಗೆ. (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ: 24.06.2026 ರಂದು ಬೆಳಿಗ್ಗೆ: 11.00 ಗಂಟೆಗೆ, ಸಾಧ್ಯವಾಗದಿದ್ದಲ್ಲಿ ತೆರೆಯುವ ದಿವಸ ಹಾಗೂ ಸಮಯವನ್ನು ತಿಳಿಸಲಾಗುವುದು. (3) ಟೆಂಡರ್ ಫಾರಂ ಬೆಲೆ : ಇ– ಪೋರ್ಟಲ್‌ನಲ್ಲಿರುವಂತೆ. ಪ್ಯಾ.ಸಂ : 1. ಇ–ಪೋರ್ಟಲ್ ನಲ್ಲಿರುವಂತೆ ಟೆಂಡರ್ ಸಂಖ್ಯೆ : DMA/2026-27/WS/WORK_INDENT_59069. ಟೆಂಡರ್ ಮೊತ್ತ (ರೂ ಲಕ್ಷಗಳಲ್ಲಿ) : 20.33. ಇಎಂಡಿ ಮೊತ್ತ ರೂ.ಗಳಲ್ಲಿ : 50,000/–. ಗುತ್ತಿಗೆದಾರರ ದರ್ಜೆ : SUPPLIER/DISTRUBUT OR/AGENCY/CALSS I ELECTRICALS CONTRACTOR. ನಿರ್ವಹಣಾ ಅವಧಿ : 12 ತಿಂಗಳು

ಸಹಿ/–ಮುಖ್ಯಾಧಿಕಾರಿ, ಪುರಸಭೆ, ಪಾಂಡವಪುರ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿಎ/174/2026–27

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ. ರಸ್ತೆ, ಮೈಸೂರು

ಸಂಖ್ಯೆ: ಮೈಅಪ್ರಾ/ವಿ.ತ–5ಬಿ/2026–27

ದಿನಾಂಕ: 25.05.2026

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ವತಿಯಿಂದ ಶ್ರೀ.ಆರ್. ಗೋಪಾಲ್ ರವರಿಗೆ ದಿನಾಂಕ:23.05.1981 ರಂದು ಬನ್ನಿಮಂಟಪ "ಬಿ" ಬಡಾವಣೆಯ ನಿವೇಶನ ಸಂಖ್ಯೆ: 990 ಮಂಜೂರಾಗಿದ್ದು, ದಿ: 06.06.1984 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಮಂಜೂರಾತಿದಾರರಾದ ಶ್ರೀ.ಆರ್. ಗೋಪಾಲ್. ರವರು 4ನೇ ಪುಸ್ತಕದ 3ನೇ ಸಂಪುಟದಲ್ಲಿ 322ನೇ ಪುಟದಲ್ಲಿ 731ನೇ ನಂಬರಾಗಿ ದಿನಾಂಕ: 05.03.1992 ರಂದು ಶ್ರೀ. ಕೆ. ಶಫೀ ಅಹಮ್ಮದ್ ಖಾನ್ ರವರಿಗೆ ನೊಂದಾಯಿತ ಜಿಪಿಎ ನೀಡಿರುತ್ತಾರೆ.

ನಂತರ ಜಿಪಿಎ ದಾರರಾದ ಶ್ರೀ.ಕೆ. ಶಫೀ ಅಹಮ್ಮದ್ ಖಾನ್ ರವರು 1ನೇ ಪುಸ್ತಕದ 1123ನೇ ಸಂಪುಟದಲ್ಲಿ 154–160ನೇ ಪುಟದಲ್ಲಿ 3622ನೇ ನಂಬರಾಗಿ ದಿ: 15.09.1992ರಂದು ಶ್ರೀ. ಸತ್ಯನಾರಾಯಣ ಬಿನ್ ಶ್ರೀ. ಪರಮೇಶ್ವರ ದಾಸ್ ರವರಿಗೆ ನೊಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಅದರಂತೆ ಶ್ರೀ. ಸತ್ಯನಾರಾಯಣ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ–5ಬಿ
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಮೈಸೂರು ನಿವಾಸಿಯಾದ ಶ್ರೀ ಮಹೇಶ್ ಇವರ ಮಗ, ಸುಮಾರು 32 ವರ್ಷ ವಯಸ್ಸಿನ **ಶ್ರೀ ಕಿರಣ್.ಎಮ್.** (ವಿಳಾಸ: #9, 1ನೇ ಫ್ಲೋರ್, 3ನೇ ಬ್ಲಾಕ್, ಶ್ರೀರಾಮಪುರ, ಕುವೆಂಪುನಗರ, ಎಸ್.ಬಿ.ಎಂ. ಕಾಲೋನಿ, ಮೈಸೂರು; ಮೊಬೈಲ್: 9666259159, 8197983321) ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ನನ್ನ ಕಕ್ಷಿದಾರರಾದ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ತೈಲೂರು ಬ್ಯಾಡರಹಳ್ಳಿ ನಿವಾಸಿಯಾದ ಶ್ರೀ ಮರಿಸ್ವಾಮಿ ಇವರ ಮಗ **ಶ್ರೀ ಕಿರಣ್ ಕುಮಾರ್.ಬಿ.ಎಂ.** ಇವರಿಂದ ನೀವು ವ್ಯವಹಾರದ ಉದ್ದೇಶಕ್ಕಾಗಿ ದಿನಾಂಕ: 10/01/2026 ರಂದು ಪಡೆದಿದ್ದ ಕೈಗಡ ಸಾಲದ ಮೊತ್ತ ರೂ. 13,00,000/– (ಹದಿಮೂರು ಲಕ್ಷ ರೂಪಾಯಿಗಳು) ಗಳ ಮರುಪಾವತಿಗಾಗಿ ನಿಮ್ಮ ಖಾತೆಗೆ ಸಂಬಂಧಿಸಿದ ಕೆಳಗಿನ ಚೆಕ್ಕನ್ನು ನೀಡಿರುತ್ತೀರಿ:

* ಬ್ಯಾಂಕ್ ವಿವರ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI), ವಿಶ್ವೇಶ್ವರಯ್ಯ ಲೇಔಟ್ ಶಾಖೆ, ಬೆಂಗಳೂರು.
* ಖಾತೆ ಸಂಖ್ಯೆ: 43254071289 (ಖಾತೆದಾರರು: ಮಗೆಂಟ ಟ್ರಾವೆಲರ್ಸ್)
* ಚೆಕ್ ಸಂಖ್ಯೆ ಮತ್ತು ದಿನಾಂಕ: ಸಂಖ್ಯೆ: 642606, ದಿನಾಂಕ: 13–03–2026

ಸದರಿ ಚೆಕ್ಕನ್ನು ನನ್ನ ಕಕ್ಷಿದಾರರು ನಗದೀಕರಣಕ್ಕಾಗಿ ದಿನಾಂಕ: 24–04–2026 ರಂದು ಕೆನರಾ ಬ್ಯಾಂಕ್ (MMJC ಶಾಖೆ, ಮೈಸೂರು) ನಲ್ಲಿ ಹಾಜರುಪಡಿಸಿದಾಗ, ಅದು ದಿನಾಂಕ: 27–04–2026 ರಂದು "ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" (Funds Insufficient) ಎಂಬ ಕಾರಣದೊಂದಿಗೆ ಅಮಾನ್ಯಗೊಂಡು (Bounce) ಹಿಂತಿರುಗಿದೆ.

ಈ ಸಂಬಂಧ ನನ್ನ ಕಕ್ಷಿದಾರರ ಪರವಾಗಿ ದಿನಾಂಕ: 09–05–2026 ರಂದು ನಿಮಗೆ ನೋಂದಾಯಿತ ಅಂಚೆ ಮೂಲಕ ಕಾನೂನು ನೋಟೀಸ್ ಕಳುಹಿಸಲಾಗಿದ್ದು, ನೀವು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು, ಸಂಪರ್ಕಕ್ಕೆ ಸಿಗದೆ ತಲೆಮರೆಸಿಕೊಂಡಿರುತ್ತೀರಿ.

ಆದ್ದರಿಂದ, ಈ ಪತ್ರಿಕಾ ಪ್ರಕಟಣೆ ಹೊರಬಿದ್ದ 7 (ಏಳು) ದಿನಗಳ ಒಳಗಾಗಿ ನೀವು ನನ್ನ ಕಕ್ಷಿದಾರರಿಗೆ ಬಾಕಿ ಇರುವ ಚೆಕ್ ಮೊತ್ತ ರೂ. 13,00,000/– ಹಾಗೂ ನೋಟೀಸ್ ವೆಚ್ಚವನ್ನು ಪಾವತಿಸತಕ್ಕದ್ದು. ತಪ್ಪಿದಲ್ಲಿ, ನಿಮ್ಮ ವಿರುದ್ಧ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆ ಸೆಕ್ಷನ್ 138 ಹಾಗೂ ಐ.ಪಿ.ಸಿ ಸೆಕ್ಷನ್ 420 ರ ಅಡಿಯಲ್ಲಿ ಸೂಕ್ತ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು. ಅದರಿಂದಾಗುವ ಎಲ್ಲಾ ಖರ್ಚು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರಾಗಿರುತ್ತೀರಿ.

ಸಹಿ/– ಪ್ರದೀಪ್ ಕುಮಾರ್.ಎಸ್. (M.Com, L.L.B)
ವಕೀಲರು, ಗಣೇಶ್ ಬಿಲ್ಡಿಂಗ್, ಎ.ಪಿ.ಎಸ್. ಲಾಡ್ಜ್ ಎದುರು, ಡಾ. ಅಂಬೇಡ್ಕರ್ ರಸ್ತೆ, ಕೊಳ್ಳೇಗಾಲ ಟೌನ್, ಚಾಮರಾಜನಗರ ಜಿಲ್ಲೆ. ಮೊಬೈಲ್: 6361084303

ದಿನಾಂಕ: 04–06–2026
ಸ್ಥಳ: ಕೊಳ್ಳೇಗಾಲ

ನಕ್ಕರೆ ಅದೇ ಸ್ವರ್ಗ

ಸರ್ದಾರ್‌ಜಿ : ರಾತ್ರಿಯೆಲ್ಲ ಚಾರ್ಜ್‌ಗೆ ಹಾಕಿದ್ದೆ. ಚಾರ್ಜ್ ಆಗಿಲ್ಲ ಕಣೇ.
ಹೆಂಡ್ತಿ : ರಾತ್ರಿಯೆಲ್ಲ ಚಾರ್ಜ್‌ಗೆ ಹಾಕಿದ್ರೆ ಬ್ಯಾಟರಿ ಸುಟ್ಹೋಗಲ್ವಾ?
ಸರ್ದಾರ್‌ಜಿ : ದಡ್ಡಿ ಅದಕ್ಕೆ ನಾನು ಬ್ಯಾಟರಿ ತೆಗೆದೇ ಮೊಬೈಲ್ ಚಾರ್ಜ್‌ಗೆ ಹಾಕಿದ್ದೆ.!

ಮೈಸೂರು ಮಿತ್ರ

ಶನಿವಾರ, ಜೂನ್ 6, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ತಿದ್ದದೆ ತೀಡದೆ ಅಂದ ಕಾಣದು ಗೊಂಬೆ.
ಬಿತ್ತದೆ ಕೆತ್ತದೆ ಬೆಳೆಯ ಬೆಳೆಯದು ಭೂಮಿ.
ನಿಂದನೆಗೆ, ನೋವಿಗೆ ಅಳುಕಿದರೆ ರೂಪಗೊಳ್ಳದು ಬದುಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಶಸ್ತ್ರದಿಂದಾದ ಗಾಯ ಮಾಯುತ್ತದೆ, ನಾಲಿಗೆಯಿಂದಾದ ಗಾಯ ಮಾಯುವುದಿಲ್ಲ.

ನಿಮ್ಮ ಪತ್ರಗಳು

ಗಿಡ ನೆಟ್ಟರಷ್ಟೇ ಸಾಲದು ಪೋಷಣೆ ಮಾಡಬೇಕಿದೆ

ಮಾನ್ಯರೆ,

ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆ ನಿಮಿತ್ತ ರಾಜ್ಯದ ಶಾಲಾ-ಕಾಲೇಜು, ಸರ್ಕಾರಿ ಕಚೇರಿಗಳು, ಸಂಘ ಸಂಸ್ಥೆಗಳು ಸೇರಿದಂತೆ ವಿವಿ ಧೆಡೆ ಹಲವಾರು ಮಂದಿ ಸಸಿಗಳನ್ನು ನೆಟ್ಟು ಸೆಲ್ಫಿಯೊಂದಿಗೆ ಸಂಭ್ರಮಾಚರಣೆಯನ್ನು ಮಾಡುತ್ತಿದ್ದಾರೆ. ಪರಿಸರ ದಿನದಂದು ಸಸಿಗಳನ್ನು ನೆಟ್ಟು ಅವುಗಳ ಜೊತೆ ಫೋಟೋ, ಸೆಲ್ಫಿ ತೆಗೆಸಿಕೊಂಡು ವಾಟ್ಸಪ್ ಸ್ಟೇಟಸ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಅವುಗಳನ್ನು ಅಪ್ಲೋಡ್ ಮಾಡುವುದು ಎಲ್ಲವೂ ಸಂತೋಷಕರ ವಿಚಾರವೇ ಆಗಿದೆ.

ಆದರೆ ಕೇವಲ ಸೆಲ್ಫಿ ಹಾಗೂ ಫೋಟೋಗೋಸ್ಕರ ಸಸಿಗಳನ್ನು ನೆಡುವ, ಪ್ರಚಾರ ಪಡೆಯುವ ಗೀಳು ಹಲವರಲ್ಲಿದೆ. ಕೆಲವರು ಗಿಡ ನೆಟ್ಟು ಮಾರನೆಯ ದಿನವೇ ಅದನ್ನು ಮರೆತು ಬಿಡುತ್ತಾರೆ. ಗಿಡ ನೆಡುವುದು ಕೇವಲ ಪರಿಸರ ದಿನಾ ಚರಣೆಗಷ್ಟೇ ಸೀಮಿತವಾಗಿರದೆ, ತಾವು ನೆಟ್ಟ ಗಿಡಕ್ಕೆ ಒಂದಷ್ಟು ತಿಂಗಳು ನೀರೆರೆಯುವ, ಪೋಷಿಸುವ ಮತ್ತು ಕಾಪಾಡುವ ಪ್ರಕ್ರಿಯೆಯನ್ನು ನಿರಂತರವಾಗಿ ಮಾಡಿದ್ದೇ ಆದರೆ ತಾವು ಪರಿಸರ ದಿನದಂದು ಗಿಡ ನೆಟ್ಟದ್ದಕ್ಕೂ ಒಂದು ಅರ್ಥ ಕಲ್ಪಿಸಿದಂತೆ. ಗಿಡ ನೆಡುವ ಸಂಭ್ರಮದಲ್ಲಿ ಇದ್ದ ಹುಮ್ಮಸ್ಸು ಸಡಗರ ಸಂಭ್ರಮವನ್ನು, ಗಿಡದ ಬೆಳವಣಿಗೆಯ ಉದ್ದಕ್ಕೂ ತೋರುವುದು ಉತ್ತಮ. ಏಕೆಂದರೆ ಪ್ರತಿಯೊಂದು ಗಿಡಕ್ಕೂ ಪೋಷಣೆಯ ರಕ್ಷಣೆಯ ಅವಶ್ಯಕತೆ ಇದೆ. ಇದನ್ನು ಗಿಡ ನೆಟ್ಟ ವ್ಯಕ್ತಿಗಳು ಅರ್ಥ ಮಾಡಿಕೊಂಡು ಒಂದಷ್ಟು ತಿಂಗಳ ಮಟ್ಟಿಗಾದರೂ ಗಿಡಗಳನ್ನು ಆರೈಕೆ ಮಾಡಿದರೆ ಪ್ರತಿ ವರ್ಷ ಜೂನ್ ಐದರಂದು ನಾವು ಮಾಡುವ ವಿಶ್ವ ಪರಿಸರ ದಿನಾಚರಣೆಯ ಆಚರಣೆ ಸಾರ್ಥಕವಾದಂತೆ!

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕೆಇಎಸ್ ಮುಖ್ಯ ಶಿಕ್ಷಕರ ಹುದ್ದೆಗೆ ಪರೀಕ್ಷೆ ನಡೆಸಿ

ಮಾನ್ಯರೆ,

ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆಗಳನ್ನು ತುಂಬಲು ಕಳೆದ 10 ವರ್ಷಗಳ ಹಿಂದೆ ಕೆಇಎಸ್ (ಕರ್ನಾಟಕ ಶಿಕ್ಷಣ ಸೇವೆ) ಪರೀಕ್ಷೆ ನಡೆಸುತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಇದರ ವಾಸನೆಯೆ ಇಲ್ಲವಾಗಿದೆ.

ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರನ್ನು ಪ್ರೌಶಾಲೆಯ ಮುಖ್ಯ ಶಿಕ್ಷಕರ ಹುದ್ದೆಗೆ ನೇಮಕ ಮಾಡಲಾಗುತಿತ್ತು. ನಂತರ ಅವರು ಬಿಇಓ, ಡಿಡಿಪಿಯು, ಜೆಡಿ ಆಗುತ್ತಿದ್ದರು. ಆದರೆ ಈಗ ಈ ಪ್ರಕ್ರಿಯೆಗೆ ಗ್ರಹಣ ಹಿಡಿದಿದೆ. ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಮತ್ತು ಶಿಕ್ಷಣ ಪದವಿ ಪಡೆದವರು ಈ ಪರೀಕ್ಷೆ ಬರೆದು ಆಯ್ಕೆಯಾಗುತ್ತಿದ್ದರು.

ಶೇ.50 ರಷ್ಟು ಹುದ್ದೆಗಳು ಸೇವೆಯಲ್ಲಿರುವವರಿಗೆ ಉಳಿದ ಶೇ,50 ಹೊರಗಿನವರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತಿತ್ತು. ಇದರಿಂದ ಸಾಕಷ್ಟು ಯುವಕರು ತಮ್ಮ ಕನಸು ನನಸು ಮಾಡಿಕೊಳ್ಳಲು,ಶಿಕ್ಷಣ ಇಲಾಖೆಯ ಆಡಳಿತ ಸೇವೆ ಸೇರಲು ಅವಕಾಶವಿತ್ತು.

ಶಾಲೆಯ ಆಡಳಿತ ಸುಧಾರಣೆ, ಗುಣಮಟ್ಟ ಭೋದನೆಗೆ, ಸುಗಮ ಶೈಕ್ಷಣಿಕ ವರ್ಷದ ನಿರ್ವಹಣೆಗೆ ಈ ಹುದ್ದೆಯ ನೇಮಕಾತಿ ಅವಕಾಶ ಮಾಡಿಕೊಟ್ಟಿತ್ತು.

ಆದರೆ ಶಿಕ್ಷಣ ಇಲಾಖೆಯು ಮುಖ್ಯ ಶಿಕ್ಷಕರ ಹುದ್ದೆಗಾಗಿ ನಡೆಸುತಿದ್ದ ಕೆಇಎಸ್ ಪರೀಕ್ಷೆ ನಡೆಸುವುದನ್ನು ಇತ್ತೀಚಿನ ವರ್ಷದಲ್ಲಿ ಮರೆತಿರುವುದು, ಈ ಬಗ್ಗೆ ಕೆಪಿಎಸ್‌ಸಿ ಕೂಡ ಮುಂದಾಗದಿರುವುದು ವಿಪರ್ಯಾಸ. ಇದರಿಂದ ಕಳೆದ ಹತ್ತು ವರ್ಷಗಳಿಂದ ನೇಮಕಾತಿ ನೆನಗುದಿಗೆ ಬಿದ್ದಿದೆ.

ಶಿಕ್ಷಣ ಸಂಸ್ಥೆಯೊಂದು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಆಡಳಿತಾತ್ಮಕ ಹುದ್ದೆ ಅಗತ್ಯವಿದೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮುಖ್ಯ ಶಿಕ್ಷಕ, ಪ್ರಾಂಶುಪಾಲ, ಶಿಕ್ಷಕ, ಉಪನ್ಯಾಸಕ ಹುದ್ದೆಯನ್ನು ನಿಯಮಿತಗೊಳಿಸಿ ನೇಮಕ ಮಾಡುವುದರಿಂದ ಸರ್ಕಾರಿ ಶಾಲಾ ಕಾಲೇಜಿಗೆ ಸೇರುವ ಮಕ್ಕಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇದರಿಂದ ಇರುವ ಶಿಕ್ಷಕರೇ ಆಡಳಿತದ ಜವಾಬ್ದಾರಿಯೊಂದಿಗೆ ಭೋದನೆಗೂ ಗಮನ ನೀಡುವದು ಕಷ್ಟವಿದೆ.

ಆದ್ದರಿಂದ ಶಿಕ್ಷಣ ಇಲಾಖೆ ಇನ್ನಾದರೂ ಎಚ್ಚೆತ್ತು ಕೆಇಎಸ್ ಪರೀಕ್ಷೆಯನ್ನು ಮತ್ತೆ ನಡೆಸುವ ಮೂಲಕ ಸಾವಿರಾರು ಸಂಖ್ಯೆಯಲ್ಲಿರುವ ಹುದ್ದೆಯ ಆಕಾಂಕ್ಷಿತರಿಗೆ ಅನುಕೂಲ ಮಾಡುವಂತಾಗಲಿ. ಆ ಮೂಲಕ ಸರ್ಕಾರಿ ಶಾಲೆ ಮತ್ತು ಕಾಲೇಜನ್ನು ಬಲವರ್ಧನೆಗೊಳಿಸಿ ಉಳಿಸಿ ಬೆಳೆಸುವಂತಹ ಕಾರ್ಯ ಆಗಲಿ.

–ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್.ಪೇಟೆ.

ಮೈಸೂರು ವಿವಿಯ ಶುಲ್ಕ ಹೆಚ್ಚಳ; ಪ್ರಮಾಣಪತ್ರ ವಿತರಣೆಯ ಸಮಸ್ಯೆಗಳು

ಮಾನ್ಯರೆ,

ಮೈಸೂರು ವಿಶ್ವವಿದ್ಯಾಲಯವು ಪರೀಕ್ಷಾ ಶುಲ್ಕ (Exam Fee) ಮತ್ತು ಕಾನ್ವೊಕೇಶನ್ ಪ್ರಮಾಣಪತ್ರ (Convocation Certificate) ಶುಲ್ಕವನ್ನು ಹೆಚ್ಚಿಸಿದೆ ಎಂಬ ಮಾಹಿತಿ ವಿದ್ಯಾರ್ಥಿಗಳಿಂದ ಲಭ್ಯವಾಗಿದೆ. ಈ ಶುಲ್ಕ ಹೆಚ್ಚಳದಿಂದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗಿದೆ ಎಂದು ಹಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ಗ್ರಾಮೀಣ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಈ ಹೆಚ್ಚುವರಿ ವೆಚ್ಚ ಭರಿಸುವುದು ಕಷ್ಟಕರವಾಗಿದೆ.

ಇದರ ಜೊತೆಗೆ, ಪರೀಕ್ಷೆಯಲ್ಲಿ ಉತ್ತೀರ್ಣರಾದ ಕೆಲವು ವಿದ್ಯಾರ್ಥಿಗಳಿಗೆ ಅಂಕಪಟ್ಟಿ (Marks Card) ಮತ್ತು ಕಾನ್ವೊಕೇಶನ್ ಪ್ರಮಾಣಪತ್ರಗಳು ಸಮಯಕ್ಕೆ ಸಿಗುತ್ತಿಲ್ಲ ಎಂಬ ದೂರುಗಳೂ ಕೇಳಿಬಂದಿವೆ. ಅಗತ್ಯ ದಾಖಲೆಗಳಿಲ್ಲದೆ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಅರ್ಜಿ ಸಲ್ಲಿಸಲು, ಉದ್ಯೋಗಗಳಿಗೆ ಅರ್ಜಿ ಹಾಕಲು ಹಾಗೂ ಇತರೆ ಶೈಕ್ಷಣಿಕ ಅವಕಾಶಗಳನ್ನು ಪಡೆಯಲು ತೊಂದರೆ ಅನುಭವಿಸುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಅಭಿಪ್ರಾಯದ ಪ್ರಕಾರ, ಶುಲ್ಕಗಳನ್ನು ಹೆಚ್ಚಿಸುವ ಬದಲು ವಿದ್ಯಾರ್ಥಿ ಸ್ನೇಹಿ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳನ್ನು ನಿಗದಿತ ಸಮಯದಲ್ಲಿ ವಿತರಿಸಬೇಕು. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಿಳಂಬವಿಲ್ಲದೆ ನೀಡುವುದು ಅತ್ಯಂತ ಮುಖ್ಯವಾಗಿದೆ.

ಆದಾಗ್ಯೂ, ಅಂಕಪಟ್ಟಿ ಅಥವಾ ಕಾನ್ವೊಕೇಶನ್ ಪ್ರಮಾಣಪತ್ರಗಳನ್ನು ಕೊಡುತ್ತಿಲ್ಲ ಎಂಬ ವಿಷಯವನ್ನು ಅಧಿಕೃತವಾಗಿ ದೃಢೀಕರಿಸಿದ ಮಾಹಿತಿ ಇಲ್ಲ. ಆದ್ದರಿಂದ ಇದನ್ನು ವಿದ್ಯಾರ್ಥಿಗಳಿಂದ ದೂರುಗಳು ಮತ್ತು ಆರೋಪಗಳು ಕೇಳಿಬಂದಿವೆ ಎಂಬ ರೀತಿಯಲ್ಲಿ ಉಲ್ಲೇಖಿಸುವುದು ಸೂಕ್ತ.

–ನಾಗರತ್ನ ಪುರುಷೋತ್ತಮ್, ಮೈಸೂರು.

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಸಮಾಜವ ಟೀಕಿಸುವ ಬದಲು ತಿದ್ದುವ ಕೆಲಸವಾಗಲಿ...




ಎಂ.ಕೆ. ಸ್ಟಾಲಿನ್



ಉದಯನಿಧಿ



ದುರ್ಗಾ ಸ್ಟಾಲಿನ್



ರಾಜಾರಾಂ ಮೋಹನ್‌ರಾಯ್



ಎಲಿಜಬೆತ್ ನೋಬ್ಲ್

ನಮ್ಮ ದೇಶದಲ್ಲಿ ಹಿಂದಿನಿಂದಲೂ ಒಂದು ಕೆಟ್ಟ ಪರಂಪರೆ ಇದೆ. ಅದು ಈ ದೇಶವನ್ನು, ಈ ದೇಶದ ಧರ್ಮವನ್ನು, ಈ ದೇಶದ ಆಚರಣೆಗಳನ್ನು ಟೀಕಿಸುವುದು. ಹೀಗೆ ಮಾಡಿದರೆ ನಾವು ದೊಡ್ಡವರಾಗುತ್ತೇವೆ, ನಮಗೆ ಹೆಚ್ಚಿನ ಪ್ರಚಾರ ಸಿಗುತ್ತದೆ ಎಂಬ ಭಾವನೆಯಿಂದ ಇಂತಹ ಕೆಲಸವನ್ನು ಮಾಡಲಾಗುತ್ತದೆ. ಇದರ ಮುಂದು ವರೆದ ಭಾಗವಾಗಿ ತಮಿಳುನಾಡಿನ ಈಗಿನ ವಿರೋಧ ಪಕ್ಷದ ನಾಯಕ ಉದಯ ನಿಧಿ ಸ್ಟಾಲಿನ್ ಸನಾತನ ಧರ್ಮದ ವಿರುದ್ಧ ನೀಡಿದ್ದ ಹೇಳಿಕೆ. ಸನಾತನ ಧರ್ಮವನ್ನು ಅಳಿಸಿಹಾಕಬೇಕು ಎಂಬುದು ಅವರ ಹೇಳಿಕೆ. ಅದು ವಿವಾದವಾದದ್ದು ಎಲ್ಲರಿಗೂ ತಿಳಿದಿದೆ. ಅದರ ಪರಿಣಾಮ ಇತ್ತೀಚೆಗೆ ಕರ್ನಾಟಕಕ್ಕೆ, ನಮ್ಮ ಮಡಿಕೇರಿಗೆ ಬಂದಿದ್ದ ಅಲ್ಲಿನ ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಜನರ ಪ್ರತಿಭಟನೆಯನ್ನು ಎದುರಿಸಬೇಕಾಯಿತು ಎಂಬ ಸುದ್ದಿ.

ಇಂತಹ ಹೇಳಿಕೆಯನ್ನು ನೀಡುವಾಗ ಒಂದಷ್ಟು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಶಾಂತವಾದ ಸಮಾಜವನ್ನು ಉದ್ರೇಕಗೊಳಿಸುವಂತಹ ಹೇಳಿಕೆಗಳನ್ನು ನೀಡಬಾರದು ಎಂಬುದು ಒಂದು ಸಾಮಾಜಿಕ ಪ್ರಜ್ಞೆ. ನನಗೆ ಒಂದು ವಿಷಯದ ಬಗ್ಗೆ ನಂಬಿಕೆಯಿಲ್ಲ, ಎಂದರೆ ಅದನ್ನು ಇತರರೂ ಒಪ್ಪಿಕೊಳ್ಳಬೇಕು ಎಂದು ಆಗ್ರಹಿಸುವುದು ಸೂಕ್ತವಾದುದಲ್ಲ.

ಭಾರತದ ಹಿಂದೂ ಧರ್ಮ ಸನಾತನ ಧರ್ಮವೇ. ಇದಕ್ಕೆ ಹತ್ತಾರು ಸಾವಿರ ವರ್ಷಗಳ ಇತಿಹಾಸವಿದೆ. ಈ ಹಿಂದೆ ಯಾವುದೇ ಸಂಪರ್ಕ ವ್ಯವಸ್ಥೆ ಇರಲಿಲ್ಲ. ಜನಸಂಖ್ಯೆಯೂ ಕಡಿಮೆ ಇತ್ತು. ಒಂದಷ್ಟು ಜನರು ಒಟ್ಟಾಗಿ ಕೆಲವೆಡೆ ವಾಸವಿರುತ್ತಿದ್ದರು. ಅವರು ತಮ್ಮ ಜೀವನಕ್ಕೆ ತಮ್ಮದೇ ಆದ ರೀತಿನೀತಿಗಳನ್ನು ಮಾಡಿಕೊಂಡಿದ್ದರು. ಅವರ ಆಹಾರ-ವಿಹಾರ, ಅವರ ಆಚಾರ-ವಿಚಾರ ಅವರ ಮಟ್ಟಿಗೆ ಸೀಮಿತವಾಗಿತ್ತು. ಅದು ತಪ್ಪು ಎಂದಲ್ಲ. ಅವರಿಗೆ ತೋಚಿದ್ದನ್ನು ಅವರು ಆಚರಣೆಯಲ್ಲಿ ತಂದುಕೊಂಡಿದ್ದರು. ಅದರಲ್ಲಿ ಅನೇಕ ಆಚರಣೆಗಳು ತಪ್ಪಾಗಿಯೂ ಇದ್ದುವು. ಆದರೆ ಅವರ ಗುಂಪಿಗೆ ಅದು ಸರಿ ಎನಿಸಿದ್ದಿರಬಹುದು. ಹಾಗಾಗಿ ಆಚರಿಸುತ್ತಿದ್ದರು. ಆದರೆ ಕಳೆದೆರಡು ಶತಮಾನಗಳಲ್ಲಿ ನಮ್ಮ ಸಾರಿಗೆ ವ್ಯವಸ್ಥೆ ಸುಧಾರಿಸಿತು. ಜನರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಲು ಸಾಧ್ಯವಾಯಿತು. ಹಾಗೆ ಇನ್ನೊಂದು ಕಡೆಗೆ ಹೋದಾಗ ಅಲ್ಲಿನ ಜನರು ಆಚರಿಸುತ್ತಿದ್ದ ಆಚರಣೆಗಳನ್ನು ಅವರು ಕಂಡರು. ಅದನ್ನು ತಮ್ಮ ಆಚರಣೆಗಳ ಜೊತೆಗೆ ಹೋಲಿಕೆ ಮಾಡಿಕೊಂಡರು. ಆಗ ಸರಿ ಯಾವುದು, ತಪ್ಪು ಯಾವುದು ಎಂಬ ಅರಿವಾಗತೊಡಗಿತು. ಅದನ್ನು ಕೆಲವು ಮುಖಂಡರು ಸರಿಪಡಿಸಲೂ ಪ್ರಯತ್ನಿಸಿ ಯಶಸ್ವಿಯೂ ಆದರು. ಹಾಗೆಂದು ತಾವು ಆಚರಿಸುತ್ತಿದ್ದುದೇ ಸರಿ ಎಂದು ವಾದ ಮಾಡುವುದು ಸಮಂಜಸವಾಗುವುದಿಲ್ಲ. ಸುಧಾರಣೆ ಎನ್ನುವುದು ಇತರೆಡೆ ಕಂಡ ದೃಶ್ಯಗಳನ್ನು, ಆಚರಣೆಗಳನ್ನು ಕಂಡಾಗ ಸರಿಪಡಿಸಿಕೊಳ್ಳಬೇಕು ಎಂಬ ಭಾವನೆ ಮೂಡುವುದರಿಂದ ಆಗುತ್ತದೆ.

ಈಗಂತೂ ಆಧುನಿಕ ವಾಹನಗಳು ಇರುವುದರಿಂದ ವಿಶ್ವದ ಯಾವುದೇ ಭಾಗಕ್ಕೂ ಸುಲಭವಾಗಿ ಸಂಚಾರ ಮಾಡಬಹುದಾಗಿದೆ. ಹಾಗೆ ಸಂಚರಿಸುವಾಗ ಅಲ್ಲಿನ ಆಚರಣೆ, ಅಲ್ಲಿನ ನಾಗರಿಕತೆ ಇವುಗಳನ್ನು ನಾವು ಕಾಣಬಹುದು. ಅದರಲ್ಲಿ ಕೆಲವು ನಮಗೆ ವಿಶೇಷ ಎನಿಸಬಹುದು. ನಾವೂ ಅದನ್ನು ಅಳವಡಿಸಿಕೊಳ್ಳಬಹುದು ಎಂಬ ಭಾವನೆಯೂ ಬರಬಹುದು. ಇದೂ ತಪ್ಪಲ್ಲ. ಹಾಗಾಗಿ ಇಂದು ನಾವು ನಮ್ಮತನಕ್ಕಿಂತ ಇತರೆಡೆ ಕಾಣುವುದನ್ನು ಚೆನ್ನ ಎಂದು ಹೆಚ್ಚಾಗಿ ಒಪ್ಪಿಕೊಳ್ಳುತ್ತಿದ್ದೇವೆ. ಇದೂ ತಪ್ಪಲ್ಲ. ಆದರೆ ನಾವು ಕಂಡಿದ್ದೇ ಸರಿ, ಇದು ನಮ್ಮ ದೇಶದಲ್ಲಿ, ಧರ್ಮದಲ್ಲಿ ಆಚರಣೆಯಲ್ಲಿ ಇಲ್ಲ. ಆದುದರಿಂದ ನಮ್ಮ ಧರ್ಮ, ದೇಶ ಸರಿಯಲ್ಲ ಎಂಬ ಹೇಳಿಕೆ ನೀಡುವುದು ಸೂಕ್ತ ಎನಿಸುವುದಿಲ್ಲ.

> **ದೇಶದ ಇತಿಹಾಸ ಗಮನಿಸಿದಾಗ ಇಂತಹ ಅನೇಕ ಪುರಾತನ ಆಚರಣೆಗಳು ಸರಿಯಲ್ಲ, ಅದು ಬದಲಾಗಬೇಕು ಎಂದು ಹೋರಾಡಿದವರ ದೊಡ್ಡ ಪಟ್ಟಿಯನ್ನು ನಾವು ಮಾಡಬಹುದು. ಅವರೆಲ್ಲಾ ಇಲ್ಲಿಯ ಆಚರಣೆಯ ಕೆಲವು ವಿಧಾನ ಸರಿಯಲ್ಲ ಅದು ಬದಲಾಗಬೇಕು ಎಂದು ಹೋರಾಡಿದರೇ ವಿನಃ, ಇಡೀ ಧರ್ಮ ಸಂಸ್ಕೃತಿಯೇ ತಪ್ಪು ಎಂದು ಖಂಡಿಸಲಿಲ್ಲ ಅಥವಾ ಅದರಿಂದ ಹೊರಹೋಗಲೂ ಇಲ್ಲ. ಬಹಳ ಹಿಂದೆ ಆಚರಣೆಗೆ ತಂದ ಪದ್ಧತಿ ಇಂದಿಗೆ ಹೊಂದುವುದಿಲ್ಲ, ಅದು ಈ ಕಾಲಕ್ಕೆ ತಕ್ಕಹಾಗೆ ಬದಲಾಗಬೇಕು ಎಂದು ಹೇಳುವುದು ಸೂಕ್ತವೇ ಆದರೂ, ಅದನ್ನು ಹೇಳುವ ಭರದಲ್ಲಿ ಇಡೀ ಧರ್ಮವೇ ಸರಿಯಲ್ಲ ಎಂಬ ಹೇಳಿಕೆ ನೀಡಬಾರದು.**

ಹಾಗೆ ನೋಡಿದರೆ ಪ್ರಪಂಚದ ಹಲವು ದೇಶ, ಧರ್ಮಗಳು ಉದಯಿಸುವುದಕ್ಕೆ ಪೂರ್ವದಿಂದಲೂ ಈ ದೇಶದಲ್ಲಿ ದೊಡ್ಡ ಸಂಸ್ಕೃತಿ ತಲೆಎತ್ತಿನಿಂತಿದೆ. ಇದು ಪುರಾತನವಾದುದು. ಹಾಗೆ ಅದು ಪರಾತನವಾದುದರಿಂದ ಅದರ ಆಚರಣೆಯ ಒಂದಷ್ಟು ಭಾಗ ಈಗಿನ ಸ್ಥಿತಿಗೆ ಒಪ್ಪುವುದಿಲ್ಲ ಎಂದು ನಮಗೆ ಅರಿವಾಗುತ್ತದೆ. ಅಂತಹ ತಪ್ಪು ಆಚರಣೆಗಳನ್ನು ಸರಿಪಡಿಸಬಹುದು. ಅದನ್ನು ನಾವೇ ವೈಯಕ್ತಿಕವಾಗಿ ಅಳವಡಿಸಿಕೊಳ್ಳಬಹುದು. ಅಥವಾ ಇಂತಹುದು ಸರಿ ಎನಿಸುವುದಿಲ್ಲ ಎಂದು ನಮ್ಮ ಅಭಿಪ್ರಾಯ ವನ್ನೂ ತಿಳಿಸಬಹುದು. ಇಂತಹುದಕ್ಕೆ ಮಾನ್ಯತೆ ಇರುತ್ತದೆ. ಆದರೆ ಹಾಗೆ ಹೇಳುವ ಭರದಲ್ಲಿ ಇಡೀ ದೇಶ, ಧರ್ಮ ಸರಿಯಲ್ಲ ಎಂಬ ಹೇಳಿಕೆ ನೀಡುವುದು ಒಂದು ರೀತಿಯಲ್ಲಿ ಮೂರ್ಖತನ ಎನಿಸುತ್ತದೆ. ಇತ್ತೀಚೆಗೆ ಅಂತಹ ಹೇಳಿಕೆಗಳು ಹೆಚ್ಚಾಗುತ್ತಿರುವುದನ್ನು ಕಾಣಬಹುದು. ಅದರಲ್ಲೂ ಇಂತಹ ಟೀಕೆಗಳು ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ಆಗುತ್ತಿರುವುದನ್ನು ಗಮನಿಸಬಹುದು.

ಈ ದೇಶದ ಇತಿಹಾಸ ಗಮನಿಸಿದಾಗ ಇಂತಹ ಅನೇಕ ಪುರಾತನ ಆಚರಣೆಗಳು ಸರಿಯಲ್ಲ, ಅದು ಬದಲಾಗಬೇಕು ಎಂದು ಹೋರಾಡಿದವರ ದೊಡ್ಡ ಪಟ್ಟಿಯನ್ನು ನಾವು ಮಾಡಬಹುದು. ಅವರೆಲ್ಲಾ ಇಲ್ಲಿಯ ಆಚರಣೆಯ ಕೆಲವು ವಿಧಾನ ಸರಿಯಲ್ಲ ಅದು ಬದಲಾಗಬೇಕು ಎಂದು ಹೋರಾಡಿದರೇ ವಿನಃ, ಇಡೀ ಧರ್ಮ ಸಂಸ್ಕೃತಿಯೇ ತಪ್ಪು ಎಂದು ಖಂಡಿಸಲಿಲ್ಲ ಅಥವಾ ಅದರಿಂದ ಹೊರ ಹೋಗಲೂ ಇಲ್ಲ. ಬಹಳ ಹಿಂದೆ ಆಚರಣೆಗೆ ತಂದ ಪದ್ಧತಿ ಇಂದಿಗೆ ಹೊಂದುವುದಿಲ್ಲ, ಅದು ಈ ಕಾಲಕ್ಕೆ ತಕ್ಕಹಾಗೆ ಬದಲಾಗಬೇಕು ಎಂದು ಹೇಳುವುದು ಸೂಕ್ತವೇ ಆದರೂ, ಅದನ್ನು ಹೇಳುವ ಭರದಲ್ಲಿ ಇಡೀ ಧರ್ಮವೇ ಸರಿಯಲ್ಲ ಎಂಬ ಹೇಳಿಕೆ ನೀಡಬಾರದು.

ನಮ್ಮ ದೇಶದಲ್ಲಿ ವಿದೇಶಿಯರು ಏಳೆಂಟು ಶತಮಾನಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಆ ಸಮಯದಲ್ಲಿ ಅವರನ್ನು ಹಿಂದಕ್ಕೆ ಕಳುಹಿಸಿ, ನಮ್ಮ ದೇಶ ಸ್ವಾತಂತ್ರ್ಯ ಪಡೆಯಬೇಕು ಎಂಬ ಹೋರಾಟವಾಗಿದೆ. ಆಯಾ ಕಾಲದಲ್ಲಿ ಅನೇಕ ದೇಶಭಕ್ತರು ಅಂತಹ ವಿದೇಶಿಯರ ವಿರುದ್ಧ ಹೋರಾಟ ನಡೆಸಿದ್ದಾರೆ. ಇದರ ಜೊತೆಗೇ ನಮ್ಮ ಸಮಾಜದಲ್ಲಿನ ಕೆಲವು ಪದ್ಧತಿಗಳು ಸರಿಯಿಲ್ಲ, ಅದರಲ್ಲಿ ಸುಧಾರಣೆಯಾಗಬೇಕು ಎಂದು ಹೋರಾಡಿದ ಅನೇಕ ಸಮಾಜ ಸುಧಾರಕರೂ ಈ ದೇಶದಲ್ಲಿ ಆಗಿಹೋಗಿದ್ದಾರೆ. ಅದರಲ್ಲಿ ಹೆಸರಿಸಬಹುದಾದ ಕೆಲವು ಹೆಸರುಗಳೆಂದರೆ ರಾಜಾರಾಮ್ ಮೋಹನರಾಯ್, ಮಹಾತ್ಮ ಎಂದು ಕರೆಸಿಕೊಂಡ ಜ್ಯೋತಿಬಾ ಫುಲೆ, ಸಾವಿತ್ರಿ ಬಾಯಿ ಫುಲೆ, ಈಶ್ವರ ಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಮಹಾತ್ಮಾ ಗಾಂಧೀಜಿ, ಡಾ. ಬಿ ಆರ್ ಅಂಬೇಡ್ಕರ್, ನಾರಾಯಣ ಗುರು, ಮಹಾದೇವ ಗೋವಿಂದ ರಾನಡೆ, ಧೋಂಡೋ ಕೇಶವ ಕರ್ವೆ, ಬಸವಣ್ಣವರು, ರಾಮಾನುಜಾಚಾರ್ಯರು, ಸುಬ್ರಹ್ಮಣ್ಯ ಭಾರತಿ, ರವೀಂದ್ರನಾಥ ಠಾಗೋರ್, ಪಾಂಡುರಂಗ ಶಾಸ್ತ್ರಿ ಅಠವಳೆ, ವಿನೋಬಾಬಾವೆ, ದಯಾನಂದ ಸರಸ್ವತಿ, ಸಂತ ಶಿಶುನಾಳ ಷರೀಫ, ಈಶ್ವರಚಂದ್ರ ವಿದ್ಯಾ ಸಾಗರ ಮೊದಲಾದವರು ಸೇರಿದ್ದಾರೆ.

ಇದರ ಜೊತೆಗೆ ಹೆಸರಿಸಬಹುದಾದವರು ಐರ್ಲೆಂಡ್ ದೇಶದಿಂದ ಸ್ವಾಮಿ ವಿವೇಕಾನಂದ ಅವರ ಪ್ರಭಾವದಿಂದ ಭಾರತಕ್ಕೆ ಬಂದ ಮಾರ್ಗರೇಟ್ ಎಲಿಜಬೆತ್ ನೋಬ್ಲ್. ಮುಂದೆ ಈಕೆ ಸೋದರಿ ನಿವೇದಿತಾ ಎಂದು ಹೆಸರಾದವರು. ಇವರೆಲ್ಲಾ ಇಲ್ಲಿನ ಧರ್ಮದ ಆಚರಣೆಯಲ್ಲಿನ ಲೋಪಗಳನ್ನು ಕಂಡುಹಿಡಿದು ಅದನ್ನು ಸರಿಪಡಿಸಲು ಪ್ರಯತ್ನಿಸಿದರು. ಡಾ ಅಂಬೇಡ್ಕರ್ ಅಂತಹ ಧೀಮಂತರು ಈ ಹಿಂದೂ ಸಮಾಜದಲ್ಲಿನ ಅಸ್ಪೃಶ್ಯತೆಯಂತಹ ಆಚರಣೆಯನ್ನು ಖಂಡಿಸಿ, ಅದನ್ನು ಸರಿಪಡಿಸಲು ಇಡೀ ಜೀವನಪೂರ್ತಿ ಹೋರಾಟ ಮಾಡಿ ಕೊನೆಗೆ ಬೇಸರದಿಂದ ಬೌದ್ಧ ಧರ್ಮವನ್ನು ಅಪ್ಪಿಕೊಂಡವರು.

ಇವರ ಪೈಕಿ ರಾಜಾರಾಮ ಮೋಹನ ರಾಯ್ ಅವರು ಬಂಗಾಳದವರು. ಅವರು ಮುಖ್ಯವಾಗಿ ದೇಶದಲ್ಲಿ ಆಚರಿಸುತ್ತಿದ್ದ ಸತಿ ಪದ್ಧತಿಯನ್ನು ವಿರೋಧಿಸಿದರು, ಇಲ್ಲಿ ವಿಧವಾ ವಿವಾಹ ಪದ್ಧತಿ ಜಾರಿಗೆ ಬರಬೇಕು ಎಂದು ಶ್ರಮಿಸಿದರು. ಅವರ ಜೀವನವನ್ನು ಅವಲೋಕನ ಮಾಡಿದಾಗ ಕಂಡುಬರುವ ಒಂದು ಘಟನೆ ಅವರನ್ನು ಸಮಾಜ ಸುಧಾರಕರನ್ನಾಗಿ ರೂಪಿಸಿದ್ದನ್ನು ಕಾಣಬಹುದು. ಮೋಹನರಾಯರ ಅಣ್ಣ ಜಗನ್ಮೋಹನ. ಅವರು ನಿಧನರಾಗುತ್ತಾರೆ. ಅವರ ಪತ್ನಿ (ರಾಜಾರಾಮರ ಅತ್ತಿಗೆ) ಅಲಕಮಂಜರಿ. ಆಕೆಯ ಪತಿ ಸತ್ತ ನಂತರ ಅಂದಿನ ಪದ್ಧತಿಯಂತೆ ಆಕೆ ಪತಿಯೊಡನೆ ಸಹಗಮನ ಮಾಡಬೇಕಾಗಿತ್ತು. ಅದು ಆಗಿನ ಕಾಲದ ಒಂದು ದುಷ್ಟ ಪದ್ಧತಿ. ಪತಿಯ ಶವಸಂಸ್ಕಾರದ ಸಮಯದಲ್ಲಿ ನೆಂಟರಿಷ್ಟರೆಲ್ಲಾ ಸೇರಿದ್ದರು. ಶವಸಂಸ್ಕಾರದ ಸಿದ್ಧತೆ ನಡೆದಿತ್ತು. ಅಲಕಮಂಜರಿಯು ಜರಿ ಸೀರೆಯುಟ್ಟು ಹಣೆಯ ತುಂಬಾ ಕುಂಕುಮ ಇಟ್ಟುಕೊಂಡಿದ್ದಳು, ತಲೆ ಕೆದರಿತ್ತು, ಆಕೆಯ ಮುಖದಲ್ಲಿ ಭಯ ಕಾಣುತ್ತಿತ್ತು. ಶವವನ್ನು ಸ್ಮಶಾನಕ್ಕೆ ತಂದರು. ಆಗ ಮೋಹನರಾಯರು ಅತ್ತಿಗೆಯನ್ನು 'ಸತಿ' ಹೋಗ ಬೇಡವೆಂದು ಅಂಗಲಾಚಿದರು. ಆಗ ಅಲ್ಲಿ ಸೇರಿದ್ದ ನೆಂಟರಿಷ್ಟರು ಹಾಗೆ ಹೇಳಬಾರದು ಎಂದು ಅವರನ್ನು ತಡೆದರು. ಅಲಕಮಂಜರಿಯನ್ನು ಶವದೊಡನೆ ಕಟ್ಟಿ ಚಿತೆಗೆ ಏರಿಸಲಾಯಿತು, ಅದಕ್ಕೆ ಸುತ್ತಲೂ ಬೆಂಕಿ ಇಡಲಾಯಿತು. ಅಲಕಮಂಜರಿ ಹೆದರಿದರೂ, ಅತ್ತರೂ ಬಿಡಲಿಲ್ಲ. ಆಕೆ ಗಂಡನ ಶವದೊಡನೆ ಬೂದಿಯಾದಳು. ಇಂತಹ ಹೃದಯ ವಿದ್ರಾವಕ ದೃಶ್ಯವು ರಾಜಾರಾಮ ಮೋಹನರಾಯರ ಮೇಲೆ ಬಹಳ ಪ್ರಭಾವ ಬೀರಿತು. ಇಂತಹ ಪದ್ಧತಿ ಸರಿಯಲ್ಲ, ಈ ಪದ್ಧತಿ ರದ್ದಾಗಬೇಕು ಎಂದು ಹೋರಾಡಿದರು. ಈ ಸಹಗಮನ ಪದ್ಧತಿ ಹೋಗಬೇಕು ಎಂದು ಅವರು ಬ್ರಿಟಿಷ್ ಪಾರ್ಲಿಮೆಂಟನ್ನು ಒತ್ತಾಯಿಸಿ ಯಶಸ್ವಿಯಾದರು.

ಮಾರ್ಗರೇಟ್ ಎಲಿಜಬೆತ್ ನೋಬ್ಲ್ ಸನಾತನ ಭಾರತದ ಪದ್ಧತಿ ಶ್ರೇಷ್ಠ ಎಂದು ಕಂಡುಕೊಂಡು ಭಾರತಕ್ಕೆ ಬಂದು ನಿವೇದಿತಾ ಎಂಬ ಹೆಸರಿನಿಂದ ಕೆಲಸ ಮಾಡಿದಳು. ಅವಳು ಭಾರತಕ್ಕೆ ಬರುವ ಪೂರ್ವದಲ್ಲಿಯೇ ಭಾರತದ ಬಗ್ಗೆ ಅಮೇರಿಕಾದಲ್ಲಿ ದೊಡ್ಡದಾಗಿ ಅಪಪ್ರಚಾರವಾಗಿತ್ತು. ಭಾರತದಲ್ಲಿನ ಬಡತನ, ಮೂಢನಂಬಿಕೆಗಳನ್ನು ಅಲ್ಲಿ ಭೂತಾಕಾರ ಮಾಡಿ ಪ್ರಚಾರ ಮಾಡಲಾಗಿತ್ತು. ಇದರ ಜೊತೆಗೆ ಇಲ್ಲದ ವಿಚಾರಗಳೂ ಭಾರತದಲ್ಲಿ ಆಚರಣೆಯಲ್ಲಿದೆ ಎಂಬ ಪ್ರಚಾರವೂ ನಡೆದಿತ್ತು. ಇದೆಲ್ಲವನ್ನು ಕೇಳಿದ್ದ ಆಕೆ ಮೊದಲು ದಿಗ್ಭ್ರಾಂತಳಾಗಿದ್ದಳು. ಆಗಲೇ ಒಂದು ಪ್ರತಿಜ್ಞೆ ಮಾಡಿದಳು. ಮೊದಲು ಭಾರತದ ನಿಜವಾದ ಚಿತ್ರವನ್ನು ಜನರ ಮುಂದೆ ಇಡಬೇಕು, ಭಾರತದ ಸಹಸ್ರಾರು ವರ್ಷಗಳ ಉಚ್ಚ ಸಂಸ್ಕೃತಿ, ಪರಂಪರೆಯನ್ನು ಸರಿಯಾದ ಹಿನ್ನೆಲೆಯಲ್ಲಿ ಜಗತ್ತಿಗೆ ತಿಳಿಸಬೇಕು ಎಂದು ನಿಶ್ಚಯಿಸಿ ಭಾರತಕ್ಕೆ ಬಂದು ಇಲ್ಲಿನ ಧರ್ಮವನ್ನು ಅಭ್ಯಸಿಸಿದಳು. ಆಕೆ ಮೊದಲು ಕಂಡುಕೊಂಡಿದ್ದು ರಾಜಕೀಯ ಸ್ವಾತಂತ್ರ್ಯ ದೊರೆಯದೆ ಭಾರತೀಯರು ಮನುಷ್ಯರಾಗುವುದು ಸಾಧ್ಯವಿಲ್ಲ ಎಂದು ತೀರ್ಮಾನಿಸಿ ಭಾರತವನ್ನು ತನ್ನ ತಾಯ್ನಾಡು ಎಂದು ಭಾವಿಸಿ ಹೋರಾಡಿದಳು. ಇದು ಮೆಚ್ಚಬೇಕಾದ ವಿಷಯ.

ಈ ವಾರ ತಮಿಳಿನಾಡಿನ ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಮೈಸೂರಿನ ಸುತ್ತಲಿನ ದೇವಾಲಯಕ್ಕೆ ಭೇಟಿ ನೀಡಿದ್ದ ವಿಷಯ ಕುತೂಹಲ ಮೂಡಿಸಿತು. ಇವರ ಪುತ್ರ ಉದಯ ನಿಧಿ ಸ್ಟಾಲಿನ್ ಸನಾತನ ಧರ್ಮ ತೊಲಗಬೇಕು ಎಂಬ ವಿವಾದಿತ ಹೇಳಿಕೆ ನೀಡಿದ್ದರು. ಆದರೆ ಅವರ ತಾಯಿ ದುರ್ಗಾ ಸ್ಟಾಲಿನ್ ಮೈಸೂರಿನ ಸಮೀಪದ ನಿಮಿಷಾಂಬ ದೇವಸ್ಥಾನ, ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಾಮಾನ್ಯರಂತೆ ಭೇಟಿ ನೀಡಿ, ಪೂಜೆ ಸಲ್ಲಿಸಿದರು. ಹಣೆಯ ಮೇಲೆ ದೊಡ್ಡದಾದ ಕುಂಕುಮ, ತಲೆಗೆ ಹೂವು ಮುಡಿದ ಆಕೆ ದೈವಭಕ್ತೆ. ಆಕೆಯು ಸಾಮಾನ್ಯವಾಗಿ ದೇವಸ್ಥಾನಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ ಎಂದು ಎಲ್ಲಾ ಪತ್ರಿಕೆಗಳೂ ವರದಿ ಮಾಡಿವೆ. ತನ್ನ ಮನೆಯಲ್ಲಿ ಸನಾತನ ಧರ್ಮ ಅನುಸರಿಸುವ ತಾಯಿಯೇ ಇರುವಾಗ ಇಂತಹ ಧರ್ಮ ವಿರೋಧಿ ಹೇಳಿಕೆ ನೀಡುವುದು ವಿಪರ್ಯಾಸ ಎನಿಸುತ್ತದೆ. ಅದು ಪ್ರಚಾರ ಪಡೆಯುವ ತಂತ್ರವಾಗಿ ಕಂಡುಬರುತ್ತದೆ. ದೋಷಗಳನ್ನು ಎತ್ತಿ ಆಡುವುದಕ್ಕಿಂತ ಅದನ್ನು ಸರಿಪಡಿಸಲು ಪ್ರಯತ್ನಿಸುವುದು ಶ್ಲಾಘನೀಯ ಎನಿಸುತ್ತದೆ.

ಆಧುನಿಕ ಮೈಸೂರು ಅಭಿವೃದ್ಧಿಗೆ ಶ್ರಮಿಸಿದವರು ನಾಲ್ವಡಿಯವರು

ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ಸ್ಮರಣೆ



ಮೈಸೂರಿನ ಗೋಕುಲಂ ಬಯಲುರಂಗಮಂದಿರದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ವತಿಯಿಂದ ನಡೆದ ಗಾನಯಾನ-11, ನಾಲ್ವಡಿ-ಎಸ್‌ಪಿಬಿ ಹುಟ್ಟುಹಬ್ಬ-ಹಾಡುಹಬ್ಬವನ್ನು ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ಉದ್ಘಾಟಿಸಿದರು.

ಮೈಸೂರು,ಜೂ.5(ಎಂಟಿವೈ)- ಮೈಸೂರಿನ ಅಖಂಡ ಅಭಿವೃದ್ಧಿಗೆ ಶ್ರಮಿಸಿದ ಮಹಾಚೇತನ ರಾಜರ್ಷಿ ನಾಲ್ವಡಿ ಕೃಷ್ಣ ರಾಜ ಒಡೆಯರ್ ಎಂದು ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ತಿಳಿಸಿದರು.

ಮೈಸೂರಿನ ಗೋಕುಲಂ ಬಯಲು ರಂಗಮಂದಿರದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ವತಿಯಿಂದ ಆಯೋಜಿಸಿದ್ದ ಗಾನಯಾನ-11, ನಾಲ್ವಡಿ -ಎಸ್‌ಪಿಬಿ ಹುಟ್ಟುಹಬ್ಬ-ಹಾಡುಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾಲ್ವಡಿಯವರು ಕೃಷಿ, ನೀರಾವರಿ, ಆಸ್ಪತ್ರೆ ಮಾತ್ರವಲ್ಲದೆ ಸಹಕಾರ ಕ್ಷೇತ್ರಕ್ಕೂ ಅಪಾರವಾದ ಕೊಡುಗೆ ನೀಡಿದ್ದಾರೆ. ಅವರ ಶ್ರಮದಿಂದ ಇಡೀ ಕರ್ನಾಟಕ ಮಾತ್ರವಲ್ಲ ಇತರೆ ರಾಜ್ಯಗಳೂ ನೀರು ಕುಡಿಯುತ್ತಿವೆ. ಅವರು ದೂರದೃಷ್ಟಿ ಹೊಂದಿದ್ದ ಮಹಾರಾಜ. ಅವರಿಗೆ ತಾಯಿ ಕೆಂಪನಂಜಮ್ಮಣ್ಣಿಯವರು ಬೆನ್ನೆಲುಬಾಗಿದ್ದರು ಎಂದರು.

ಲಯನ್ಸ್ ಕ್ಲಬ್ ಮಾಜಿ ಜಿಲ್ಲಾ ರಾಜ್ಯಪಾಲ ಕೆ.ದೇವೇಗೌಡ ಮಾತನಾಡಿ, ಈಚೆಗೆ ಜನರು ಸಿನಿಮಾ ನಟ-ನಟಿಯರನ್ನು ಇಷ್ಟಪಡುವಷ್ಟು ನಮ್ಮ ಜೀವನ ರೂಪಿಸಿದ ಮಹಾನ್ ವ್ಯಕ್ತಿಗಳ ಬಗ್ಗೆ ತಿಳಿದುಕೊಳ್ಳಲು ಇಚ್ಚಿಸುತ್ತಿಲ್ಲ. ನಾವು ಎಂದಿಗೂ ನಮ್ಮ ಬದುಕನ್ನು ಕಟ್ಟಿಕೊಳ್ಳಲು ಕಾರಣಕರ್ತರಾದ ಮಹನೀಯರ ಸ್ಮರಿಸಬೇಕು ಎಂದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಇಂದು ನಾಡಿನಾದ್ಯಂತ ನಾಲ್ವಡಿಯವರ ಸಾಧನೆಗಳನ್ನು ನೆನಪು ಮಾಡಿಕೊಳ್ಳಲಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ಮೇರು ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಜನ್ಮದಿನ ಆಚರಿಸುತ್ತಿರುವುದು ಬಹಳ ವಿಶೇಷ. ತಮ್ಮ ಕಂಠಸಿರಿಯ ಮೂಲಕ ಜಗತ್ತಿನ ಜನರ ಮನಸನ್ನು ಹೊಕ್ಕಿರುವ ಅವರ ಸಾಧನೆ ಅಪಾರವಾದುದು ಎಂದರು.

ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ಅಧ್ಯಕ್ಷ ಡಾ.ಕೃಷ್ಣಮೂರ್ತಿ ಚಮರಂ, ಕಾರ್ಯದರ್ಶಿ ಸತೀಶ್ ಹೆಗ್ಗೂರು, ಖಜಾಂಚಿ ಸವಿತ ಎಸ್.ಗೌಡ, ಉಮಾಶಂಕರ್, ಕವಿ ಮಹೇಶ್ ಇರಸವಾಡಿ ಇದ್ದರು. ಗಾಯಕರಾದ ಆರ್.ಮಹೇಂದ್ರ, ಆರ್.ರವಿಕುಮಾರ್, ಡಾ.ಕೃಷ್ಣಮೂರ್ತಿ ಚಮರಂ, ಗಾನಾ ಸುಮಾ ಪಟ್ಟಸೋಮಹಳ್ಳಿ, ಸರ್ವಮಂಗಳ, ಜಾಯ್ಸ್ ವಿಶಾಖ್, ಕ್ಯಾತಾಯಿನಿ, ಶ್ರೀಕಂಠ ಎಸ್‌ಬಿಪಿ ಅವರ ಗೀತೆಗಳನ್ನು ಹಾಡಿ ರಂಜಿಸಿದರು.

ಜರ್ಮನಿ ತುರಿಂಜಿಯಾ ನಿಯೋಗದೊಂದಿಗೆ ಮುಖ್ಯಮಂತ್ರಿ ಡಿಕೆಶಿ ಸಮಾಲೋಚನೆ



ಜರ್ಮನಿಯ ತುರಿಂಜಿಯಾ ಪ್ರಾಂತ್ಯದ ಮಂತ್ರಿಮಂಡಲದ ಉನ್ನತಮಟ್ಟದ ನಿಯೋಗ ಸಿಎಂ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮಾತುಕತೆ ನಡೆಸಿತು.

ಬೆಂಗಳೂರು, ಜೂ. 5(ಕೆಎಂಶಿ)- ಜರ್ಮನಿಯ ತುರಿಂಜಿಯಾ ಪ್ರಾಂತ್ಯದ ಮಂತ್ರಿಮಂಡಲ ಮುಖ್ಯಸ್ಥ ಮಾರಿಯೋ ವಾಯ್ಟ್ ನೇತೃತ್ವದ ಉನ್ನತಮಟ್ಟದ ನಿಯೋಗ ಆರ್ಥಿಕ ಸಹಕಾರ ಬಲ ವರ್ಧನೆ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮಾತುಕತೆ ನಡೆಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎರಡೂ ಸರ್ಕಾರಗಳು ಉತ್ತಮ ಅವಕಾಶಗಳನ್ನು ಗುರುತಿಸಿ ಪರಸ್ಪರ ಕಾರ್ಯ ನಿರ್ವಹಿಸಲಿವೆ, ಜಂಟಿ ಸಹಭಾಗಿತ್ವ, ತಂತ್ರಜ್ಞಾನ ವರ್ಗಾವಣೆ, ಕೌಶಲ್ಯ ಮತ್ತು ಪ್ರತಿಭಾ ವಿನಿಮಯ ಮುಂತಾದವು ಸಹಕಾರದಲ್ಲಿ ಸೇರಿವೆ ಎಂದರು.

ಕರ್ನಾಟಕ ಮತ್ತು ತುರಿಂಜಿಯಾ ಪ್ರಾಂತೀಯ ಸರ್ಕಾರಗಳು ಜೊತೆಯಾಗಿ ನಾವೀನ್ಯತೆ ಮತ್ತು ಮುಂದಿನ ಪೀಳಿಗೆಯ ತಂತ್ರಜ್ಞಾನದತ್ತ ಗಮನಹರಿಸಲಿವೆ ಎಂದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮಾತನಾಡಿ, ಕರ್ನಾಟಕ ಮತ್ತು ತುರಿಂಜಿಯಾ ನಡುವೆ ಆಪ್ಟಿಕ್ಸ್ ಮತ್ತು ಫೋಟಾನಿಕ್ಸ್, ಸೆಮಿಕಂಡಕ್ಟರ್, ಬಯೋಟೆಕ್, ವಿದ್ಯುಚ್ಚಾಲಿತ ವಾಹನ ತಯಾರಿಕೆ, ಮರುಬಳಕೆ ಇಂಧನ, ಆಧುನಿಕ ತಯಾರಿಕಾ ವಲಯಗಳಲ್ಲಿ ಉಜ್ವಲ ಅವಕಾಶಗಳಿವೆ ಎಂದರು.

ತುರಿಂಜಿಯಾ ಪ್ರಾಂತ್ಯದ ಕಂಪನಿಗಳು ರಾಜ್ಯದಲ್ಲಿ ಹೆಚ್ಚು ಹೂಡಿಕೆ ಮಾಡಬೇಕು, ನಮ್ಮ ಕೈಗಾರಿಕಾ ನೀತಿಯಲ್ಲೂ ಈ ಕ್ಷೇತ್ರಗಳಿಗೆ ಒತ್ತು ಕೊಡಲಾಗಿದೆ. ರಾಜ್ಯದ ಎಲ್ಲೆಡೆ ಕೈಗಾರಿಕೆಗಳು ಸ್ಥಾಪನೆ ಆಗಬೇಕು ಎಂಬುದು ಸರ್ಕಾರದ ಆಶಯವಾಗಿದೆ, ತುರಿಂಜಿಯಾ ಪ್ರಾಂತ್ಯದ ಕಂಪನಿಗಳು ಈ ಅವಕಾಶ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ನಿಯೋಗದ ಮುಖ್ಯಸ್ಥ ಮಾರಿಯೋ ವಾಯ್ಟ್ ಮಾತನಾಡಿ, ರಾಜ್ಯದಲ್ಲಿನ ಡಿಜಿಟಲ್ ಪ್ರತಿಭಾ ಸಂಪನ್ಮೂಲ, ಎಂಜಿನಿಯರಿಂಗ್, ವಿಶ್ವದರ್ಜೆಯ ನವೋದ್ಯಮ ಕಾರ್ಯಪರಿಸರ, ಕ್ವಾಂಟಂ ತಂತ್ರಜ್ಞಾನ, ಏರೋಸ್ಪೇಸ್ ವಲಯಗಳಲ್ಲಿನ ಮೂಲಸೌಕರ್ಯವನ್ನು ಪ್ರಶಂಸಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಮುಲ್‌ನಲ್ಲಿ ವಿಶ್ವ ಪರಿಸರ ದಿನಾಚರಣೆ...



ಮೈಮುಲ್ ಕಚೇರಿ ಆವರಣದಲ್ಲಿ ಗಿಡಗಳನ್ನು ನೆಟ್ಟು ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್.ಸುರೇಶನಾಯ್ಕ್, ಪ್ರಧಾನ ವ್ಯವಸ್ಥಾಪಕ ಎಚ್.ಕೆ.ಜಯಶಂಕರ್, ಹಿರಿಯ ಅಧಿಕಾರಿಗಳಾದ ಗುರುಪ್ರಸಾದ್, ಗಿರಿಜಾ, ಎಲ್.ಆರ್.ಕರಿಬಸವರಾಜು, ಸಂತೋಷ್, ಚಿನ್ಮಯಾನಂದ ಅರಸ್, ಸಿ.ಬಬಿತಾ, ಲಾವಣ್ಯವತಿ, ನಂದಿನಿ, ಡಾ.ಗೌರಿಶಂಕರ್, ರಶ್ಮಿ, ಎಂ.ಶಂಕರ್, ನೌಕರರ ಸಂಘದ ಪದಾಧಿಕಾರಿಗಳು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಾರ್ಡ್ ನಂ.55ರ ಬಿಜೆಪಿ ಕಾರ್ಯಕರ್ತರು ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ನೇತೃತ್ವದಲ್ಲಿ ವಿದ್ಯಾರಣ್ಯಪುರಂ ಪಾರ್ಕ್‌ನಲ್ಲಿ ಗಿಡಗಳನ್ನು ನೆಟ್ಟರು. ಈ ವೇಳೆ ಬಿಜೆಪಿ ಹಿರಿಯ ಮುಖಂಡ ಗೋಪಾಲರಾಜ್ ಅರಸ್, ವಾರ್ಡ್ ಅಧ್ಯಕ್ಷ ಉಮಾಶಂಕರ್, ಪಾಲಿಕೆ ಮಾಜಿ ಸದಸ್ಯೆ ವಿದ್ಯಾ ಅರಸ್, ಬಿಜೆಪಿ ಮುಖಂಡರಾದ ಮಂಜುನಾಥ್, ಸೋಮೇಶ್, ಧರ್ಮೇಂದ್ರ, ರವಿ, ಮಧು, ನಿರಂಜನ್, ಶಿವು, ಮಂಜುಳಾ, ವಿಜಯ, ಕಾವ್ಯ, ಅರ್ಪಿತ, ರಮೇಶ್ ಅರಸ್ ಇನ್ನಿತರರಿದ್ದರು.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಮೈಸೂರು ನಗರ ವಿಭಾಗದ ವ್ಯಾಪ್ತಿಗೆ ಒಳಪಡುವ ವಿಭಾಗೀಯ ಕಛೇರಿ, ವಿಭಾಗೀಯ ಕಾರ್ಯಾಗಾರ, ನಗರ ಬಸ್ ನಿಲ್ದಾಣ ಮತ್ತು ನಿಗಮದ ವಸತಿ ಗೃಹದಲ್ಲಿ ವಿವಿಧ ಮಾದರಿಯ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಡಾ. ಹೇಮಚಂದ್ರ ಪಿ.ಎನ್., ಮೈಸೂರು ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಜಗದೀಶ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಪರಿಸರ ದಿನಾಚರಣೆ ಅಂಗವಾಗಿ ಗೋಕುಲಂನ ಬೃಂದಾವನ, ವಿ.ವಿ.ಮೊಹಲ್ಲಾ ಬಡಾವಣೆಯ ಪಾರ್ಕುಗಳಲ್ಲಿ 101 ಸಸಿ ನೆಡುವ ಕಾರ್ಯಕ್ರಮಕ್ಕೆ ಮೈಸೂರು ನಗರ ಜನತಾದಳ ಅಧ್ಯಕ್ಷ ಎಸ್‌ಬಿಎಂ ಮಂಜು ಚಾಲನೆ ನೀಡಿದರು. ಈ ವೇಳೆ ಚಾಮರಾಜ ಕ್ಷೇತ್ರದ ಅಧ್ಯಕ್ಷ ಚಂದ್ರಹಾಸ, ಮೈಸೂರು ನಗರ ಉಪಾಧ್ಯಕ್ಷ ಭೋಜರಾಜ, ಕುಮಾರ್, ರಮೇಶ್, ರಾಜೇಶ್, ವಿಕ್ರಾಂತ್ ಸೋಮಣ್ಣ, ಪಿ.ಲೋಕೇಶ್, ಟಿ.ಎನ್. ಚಂದ್ರಶೇಖರ್, ಎಲ್.ಶಿವಣ್ಣ, ನಾರಾಯಣಗೌಡ, ಲತಾ, ಲೀಲಾ, ಕಸ್ತೂರಿ, ಸುಮತಿ, ವಿಶಾಲಾಕ್ಷಿ ಉಪಸ್ಥಿತರಿದ್ದರು.



ಮೈಸೂರು ವೆಸ್ಟ್ ಲಯನ್ಸ್ ಸೇವಾ ನಿಕೇತನ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಪರಿಸರ ಸಂರಕ್ಷಣೆ ಮತ್ತು ಪ್ರಕೃತಿಯ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಗೋಕುಲಂ ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ವಿದ್ಯಾರ್ಥಿಗಳಿಂದ ಪರಿಸರ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಲಯನ್ ಎಸ್.ಪ್ರಕಾಶ್ ಮತ್ತು ಶಾಲೆಯ ಪ್ರಾಂಶುಪಾಲರಾದ ಡಾ. ರೂಪಾ ಕರುಂಬಯ್ಯ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಕ್ಕಳು ಶಾಲಾ ಆವರಣದಲ್ಲಿ ಗಿಡಗಳನ್ನು ನೆಟ್ಟು ಸಂರಕ್ಷಿಸುವ ಪ್ರತಿಜ್ಞೆ ಸ್ವೀಕರಿಸಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಲ್ಲಿ ವಿಶ್ವ ಪರಿಸರ ದಿನಾಚರಣೆ



ಮೈಸೂರು, ಜೂ. 5– ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ಮತ್ತು ಪದವಿ ಪೂರ್ವ ಕಾಲೇಜಿನ ವತಿಯಿಂದ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಾಂಶುಪಾಲರಾದ ಡಾ. ರೇಚಣ್ಣ ಅವರು ಹಸಿರೇ ಉಸಿರು, ಶುದ್ಧ ಗಾಳಿ ಉಸಿರಾಡಿ, ಅದಕ್ಕಾಗಿ ಮರಗಳನ್ನು ಉಳಿಸುವುದು, ಬೆಳೆಸುವುದು ನಮ್ಮ ಜವಾಬ್ದಾರಿ ಎಂದು ಅಭಿಪ್ರಾಯಪಟ್ಟರು.

ಯೂತ್ ರೆಡ್ ಕ್ರಾಸ್‌ನ ಸಂಚಾಲಕಿ ಶ್ರೀಮತಿ ನಾಗಲಾಂಬಿಕೆ ಎನ್.ವಿಶ್ವ ಪರಿಸರ ದಿನ 2026ರ ಧ್ಯೇಯ ವಾಕ್ಯ ಪ್ರಕೃತಿಯಿಂದ ಪ್ರೇರಿತ–ಹವಾಮಾನಕ್ಕಾಗಿ ಮತ್ತು ನಮ್ಮ ಭವಿಷ್ಯಕ್ಕಾಗಿ ಎಂಬ ವಿಷಯ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಗುರುಪಾದಸ್ವಾಮಿ, ಪರೀಕ್ಷಾ ನಿಯಂತ್ರಣಾಧಿಕಾರಿ ಸ್ವಾಮಿ ಎಂ.ಎಂ., ಎನ್‌ಸಿಸಿ ಅಧಿಕಾರಿ ಡಾ.ರೂಪಾ ಮತ್ತು ಎನ್‌ಎಸ್‌ಎಸ್ ಅಧಿಕಾರಿ ಅನುಷಾ ಉಪಸ್ಥಿತರಿದ್ದರು.

ಪ್ರತಿಯೊಬ್ಬರು ಗಿಡ ದತ್ತು ಪಡೆದು ಬೆಳೆಸಿ; ಪರಿಸರ ಸಂರಕ್ಷಿಸಿ

ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಸಲಹೆ

ಮೈಸೂರು, ಜೂ.5(ಬಿಎಲ್‌ಯು)– ಮಹಾರಾಜರ ಕೊಡುಗೆಯಾಗಿರುವ ಮೈಸೂರಿನ ಸೌಂದರ್ಯ ಹಾಗೂ ಪರಿಸರವನ್ನು ಸಂರಕ್ಷಿಸಬೇಕು. ಪ್ರತಿಯೊಬ್ಬರು ಗಿಡಗಳನ್ನು ದತ್ತು ಪಡೆದು ಅವುಗಳನ್ನು ಬೆಳೆಸಿ ದೊಡ್ಡ ಮರವಾಗಿ ಮಾಡಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಸಲಹೆ ನೀಡಿದರು.

ಮೈಸೂರಿನ ರಾಮಕೃಷ್ಣನಗರದ ಎಚ್ ಬ್ಲಾಕ್‌ನ ಆರೋಗ್ಯ ಬಡಾವಣೆಯ ಉದ್ಯಾನವನದಲ್ಲಿ ನಗರ ಪಾಲಿಕೆ ಹಾಗೂ ಅರಣ್ಯ ಇಲಾಖೆ ಆಯೋಜಿಸಿದ್ದ ವಿಶ್ವ ಪರಿಸರ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೆಚ್ಚು ಗಿಡ, ಮರ ಬೆಳೆಸಿ ಉತ್ತಮ ಪರಿಸರವಿದ್ದರೆ ಸ್ವಾಸ್ಥ್ಯ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಖಾಲಿ ಜಾಗದಲ್ಲಿ ಒಂದು ಗಿಡ ನೆಟ್ಟರೆ, ಒಂದು ಜೀವಕ್ಕೆ ಉತ್ತಮ ಗಾಳಿ ನೀಡಿದಂತಾಗುತ್ತದೆ. ಈ ಮೂಲಕ ನೈಸರ್ಗಿಕ ಸಂಪತ್ತು ಹೆಚ್ಚಿಸಬೇಕು. ಈ ನಿಟ್ಟಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ 15 ಸಾವಿರ ಸಸಿ ನೆಡಬೇಕೆಂಬ ಜಿಲ್ಲಾಡಳಿತದ ಸೂಚನೆ ಪಾಲಿಸಬೇಕು ಎಂದು ಜಿ.ಟಿ. ದೇವೇಗೌಡರು ಕಿವಿಮಾತು ಹೇಳಿದರು.



ಮೈಸೂರಿನ ರಾಮಕೃಷ್ಣನಗರದ ಎಚ್ ಬ್ಲಾಕ್‌ನ ಆರೋಗ್ಯ ಬಡಾವಣೆಯ ಉದ್ಯಾನವನದಲ್ಲಿ ಶುಕ್ರವಾರ ಶಾಸಕ ಜಿ.ಟಿ.ದೇವೇಗೌಡ ಅವರು ಗಿಡಕ್ಕೆ ನೀರೆರೆಯುವ ಮೂಲಕ ವಿಶ್ವ ಪರಿಸರ ದಿನಾಚರಣೆ ಉದ್ಘಾಟಿಸಿದರು. ಈ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಉಪಸ್ಥಿತರಿದ್ದರು.

ಗಿಡ, ಮರಗಳನ್ನು ಬೆಳೆಸುವುದು ಮುಖ್ಯ. ಹಾಗೆಯೇ ಜನರ ಜೀವಕ್ಕೆ ಕಂಟಕವಾಗಿರುವ ಅಪಾಯಕಾರಿ ಮರಗಳನ್ನು ತೆರವು ಮಾಡುವುದು ಅಷ್ಟೇ ಮುಖ್ಯ. ಇದನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಸೂಚಿಸಿದರು.

ಪೋಷಕರಿಂದಲೇ ಮಕ್ಕಳ ಆರೋಗ್ಯ ಹಾಳು: ಪೋಷಕರು ಮಕ್ಕಳ ಆರೋಗ್ಯದ ಬಗ್ಗೆ ಮುತುವರ್ಜಿ ವಹಿಸಬೇಕು. ಆದರೆ ತಂದೆ–ತಾಯಿಗಳೇ ಮಕ್ಕಳನ್ನು ಹೋಟೆಲ್‌ಗೆ ಕರೆದೊಯ್ಯುತ್ತಾರೆ. ಯಾವ ಹೋಟೆಲ್ ನೋಡಿದರೆ ಪೋಷಕರೇ ಮಕ್ಕಳಿಗೆ ಊಟ–ತಿಂಡಿ ಮಾಡಿಸುತ್ತಿರುತ್ತಾರೆ. ಇದರಿಂದ ಮಕ್ಕಳ ಆರೋಗ್ಯ ಹದಗೆಡುತ್ತದೆ ಎಂಬ ವಾಸ್ತವತೆ ಅವರಿಗೆ ತಿಳಿದಿರುವುದಿಲ್ಲ. ಈಗಲಾದರೂ ಪೋಷಕರು ಮಕ್ಕಳಿಗೆ ಹೊರಗಿನ ತಿಂಡಿ, ತಿನಿಸುಗಳ ರುಚಿ ತೋರಿಸುವುದರ ಬದಲು ಮನೆಯಲ್ಲೆ ರುಚಿಯಾದ ಅಡುಗೆ ತಯಾರಿಸಿ ನೀಡಬೇಕು ಎಂದು ಜಿ.ಟಿ.ದೇವೇಗೌಡರು ಸಲಹೆ ನೀಡಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್, ಅರಣ್ಯ ಸಂರಕ್ಷಣಾಧಿಕಾರಿ ಸಿ.ರವಿಶಂಕರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ.ಪರಮೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶುಕ್ರವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕನದೊಡ್ಡಿ ಅವರು ಗಿಡಕ್ಕೆ ನೀರೆರೆಯುವ ಮೂಲಕ ವಿಶ್ವ ಪರಿಸರ ದಿನಾಚರಣೆ ಉದ್ಘಾಟಿಸಿದರು. ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ ಪರಿಸರ ದಿನ ಆಚರಿಸಲಾಯಿತು. ಈವೇಳೆ ಶಾಲೆಯ ಕಾರ್ಯದರ್ಶಿ ಗೀತಾ ಅನಂತರಾಮಯ್ಯ, ಮುಖ್ಯ ಶಿಕ್ಷಕ ಲೋಕೇಶ, ಶಿಕ್ಷಕರಾದ ಕಾವೇರಮ್ಮ, ಉಷಾ, ಜಮುನಾ ದೈಹಿಕ ಶಿಕ್ಷಕ ಜಗದೀಶ್ ಉಪಸ್ಥಿತರಿದ್ದರು.

ಪ್ಲಾಸ್ಟಿಕ್ ಕವರ್ ಬಳಸುವುದಿಲ್ಲವೆಂದು ಸಂಕಲ್ಪ ಮಾಡಿ

ಮೈಸೂರು, ಜೂ. 5– ವಿಶ್ವ ಪರಿಸರ ದಿನದ ಪ್ರಯುಕ್ತ ಬೆಮೆಲ್‌ನಗರದ ಆರ್ಚ್ ಬಳಿ ಇರುವ ತರಕಾರಿ ಸಂತೆಯಲ್ಲಿ ಬಟ್ಟೆ ಬ್ಯಾಗ್‌ಗಳನ್ನು ಸಾಂಕೇತಿಕವಾಗಿ ನಾಗರಿಕರಿಗೆ ವಿತರಿಸುವ ಮೂಲಕ ಜಾಗೃತಿ ಮೂಡಿಸಿ, ಪರಿಸರ ದಿನ ಆಚರಿಸಲಾಯಿತು.



ಈ ಜಾಗೃತಿ ಅಭಿಯಾನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಮೈಸೂರು ಆಕಾಶವಾಣಿಯ ಸಮುದ್ಯತಾ ಕೇಳುಗರ ಬಳಗದ ಅಧ್ಯಕ್ಷರಾದ ಹಾಗೂ ಕೇಂದ್ರ ಸರ್ಕಾರದ ಆರ್‌ಎಮ್‌ಪಿಯ ಹಿರಿಯ ಶುಶ್ರೂಷಕರಾದ ಕಣ್ಣೂರು ವಿಗೋವಿಂದಾಚಾರಿ ಜಾಗೃತಿ ಅಭಿಯಾನಕ್ಕೆ ಬಟ್ಟೆ ಬ್ಯಾಗ್ ಗಳನ್ನು ವಿತರಿಸುವ ಮೂಲಕ ಚಾಲನೆ ನೀಡಿದರು.

ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ, ಈ ಪರಿಸರ ಜಾಗೃತಿ ಎನ್ನುವಂತದ್ದು ಮೊದಲು ನಮ್ಮ ನಮ್ಮ ಮನೆಯಿಂದ ಪ್ರಾರಂಭವಾಗಬೇಕು. ನಾನು ಇದುವರೆಗೂ ಯಾವುದೇ ಪ್ಲಾಸ್ಟಿಕ್ ಕವರ್ ಅನ್ನು ಬಳಸುವುದಿಲ್ಲ. ನನ್ನ ಬಳಿ ಬಟ್ಟೆ ಬ್ಯಾಗ್ ಇದ್ದೇ ಇರುತ್ತದೆ. ಜೊತೆಗೆ ಈ ದಿನಾಚರಣೆ ಎನ್ನುವುದು ಒಂದು ದಿನಕ್ಕೆ ಮಾತ್ರ ಸೀಮಿತವಾಗಬಾರದು. ಪ್ರತಿ ದಿನವೂ ಕೂಡ ನಾವು ನಮ್ಮ ದಿನಚರಿಯಲ್ಲಿ ಪ್ರಕೃತಿಯನ್ನು ಪ್ರೀತಿಸಬೇಕು ಎಂದು ಕರೆ ನೀಡಿದ್ದಾರೆ.

ನಾವು ವೈಜ್ಞಾನಿಕವಾಗಿ ಚಿಂತಿಸುವುದಾದರೆ ಆರೋಗ್ಯದ ದೃಷ್ಟಿಯಲ್ಲಿ ಪರಿಸರವನ್ನು ಹೋಲಿಸಿಕೊಂಡರೆ ನಾವು ದಿನನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಪರಿಸರವನ್ನು ಅವನತಿಯತ್ತ ಸಾಗುವಂತೆ ಮಾಡುತ್ತಿದ್ದೇವೆ. ಇದಕ್ಕೆ ನಾವು ನೀವು ಎಲ್ಲರೂ ಕಾರಣರು. ಇದರಿಂದ ಹೊರಬರಬೇಕಾದರೆ ಇವತ್ತಿನಿಂದಾದರೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಮೊದಲು ಮಕ್ಕಳಿಗೆ ಪರಿಸರ ಕುರಿತಾಗಿ ತಿಳುವಳಿಕೆ ನೀಡಬೇಕು. ಆಗ ಮಾತ್ರ ಅದು ಪರಿಣಾಮಕಾರಿಯಾಗಿ ಜಾರಿಗೆ ಬರಲು ನೆರವಾಗುತ್ತದೆ ಎಂದು ಹೇಳಿದರು.

ತರಕಾರಿ ಇನ್ನಿತರ ಪದಾರ್ಥಗಳನ್ನು ಖರೀದಿಸಲು ಬಂದಿದ್ದ ನಾಗರಿಕರು ಗ್ರಾಹಕರ ಮನವೊಲಿಸಿ ಇನ್ನು ಮುಂದೆ ಪ್ಲಾಸ್ಟಿಕ್ ಬಳಸದಂತೆ ಮನವಿ ಮಾಡಿಕೊಂಡರು. ಹಲವರಿಗೆ ಬಟ್ಟೆ ಬ್ಯಾಗ್ ಗಳನ್ನು ಕೂಡ ಈ ಸಂದರ್ಭದಲ್ಲಿ ವಿತರಿಸಲಾಯಿತು.

ಮೈಸೂರಿನ ದೀಪ್ತಿ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ, ಲೇಖಕ, ವಿಮರ್ಶಕ ಕಾಳಿಹುಂಡಿ ಶಿವಕುಮಾರ್ ಮಾತನಾಡಿ ತಂತ್ರಜ್ಞಾನ ಬೆಳೆದಂತೆ ಮಾನವ ಇಂದು ಏನೆಲ್ಲಾ ಸಾಧನೆ ಮಾಡಿದ್ದಾನೆ. ಆದರೆ ಪ್ರಕೃತಿಯ ಮುಂದೆ ಕುಬ್ಜನಾಗಿದ್ದಾನೆ!. ಪರಿಸರವನ್ನು ಮಿತಿಮೀರಿ ಹಾಳು ಮಾಡುವುದರೊಂದಿಗೆ ತಾನು ತೋಡಿದ ಗುಂಡಿಗೆ ತಾನೇ ಬೀಳುವಂತಾಗಿದ್ದಾನೆ ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಚೆಲುವಾಂಬ ಉದ್ಯಾನವನದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ, ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ರವೀಂದ್ರ, ಪ್ರಮೀಳಾ ಭರತ್, ಮುಖಂಡರಾದ ಜೈ ಪ್ರಕಾಶ್, ವಾಣಿಶ್, ರಮೇಶ್, ರಾಮೇಗೌಡ, ಸೋಮಶೇಖರ್ ರಾಜು, ಶ್ರೀನಿವಾಸ್, ಸಂಜೀವಿನಿ ಕುಮಾರ್, ಶಾಂತಿ, ಕಾರ್ತಿಕ್, ಹರೀಶ್, ಪ್ರಕಾಶ್, ನಾಗೇಶ್ ಯಾದವ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್ ಮತ್ತಿತರರಿದ್ದರು.



ಕರ್ನಾಟಕ ರಸ್ತೆ ಸಾರಿಗೆ ನಿಗಮದ ಮೈಸೂರು ಗ್ರಾಮಾಂತರ ಘಟಕ–1ರಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ವರ್, ಪರಿಸರ ಅಧಿಕಾರಿ ಸುನೀಲ್, ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್ ಹೆಚ್.ತ್ಯಾಪಿ, ಡಿಎಂಇ ಮಹೇಶ್ ಪಿ., ದಿನೇಶ್‌ಕುಮಾರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಮೈಸೂರು, ಜೂ. 5–ಪ್ರಕೃತಿಯ ಸಂರಕ್ಷಣೆ ಮತ್ತು ಪರಿಸರ ಕಾಳಜಿಯನ್ನು ಮೂಡಿಸುವ ಉದ್ದೇಶದಿಂದ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ.ಸಿ.ಜಿ.ಬೆಟಸೂರ ಮಠ ಅವರ ಅಧ್ಯಕ್ಷತೆಯಲ್ಲಿ ವಿಶ್ವ ಪರಿಸರ ದಿನವನ್ನು ಆಸ್ಪತ್ರೆಯ ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಈ ಸಂದರ್ಭದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿಗಳಾದ ಡಾ.ಹೆಚ್. ಬಸವನಗೌಡಪ್ಪ, ಜೆಎಸ್‌ಎಸ್ ಮಹಾವಿದ್ಯಾಪೀಠದ ಲೆಕ್ಕ ಮತ್ತು ಲೆಕ್ಕ ಪರಿಶೋಧನಾ ನಿರ್ದೇಶಕ ಕೆ.ಆರ್. ಸಂತಾನಂ, ಆಸ್ಪತ್ರೆಯ ನಿರ್ದೇಶಕರಾದ ಡಾ.ಸಿ.ಪಿ. ಮಧು, ಪ್ರಾಂಶುಪಾಲರಾದ ಡಾ.ಡಿ. ನಾರಾಯಣಪ್ಪ, ಉಪಪ್ರಾಂಶುಪಾಲರಾದ ಡಾ.ಮಾಂತಪ್ಪ, ಉಪನಿರ್ದೇಶಕರಾದ ಡಾ.ಸುಮನ, ಉಪವೈದ್ಯಕೀಯ ಅಧೀಕ್ಷಕರಾದ ಡಾ. ಪ್ರಸಾದ್ ಎಂ.ಸಿ, ಸ್ಥಾನೀಯ ವೈದ್ಯಾಧಿಕಾರಿಗಳಾದ ಡಾ. ಶಾಂತಮಲ್ಲಪ್ಪ ಮತ್ತು ಆಸ್ಪತ್ರೆ ಸಿಬ್ಬಂದಿ ವರ್ಗದವರು ಹಾಜರಿದ್ದರು.



ಮೈಸೂರಿನ ಆಲನಹಳ್ಳಿಯ ಶಾಶ್ವತ ಸೇವಾ ಶಾಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಹಾಗೂ ಪರಿಸರ ದಿನ ಆಚರಿಸಲಾಯಿತು. ಸಾಹಿತಿ ಶಿ.ಕುಮಾರಸ್ವಾಮಿ, ಸಂಸ್ಥೆಯ ಕಾರ್ಯದರ್ಶಿ ಚೌಧರಿ, ಮುಖ್ಯಶಿಕ್ಷಕಿ ಪವಿತ್ರ ಹೆಚ್.ಪಿ, ಸಹ–ಮುಖ್ಯಶಿಕ್ಷಕ ರಮೇಶ್ ತಾಯೂರು. ಬೋಧಕ–ಬೋಧಕೇತರ ವರ್ಗ ಹಾಗೂ ಮಕ್ಕಳು ಇದ್ದರು.



ಸುತ್ತೂರು ಶ್ರೀಕ್ಷೇತ್ರದ ಜೆಎಸ್‌ಎಸ್ ವಸತಿ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಚಿತ್ರದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್, ಮುಖ್ಯಸ್ಥರು, ಶಿಕ್ಷಕರು ಹಾಗೂ ಶಾಲಾ ವಿದ್ಯಾರ್ಥಿಗಳಿದ್ದಾರೆ.

ನೈಪುಣ್ಯ ಶಾಲೆಯಲ್ಲಿ ಅರ್ಥಪೂರ್ಣ ವಿಶ್ವ ಪರಿಸರ ದಿನಾಚರಣೆ

ಮಕ್ಕಳು ಪರಿಸರ ಉಳಿಸುವ ಸಂಕಲ್ಪ ತೊಡಬೇಕು: ಪರಿಸರ ಪ್ರೇಮಿ ಪವಿತ್ರಾ ಮೋಹನ್ ಆಶಯ

ಮೈಸೂರು, ಜೂ.5– ವಿದ್ಯಾರ್ಥಿಗಳು ಪರಿಸರವನ್ನು ಉಳಿಸುವ ಸಂಕಲ್ಪ ತೊಡಬೇಕು ಎಂದು ಪರಿಸರ ಪ್ರೇಮಿ ಹಾಗೂ ಆಲಯ ಸಂಸ್ಥೆಯ ಮುಖ್ಯಸ್ಥೆ ಬಿ.ವಿ. ಪವಿತ್ರಾ ಮೋಹನ್ ಸಲಹೆ ನೀಡಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ 'ಭವಿಷ್ಯಕ್ಕಾಗಿ ಪರಿಸರ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜೀವ ವೈವಿಧ್ಯತೆ, ನೆಲ–ಜಲ, ಹಸಿರು ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾದಾಗ ಮಾತ್ರ ಪರಿಸರ ಉಳಿಯುತ್ತದೆ ಎಂದು ಅಭಿಪ್ರಾಯಿಸಿದರು.





ಪರಿಸರ ದಿನಾಚರಣೆ ಅಂಗವಾಗಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ 'ಭವಿಷ್ಯಕ್ಕಾಗಿ ಪರಿಸರ' ಕಾರ್ಯಕ್ರಮದ ವೇಳೆ ಗಿಡ ನೆಟ್ಟು ನೀರೆರೆಯಲಾಯಿತು. ಮಕ್ಕಳು ಅಭಿನಯಿಸಿದ 'ಪ್ರಕೃತಿ ಉಳಿಸಿ, ಮರಗಳನ್ನು ಬೆಳೆಸಿ' ಕಿರು ನಾಟಕದ ದೃಶ್ಯವಿದು. (ಬಲಚಿತ್ರ).

ಪರಿಸರವೇ ನಮ್ಮ ಭವಿಷ್ಯ ಎಂಬ ವಾಸ್ತವ ಸತ್ಯವನ್ನು ಅರಿತು ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ಪ್ರಾಥಮಿಕ ಶಿಕ್ಷಣ ಹಂತದಿಂದಲೇ ಉತ್ತಮ ಗಾಳಿ, ಉತ್ತಮ ನೀರು ಭವಿಷ್ಯದಲ್ಲಿ ಸವಾಲಾಗಿ ಪರಿಣಮಿಸಲಿದೆ ಎಂಬುದನ್ನು ಮನದಟ್ಟು ಮಾಡುವುದು ಪಠ್ಯಕ್ರಮದ ಭಾಗವಾಗಬೇಕು. ಈಗಾಗಲೇ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ 'ಹಸಿರು ಶಿಕ್ಷಣ'ವನ್ನು ಅಳವಡಿಸಿಕೊಂಡಿರುವುದು ಶ್ಲಾಘನೀಯ ಎಂದರು.

ಪ್ರತಿಯೊಂದು ಮಗುವಿಗೂ ಒಂದು ಗಿಡ ನೆಟ್ಟು, ಅದನ್ನು ಪೋಷಿಸಿ ಮರವಾಗಿ ಬೆಳೆಸುವ ಜವಾಬ್ದಾರಿ ನೀಡಿರುವುದು ಅನುಕರಣೀಯ. ಈ ಮೂಲಕ ಹಸಿರು ಉಳಿಸಿ–ಬೆಳೆಸುವ ಹಾಗೂ ವೃಕ್ಷ ಸಂಪತ್ತನ್ನು ವೃದ್ಧಿಗೊಳಿಸುವ ಕಾರ್ಯಕ್ಕೆ ಮಕ್ಕಳನ್ನು ತೊಡಗಿಸಿದಂತಾಗಿದೆ. ಇಂತಹ ಚಟುವಟಿಕೆಗಳನ್ನು ಎಲ್ಲಾ ಶಿಕ್ಷಣ ಸಂಸ್ಥೆಗಳೂ ಅನುಸರಿಸಿದರೆ ಒಳ್ಳೆಯದು ಎಂದು ಹೇಳಿದರು.

ಇದೇ ವೇಳೆ 'ಪ್ರಕೃತಿಯನ್ನು ಉಳಿಸಿ, ಮರಗಳನ್ನು ಬೆಳೆಸಿ' ಕಿರು ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಸಾಂಕೇತಿಕವಾಗಿ ಗಿಡಮರಗಳನ್ನು ನೆಟ್ಟು, ವಿದ್ಯಾರ್ಥಿಗಳು ತಲಾ ಒಂದೊಂದು ಗಿಡ ನೆಟ್ಟು, ಪೋಷಿಸುವ ಸಂಕಲ್ಪ ಬೋಧನೆ ಮಾಡ ಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರಾದ ಕೆ.ಎಸ್. ದೇಚಮ್ಮ, ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

ಮೈಸೂರು ಮಿತ್ರ

ಶನಿವಾರ 6 ಜೂನ್ 2026

ಜಮೀರ್‌ಗೆ ಡಿಸಿಎಂ ಸ್ಥಾನ ನೀಡುವಂತೆ ಆಗ್ರಹಿಸಿ ಪಂಜಿನ ಮೆರವಣಿಗೆ



ಜಮೀರ್ ಅಹಮದ್‌ಗೆ ಡಿಸಿಎಂ ಖಾತೆ ನೀಡುವಂತೆ ಆಗ್ರಹಿಸಿ ಪಂಜಿನ ಮೆರವಣಿಗೆ ನಡೆಸಲಾಯಿತು.

ಮಂಡ್ಯ: ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ಸಚಿವ ಸ್ಥಾನ ಕೈತಪ್ಪಿರುವುದನ್ನು ಖಂಡಿಸಿ ಮುಸ್ಲಿಂ ಮುಖಂಡರು ಮಂಡ್ಯದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ನಗರದ ಕಾವೇರಿ ಭವನದ ಕಛೇರಿ ಆವರಣದಿಂದ ಜೆಸಿ ವೃತ್ತದವರೆಗೆ ಪಂಜಿನ ಮೆರವಣಿಗೆ ನಡೆಸಿ ಜಮೀರ್ ಅಹಮದ್‌ಗೆ ಡಿಸಿಎಂ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಮುಡಾ ಮಾಜಿ ಅಧ್ಯಕ್ಷ ನಯೀಮ್ ಮಾತನಾಡಿ ಮೊದಲ ಪಟ್ಟಿಯಲ್ಲಿ ಜಮೀರ್ ಅಹಮ್ಮದ್ ಅವರಿಗೆ ಸಚಿವ ಸ್ಥಾನ ಸಿಗಬೇಕಿತ್ತು. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಕಷ್ಟು ಶ್ರಮ ವಹಿಸಿದ್ದಾರೆ. ಸೋನಿಯಾ ಗಾಂಧಿ, ಖರ್ಗೆ, ರಾಹುಲ್ ಗಾಂಧಿಯವರು ಸಿದ್ದರಾಮಯ್ಯ, ಡಿಕೆಶಿ ಅವರ ಮೇಲೆ ತುಂಬಾ ವಿಶ್ವಾಸ ಇದೆ. ಕೂಡಲೇ ಜಮೀರ್ ಅಹಮ್ಮದ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷ 136 ಸೀಟ್ ಗೆಲ್ಲುವುದಕ್ಕೆ ಜಮೀರ್ ಅವರ ಪಾತ್ರ ಇದೆ. ಅದನ್ನು ಪರಿಗಣಿಸಿ ಉನ್ನತ ಸ್ಥಾನ ಕೊಟ್ಟು ಗೌರವಿಸಬೇಕು.ಇಲ್ಲದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟದ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮುಡಾ ನಿರ್ದೇಶಕ ಇದ್ರೀಸ್ ಖಾನ್, ಮುಖಂಡರಾದ ಮುಜಾಹಿದ್, ಪ್ರಸನ್ನ, ಅಂಜರ್ ಪಾಷಾ, ಇಕ್ಬಾಲ್, ನೂರ್ ಅಹಮ್ಮದ್ ಸೇರಿದಂತೆ ಮುಸ್ಲಿಂ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಜಾಗತಿಕ ತಾಪಮಾನದಿಂದ ಅಕಾಲಿಕ ಮಳೆ, ಬರಗಾಲ

ಮಂಡ್ಯ: ಪ್ರಸ್ತುತ ದಿನೇ ದಿನೇ ಜಾಗತಿಕ ತಾಪಮಾನ ಏರಿಕೆಯಿಂದ ಅಕಾಲಿಕ ಮಳೆ–ಬರಗಾಲ ಎದುರಿಸುತ್ತಿದ್ದೇವೆ ಎಂದು ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ ಅಭಿಪ್ರಾಯಪಟ್ಟರು.

ನಗರದಲ್ಲಿರುವ ಶಿವನಂಜಪ್ಪ ಉದ್ಯಾನವನದ ದೇವರಕಾಡು ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನ ಮತ್ತು ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ದೇವರಕಾಡು ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ.

ಪರಿಸರ ಸಂರಕ್ಷಣೆ ಎನ್ನುವುದು ಕೇವಲ ಸರ್ಕಾರ ಅಥವಾ ಅರಣ್ಯ ಇಲಾಖೆಯ ಜವಾಬ್ದಾರಿಯಲ್ಲ, ಪ್ರತಿ ಮನುಷ್ಯನ ಕರ್ತವ್ಯ, ಪ್ರಾಣಿ–ಪಕ್ಷಿಗಳಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲ, ಆದರೆ ಮನುಷ್ಯನ ಅತಿಯಾಸೆಯಿಂದ ಪಕೃತಿಗೆ ಹಾನಿಯಾಗುತ್ತಿದೆ ಎಂದು ನುಡಿದರು.

ನಾವು ಉಸಿರಾಡುವ ಗಾಳಿ, ಕುಡಿಯುವ ನೀರು, ಮತ್ತು ಬದುಕಲು ಆಧಾರವಾಗಿರುವ ಭೂಮಿ ಎಲ್ಲವೂ ಪ್ರಕೃತಿ ನಮಗೆ ಕೊಟ್ಟಿರುವ ಅದ್ಭುತ ಕೊಡುಗೆಗಳಾಗಿವೆ. ಆದರೆ ಇಂದು ಮಾನವನ ಅತಿಯಾದ ಆಸೆ ಮತ್ತು ಸ್ವಾರ್ಥದಿಂದಾಗಿ ಪರಿಸರವು ತೀವ್ರವಾಗಿ ಕಲುಷಿತಗೊಳ್ಳುತ್ತಿದೆ. ನಾವು ಅಭಿವೃದ್ಧಿಯ ಹೆಸರಿನಲ್ಲಿ ಕಾಡುಗಳನ್ನು ನಾಶಪಡಿಸುತ್ತಿದ್ದೇವೆ, ಜಲಮೂಲಗಳನ್ನು ಕಲುಷಿತಗೊಳಿಸುತ್ತಿದ್ದೇವೆ ಎಂದು ಎಚ್ಚರಿಸಿದರು.

ಪ್ಲಾಸ್ಟಿಕ್ ಮುಕ್ತ ಜೀವನಕ್ಕೆ ಅಣಿಯಾಗೋಣ, ಒಮ್ಮೆ ಬಳಸಿ ಬಿಸಾಡುವ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ನೀರಿನ ಉಳಿತಾಯ ಮಾಡೋಣ, ಹನಿ ಹನಿ ನೀರನ್ನು ಕೂಡ ವ್ಯರ್ಥ ಮಾಡದೆ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಹಸಿರು ಜಾಗೃತಿ ಮೂಡಿಸೋಣ, ಮುಂದಿನ ಪೀಳಿಗೆಗೆ ಆಸ್ತಿಪಾಸ್ತಿ ಮಾಡುವುದಕ್ಕಿಂತ ಮುಂಚಿತವಾಗಿ ಶುದ್ಧವಾದ ಪರಿಸರವನ್ನು ಉಳಿಸಿ ಕೊಡಬೇಕು. ಪ್ರಕೃತಿಯನ್ನು ನಾವು ರಕ್ಷಿಸಿದರೆ, ಪ್ರಕೃತಿ ನಮ್ಮನ್ನು ರಕ್ಷಿಸುತ್ತದೆ. ಬನ್ನಿ, ಇಂದಿನಿಂದಲೇ ನಮ್ಮ ಮನೆಯ ಸುತ್ತಮುತ್ತ ಹಸಿರನ್ನು ಬೆಳೆಸಲು ಮತ್ತು ಪರಿಸರವನ್ನು ಸ್ವಚ್ಛವಾಗಿಡಲು ನಾವೆಲ್ಲರೂ ಕೈಜೋಡಿಸೋಣ ಎಂದರು.

ಕಾರ್ಯಕ್ರಮದಲ್ಲಿ ಮಹೇಶ್ವರಿ ಮಹಿಳಾ ಸ್ವ–ಸಹಾಯ ಸಂಘದ ಪ್ರತಿನಿಧಿಗಳಾದ ವಿನುತಾ, ರೇಖಾ, ಜಯಲಕ್ಷ್ಮಿ, ಹರಿಣಿ, ವಸಂತಾ, ನಗರಸಭೆ ಅಧಿಕಾರಿಗಳಾದ ಪುಟ್ಟಸ್ವಾಮಿ ಮತ್ತಿತರರಿದ್ದರು.

ಕಿಕ್ಕೇರಿ ಬಳಿ ಚಿರತೆ ದಾಳಿಗೆ ಎಮ್ಮೆ ಬಲಿ

ಕಿಕ್ಕೇರಿ: ಸಮೀಪದ ಮಾಕವಳ್ಳಿ ಗ್ರಾಮದಲ್ಲಿ ತಡರಾತ್ರಿ ಚಿರತೆಯೊಂದು ಎಮ್ಮೆ ಮೇಲೆ ದಾಳಿ ಮಾಡಿ ಕೊಂದು ಹಾಕಿರುವ ಪ್ರಕರಣ ಗುರುವಾರ ರಾತ್ರಿ ಸಂಭವಿಸಿದೆ.



ಚಿರತೆ ದಾಳಿಗೆ ಬಲಿಯಾದ ಎಮ್ಮೆ ರೈತ ಮಹಿಳೆ ನೇತ್ರಾವತಿಗೆ ಸೇರಿದ್ದಾಗಿದೆ. ಎಂದಿನಂತೆ ಮನೆಯ ಹೊರಗಡೆ ಕೊಟ್ಟಿಗೆಯಲ್ಲಿ ಎಮ್ಮೆಯನ್ನು ಕಟ್ಟಿಹಾಕಲಾಗಿತ್ತು. ಚಿರತೆ ಕೊಟ್ಟಿಗೆಗೆ ನುಗ್ಗಿ ಎಮ್ಮೆಯನ್ನು ಕೊಂದು ಎಳೆದಾಡಿಕೊಂಡು ಸ್ವಲ್ಪ ದೂರ ಹೋಗಿದೆ. ಅರೆಬರೆ ತಿಂದು ಮೃತದೇಹವನ್ನು ಬಿಟ್ಟು ಹೋಗಿದೆ.

ಎಂದಿನಂತೆ ಬೆಳಗ್ಗೆ ಎದ್ದು ನೋಡಲಾಗಿ ಎಮ್ಮೆ ಕಾಣದಿರುವುದನ್ನು ಕಂಡು ಹುಡುಕಾಡಲಾಗಿ ಸ್ವಲ್ಪ ದೂರದಲ್ಲಿ ಎಮ್ಮೆ ಅರೆಬರೆ ತಿಂದ ದೇಹ ಪತ್ತೆಯಾಗಿದೆ. ಚಿರತೆ ದಾಳಿಯಿಂದ ಜಾನುವಾರುಗಳನ್ನು ಸಾಕಲು, ಹೊಲಗದ್ದೆಗಳಲ್ಲಿ ಜಾನುವಾರುಗಳನ್ನು ಮೇಯಿಸಲು ಒಂಟಿಯಾಗಿ ಓಡಾಡಲು ಆತಂಕಪಡುವಂತಾಗಿದೆ. ಚಿರತೆ ಸೆರೆಹಿಡಿಯುವುದರೊಂದಿಗೆ ಸೂಕ್ತ ಪರಿಹಾರ ನೀಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳಲ್ಲಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಲಗೂರು ಬಳಿ ಜೂಜುಕೋರರ ಬಂಧನ

ಹಲಗೂರು: ಸಮೀಪದ ಮುತ್ತತ್ತಿಯಲ್ಲಿ ಅಕ್ರಮವಾಗಿ ಜೂಜಾಟದಲ್ಲಿ ತೊಡಗಿದ್ದ 11 ಮಂದಿಯನ್ನು ಹಲಗೂರು ಪೊಲೀಸರು ಬಂಧಿಸಿ, ಪಣಕ್ಕಿರಿಸಿದ್ದ 2.98 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ.

ತಮಿಳುನಾಡಿನ ಹೊಸೂರು ಮೂಲದ 11 ಮಂದಿ ಸ್ನೇಹಿತರು ತಮ್ಮ ಸಹೋದ್ಯೋಗಿಯೊಬ್ಬರ ಹುಟ್ಟುಹಬ್ಬ ಆಚರಣೆಯ ನಿಮಿತ್ತ ಬುಧವಾರ ಮುತ್ತತ್ತಿಗೆ ಬಂದು ತಂಗಿದ್ದರು. ಊಟದ ನಂತರ ಪಾರ್ಟಿ ಹಾಲ್‌ನಲ್ಲಿ ಜೂಜಾಟದಲ್ಲಿ ತೊಡಗಿದ್ದರು ಎಂದು ತಿಳಿದು ಬಂದಿದೆ.

ವಿಷಯ ತಿಳಿದ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಎಸ್.ಶ್ರೀಧರ್ ಅವರ ಮಾರ್ಗದರ್ಶನದಲ್ಲಿ ಪಿಎಸ್‌ಐ ಲೋಕೇಶ್ ನೇತೃತ್ವದ ತಂಡ ದಾಳಿ ನಡೆಸಿ ಜೂಜುಕೋರರನ್ನು ವಶಕ್ಕೆ ಪಡೆದು ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಮೋದಿಯವರ ಯೋಜನೆಗಳು ದೇಶದ ಸುಭದ್ರತೆಗೆ ಭದ್ರ ಬುನಾದಿ

ಮಳವಳ್ಳಿ: ಮೈಸೂರು ಮಹಾರಾಜರ ಕಾಲಘಟ್ಟದ ಸುವರ್ಣ ಯುಗದತ್ತ ಭಾರತವನ್ನು ಕೊಂಡೊಯ್ಯುವ ಪ್ರಧಾನಿ ನರೇಂದ್ರ ಮೋದಿಜಿಯವರ ದಿಟ್ಟ ಸಂಕಲ್ಪದ ಯೋಜನೆಗಳು ಭಾರತದ ಸುಭದ್ರತೆಗೆ ಭದ್ರ ಭುನಾದಿಯಾಗಿವೆ ಎಂದು ಮೈಸೂರು ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.



ಧಾರ್ಮಿಕ ಸಮಾರಂಭವನ್ನು ಉದ್ಘಾಟಿಸುತ್ತಿರುವ ಗಣ್ಯರು.

ಪಟ್ಟಣದ ಭಗವಾನ್ ಬುದ್ದ ಸಾಮಾಜಿಕ ಮತ್ತು ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ.ವೈ.ಎಸ್.ಸಿದ್ದರಾಜು ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಧಾರ್ಮಿಕ ಸಮಾರಂಭದಲ್ಲಿ ಭಗವಾನ್ ಬುದ್ದ ಪದವಿ ಹಾಗೂ ಪದವಿ ಪೂರ್ವ ಕಾಲೇಜಿನ ನವೀಕೃತ ಕಟ್ಟಡ ಮತ್ತು ವೇದಿಕೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಮೋದೀಜಿಯವರ ದೂರದೃಷ್ಟಿಯ ಶಾಶ್ವತ ಯೋಜನೆಗಳ ಯಶಸ್ಸಿಗೆ ಪ್ರತಿಯೊಬ್ಬರು ಕಂಕಣಬದ್ದರಾಗಿ ಕೈಜೋಡಿಸುವಂತೆ ಕರೆ ನೀಡಿದರು.

ಯಾವುದೇ ಯೋಜನೆಗಳು ಜಾರಿಯಾದ ತಕ್ಷಣ ಫಲ ನೀಡಬೇಕು ಎಂದು ಬಯಸುವುದು ಸರಿಯಲ್ಲ. ಸ್ವಲ್ಪ ಸಮಯ ಹಿಡಿಯುತ್ತದೆ. ಅಲ್ಲಿವರೆಗೆ ತಾಳ್ಮೆಯಿಂದ ಕಾಯಬೇಕು ಎಂದರು. ಭಗವಾನ್ ಬುದ್ದರ ಹೆಸರಿನಲ್ಲಿ 12ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ತೆರೆದು ಗ್ರಾಮೀಣ ಭಾಗದ ಬಡ ಕುಟುಂಬಗಳ ವಿದ್ಯಾರ್ಥಿಗಳಿಗೆ ಅತ್ಯಂತ ರಿಯಾಯಿತಿ ದರದಲ್ಲಿ ಉನ್ನತ ಶಿಕ್ಷಣ ಒದಗಿಸಿ ಆ ಕುಟುಂಬಗಳ ಬದುಕಿಗೆ ಬೆಳಕಾಗಿರುವ ಡಾ. ಯಮದೂರು ಸಿದ್ದರಾಜು ಅವರ ಶೈಕ್ಷಣಿಕ ಕ್ಷೇತ್ರದ ಸೇವಾ ಕಾರ್ಯವನ್ನು ಯದುವೀರ್ ಒಡೆಯರ್ ಈ ಸಂದರ್ಭದಲ್ಲಿ ಪ್ರಶಂಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಭಗವಾನ್ ಬುದ್ದ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಡಾ. ಯಮದೂರು ಸಿದ್ದರಾಜು ಅವರು ಬಹಳ ಕಾಲದಿಂದ ಮಳವಳ್ಳಿ ಪಟ್ಟಣಕ್ಕೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಕರೆಸಬೇಕೆಂಬ ತಾಲೂಕಿನ ಬಹಳಷ್ಟು ಜನರ ಒತ್ತಾಸೆ ಇಂದು ಈಡೇರಿದ್ದು ಸಮಾರಂಭಕ್ಕೆ ಆಗಮಿಸಿ ಶುಭ ಕೋರಿದ ಎಲ್ಲಾ ಗಣ್ಯರಿಗೂ ಧನ್ಯವಾದ ಅರ್ಪಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾದ ಆರ್.ರಘು ಅವರು ಚಂಕಮನ ವಿಶೇಷ ಸಂಚಿಕೆ ಬಿಡುಗಡೆಗೊಳಿಸಿದರೆ ಹಾಗೂ ವಿಧಾನಪರಿಷತ್ ಸದಸ್ಯರಾದ ವಿವೇಕಾನಂದ ಅವರು ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಿದರು. ಸಮಾರಂಭದಲ್ಲಿ ಮಂಡ್ಯದ ಭಗವಾನ್ ಬುದ್ದ ವಿಶೇಷ ಚೇತನರ ಶಾಲಾ ಮಕ್ಕಳು ಭಾರಿ ಹಾರ ತುರಾಯಿಗಳ ಜೊತೆಗೆ ಪುಷ್ಪವೃಷ್ಠಿ ಸುರಿಸಿ ಯಮದೂರು ಸಿದ್ದರಾಜು ಅವರಿಗೆ ಹುಟ್ಟುಹಬ್ಬದ ಶುಭಾಯಗಳನ್ನು ಕೋರಿದರು. ಬೌದ್ದ ಬಿಕ್ಕುಗಳಾದ ಪೂಜ್ಯ ಮನೋರಖ್ಖಿತ ಬಂತೇಜಿ ಅವರು ದಿವ್ಯ ಸಾನಿದ್ಯ ವಹಿಸಿ ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣಕ್ಕೆ ಪ್ರಥಮ ಬಾರಿಗೆ ಅಗಮಿಸಿದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ವೈ.ಎಸ್ ಸಿದ್ದರಾಜು ಅಭಿಮಾನಿಗಳು ಬಸ್ ನಿಲ್ದಾಣದಿಂದ ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ವೇದಿಕೆಗೆ ಕರೆದೊಯ್ದರು.

ಸಮಾರಂಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಇಂದ್ರೇಶ್, ಜಿಲ್ಲಾ ಬಿಜೆಪಿ ರೈತಮೋರ್ಚಾ ಅಧ್ಯಕ್ಷರಾದ ಅಶೋಕ್ ಜಯರಾಂ, ರಾಶಿ ಚಿತ್ರದ ನಾಯಕ ನಟ ಆದಿತ್ಯ ಶಶಿಕುಮಾರ್, ನಾಯಕಿ ಸಮೀಕ್ಷ ನಿರ್ಮಾಪಕ ಅಖಿಲೇಶ್, ತಾಲೂಕು ಕಸಾಪ ಅಧ್ಯಕ್ಷ ಡಾ.ಎಲ್. ಚೇತನ್ ಕುಮಾರ್ ಜಾನಪದ ಕಲಾವಿದ ಮಹದೇವಸ್ವಾಮಿ, ಅಶೋಕ್, ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯರಿಗೆ ಬಡ್ಡಿ ರಹಿತ ಸಾಲ



ಕಾರ್ಯಕ್ರಮದಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿದರು.

ಪಾಂಡವಪುರ: ಮಹಿಳೆಯ ಆರ್ಥಿಕ ಸಬಲೀಕರಣಕ್ಕಾಗಿ ಒಕ್ಕೂಟದಿಂದ ಕ್ಷೀರ ಸಂಜೀವಿನಿ ಯೋಜನೆಯಡಿ ಮಹಿಳೆಯರಿಗೆ ಬಡ್ಡಿ ರಹಿತ ಸಾಲಸೌಲಭ್ಯ ನೀಡಲಾಗುತ್ತಿದೆ ಎಂದು ಮನ್ ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ತಾಲೂಕಿನ ವದೇಸಮುದ್ರ ಗ್ರಾಮದಲ್ಲಿ ಕೆಎಂಎಫ್ ಹಾಗೂ ಮನ್‌ಮುಲ್ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಕ್ಷೀರಸಂಜೀವಿನಿ ಹಂತ ಯೋಜನೆಯಡಿ 7 ಲಕ್ಷವರೆಗಿನ ಬಡ್ಡಿರಹಿತ ಸಾಲ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಬಳಿಕ ಮಾತನಾಡಿದರು.

ಕೆಎಂಎಫ್ ಹಾಗೂ ಮನ್‌ಮುಲ್ ಒಕ್ಕೂಟವು ಮಹಿಳೆಯರನ್ನು ಹೈನುಗಾರಿಕೆ ಮೂಲಕ ಆರ್ಥಿಕವಾಗಿ ಸಬಲೀಕರಣಗೊಳಿಸಬೇಕು ಎಂಬ ಉದ್ದೇಶದಿಂದ ಆಯ್ದ ಮಹಿಳಾ ಸಹಕಾರ ಸಂಘಗಳಿಗೆ ಶೂನ್ಯ ಬಡ್ಡಿಯಲ್ಲಿ ತಲಾ 50 ಸಾವಿರದಂತೆ 7 ಲಕ್ಷ ಹಣವನ್ನು ವಿತರಣೆ ಮಾಡಲಾಗುತ್ತಿದೆ. ತಾಲೂಕಿನಲ್ಲಿ 148 ಡೇರಿಗಳ ಪೈಕಿ 71 ಮಹಿಳಾ ಸಹಕಾರ ಸಂಘಗಳಿಂದ ಉತ್ತಮವಾಗಿ ಕೆಲಸ ಮಾಡುತ್ತಿರುವ ಯಾವುದೇ ಸಮುದ್ರ ಗ್ರಾಮದ ಡೇರಿಯನ್ನು ಆಯ್ಕೆ ಮಾಡಿ ಸಾಲ ವಿತರಣೆ ಮಾಡಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಮನ್ ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರ್ಣಾಧಿಕಾರಿ ಉಷಾ, ಕಾರ್ಯಕರ್ತೆ ಸುಕನ್ಯ, ಡೇರಿ ಅಧ್ಯಕ್ಷೆ ಬಸಮಣಿ, ಉಪಾಧ್ಯಕ್ಷೆ ಸಾಕಮ್ಮ, ನಿರ್ದೇಶಕರಾದ ರತ್ನಮ್ಮ, ಶಶಿಕಲಾ, ವಸಂತ, ನಂಜಮ್ಮ, ಸರಸ್ವತಮ್ಮ, ಶಶಿಕಲಾ, ಸುನೀತ, ಕಾರ್ಯದರ್ಶಿ ಮೀನಾಕ್ಷಿ, ಚಿಕ್ಕಾಡೆ ಚೇತನ್, ಸೊಸೈಟಿ ಅಧ್ಯಕ್ಷ ಎನ್.ಪಿ. ದಿನೇಶ್, ನಿರ್ದೇಶಕ ಬೊಮ್ಮರಾಜು, ಮಹದೇವಪ್ಪ ಇನ್ನಿತರರಿದ್ದರು.

ನಾಳೆ ಅಕ್ಷರ ಜಾತ್ರೆ, ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ

ಮಂಡ್ಯ: ಮಂಡ್ಯದ ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಅಖಿಲ ಕರ್ನಾಟಕ ಪ್ರಥಮ ಮಹಿಳಾ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಮತ್ತು ಕವಿಗೋಷ್ಠಿ ಸಮಾರಂಭವನ್ನು ಜೂ.7ರಂದು ಬೆಳಗ್ಗೆ 10.30ಕ್ಕೆ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ವಿವಿ ಸಿಂಡಿಕೇಟ್‌ನ ನಿವೃತ್ತ ನಿರ್ದೇಶಕ ಹಾಗೂ ಬಿಜೆಪಿ ಸಹ ಪ್ರಭಾರಿ ಡಾ.ಈ.ಸಿ.ನಿಂಗರಾಜೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಖ್ಯಾತ ಕವಿ ಹಾಗೂ ವೈದ್ಯ ಡಾ.ಚಂದ್ರಶೇಖರ್ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತು ಮಾತನಾಡಲಿದ್ದಾರೆ. ಖ್ಯಾತ ಕವಯತ್ರಿ ಬಿ.ಆರ್.ಉಮಾ ಸಮ್ಮೇಳನಾಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಯೋಗಾನಂದ ಆರ್.ಕೆರಗೋಡು ಕನ್ನಡ ರತ್ನ ಪ್ರಶಸ್ತಿ ಪ್ರದಾನ ಮಾಡಿದರೆ, ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾಧ್ಯಕ್ಷ ಬನ್ನಂಗಾಡಿ ಸಿದ್ದಲಿಂಗಯ್ಯ ನಾಲ್ವಡಿ ಪ್ರಶಸ್ತಿ ಪ್ರದಾನ ಮಾಡುವರು. ಸಮಾಜ ಸೇವಕ ಆನಂದ್ ಸಿ.ತಿರುಮಲ ಸಮ್ಮೇಳನಾಧ್ಯಕ್ಷರಿಗೆ ಗೌರವ ಸಲ್ಲಿಸುವರು.

ಒಂದನೇ ಪುಟದಿಂದ

ರಾಮಲಿಂಗಾರೆಡ್ಡಿ ರಾಜೀನಾಮೆ

ಖಾತೆ ಹಂಚಿಕೆ ವಿಷಯದಲ್ಲಿ ಹಿರಿಯರನ್ನು ಪರಿಗಣಿಸಿಲ್ಲ, ತಾರತಮ್ಯ ಮುಂದುವರೆದರೆ, ನನಗೆ ವಹಿಸಿ ರುವ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಹೊಣೆ ನಿರ್ವಹಿಸುವುದಿಲ್ಲ ಎಂದರು.

ಕಳೆದ ಮೂರು ವರ್ಷಗಳಿಂದ ಆಹಾರ ಇಲಾಖೆ ನಿರ್ವಹಿಸಿದ್ದೇನೆ, ತಮಗೆ ಮತ್ತೆ ಆದೇ ಖಾತೆ ನೀಡಿದ್ದಾರೆ, ಕೃಷಿ ಇಲ್ಲವೆ ಸಮಾಜ ಕಲ್ಯಾಣ ಇಲಾಖೆ ಕೊಡಿ ಎಂಬುದಾಗಿ ಮನವಿ ಮಾಡಿದ್ದೆ. ನಾನು ಎಂಟು ಬಾರಿ ಸಂಸದನಾಗಿ, ಕೇಂದ್ರದಲ್ಲಿ ಸಚಿವನಾಗಿ ಕಾರ್ಯನಿರ್ವಹಿಸಿದ್ದು, ನನಗಿಂತ ಕಿರಿಯ ಸಚಿವರಿಗೆ ಒಳ್ಳೆಯ ಖಾತೆಗಳನ್ನು ನೀಡಿ, ನನಗೆ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ನೀಡಿರುವುದು ಸರಿಯಲ್ಲ. ನಾನು ಪಕ್ಷದ ನಿಷ್ಠಾವಂತ, ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ, ಆದರೆ, ಇಲಾಖೆ ಹೊಣೆಗಾರಿಕೆ ವಹಿಸುವುದಿಲ್ಲ ಎಂದರು.

ಪುನರಾಯ್ಕೆ ಬಯಸಿ ಖರ್ಗೆ ನಾಮಪತ್ರ ಸಲ್ಲಿಕೆ

ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷ ರೆಹಮಾನ್ ಖಾನ್ ಪುತ್ರ ಮನ್ಸೂರ್ ಖಾನ್ ಅವರಿಗೆ ಎಐಸಿಸಿ ಅವಕಾಶ ಕಲ್ಪಿಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ ಅವರ ಅವಧಿ ಮುಕ್ತಾಯವಾಗುತ್ತಿದೆ. ಕರ್ನಾಟಕದಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಈ ನಾಲ್ಕು ಸ್ಥಾನಗಳು ಸೇರಿ ರಾಜ್ಯಸಭೆಯ ಒಟ್ಟು 24 ಸ್ಥಾನಗಳಿಗೆ ಇದೇ 18ರಂದು ಚುನಾವಣೆ ನಿಗದಿಯಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಮೂರು ಹಾಗೂ ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ. ನಾಮಪತ್ರ ಸಲ್ಲಿಸಲು ಜೂನ್ 8 ಕೊನೆ ದಿನವಾಗಿದೆ. ನಾಮಪತ್ರಗಳ ಪರಿಶೀಲನೆ 9ಕ್ಕೆ ನಡೆಯಲಿದ್ದು, ನಾಮಪತ್ರ ಹಿಂದಕ್ಕೆ ಪಡೆಯಲು 10 ಕೊನೆ ದಿನ. 18ರಂದು ಮತದಾನ ನಡೆಯಲಿದೆ. ಮತಗಳ ಎಣಿಕೆ ಸಂಜೆ 5ಕ್ಕೆ ನಡೆಯಲಿದೆ.

ಬೆಳಗ್ಗೆ 10ಕ್ಕೆ ಹಾಜರಾತಿ ಕಡ್ಡಾಯ

ಮತ್ತು ಜಿಲ್ಲಾಮಟ್ಟದ ಹಿರಿಯ ಅಧಿಕಾರಿ ಎಲ್ಲರೂ ಬೆಳಗ್ಗೆ 10 ಗಂಟೆಯೊಳಗೆ ಕರ್ತವ್ಯ ಆಪ್‌ನಲ್ಲಿ ಕಚೇರಿಗೆ ಬರುವ ಮತ್ತು ತೆರಳುವ ವೇಳೆಯನ್ನು ದಾಖಲಿಸುವಂತೆ ಸೂಚಿಸಲಾಗಿದೆ. ಪ್ರತಿದಿನ ಹಾಜರಾತಿ ದಾಖಲಿಸದ ಜಿಲ್ಲಾವಾರು ಅಧಿಕಾರಿ ಮತ್ತು ಸಿಬ್ಬಂದಿ ಮಾಹಿತಿಯನ್ನು ಕೃತಕ ಬುದ್ಧಿಮತ್ತೆ (ಎಐ) ತಂತ್ರಾಂಶ ಮೂಲಕ ಆಯಾ ಇಲಾಖಾ ಮುಖ್ಯಸ್ಥರಿಗೆ ಸ್ವಯಂಚಾಲಿತ ವರದಿ ಕಳುಹಿಸಬೇಕು. ಇಲಾಖಾ ಮುಖ್ಯಸ್ಥರು ತಮ್ಮ ವೈಯಕ್ತಿಕ ಲಾಗಿನ್ ಮೂಲಕ ಕರ್ತವ್ಯ ಡ್ಯಾಶ್ ಬೋರ್ಡ್‌ನಲ್ಲಿ ಪ್ರತಿದಿನ ಕಡ್ಡಾಯವಾಗಿ ಹಾಜರಾತಿ ವರದಿ ಪರಿಶೀಲಿಸಬೇಕು, ಹಾಜರಾತಿ ದಾಖಲಿಸದವರಿಗೆ ಸೂಕ್ತ ಸೂಚನೆ ನೀಡಬೇಕು. ಒಂದು ವೇಳೆ ಅಧಿಕಾರಿ ಹಾಗೂ ಸಿಬ್ಬಂದಿ ಕಛೇರಿ ಕರ್ತವ್ಯದ ಮೇಲೆ ಪ್ರವಾಸದಲ್ಲಿದ್ದರೆ ಓಡಿಡಿ ಆಯ್ಕೆ ಕಾಲಂನಲ್ಲಿ ನಮೂದಿಸಬೇಕು, ಇದನ್ನು ಸಂಬಂಧಪಟ್ಟ ಮೇಲಾಧಿಕಾರಿ ಧೃಡಿಕರಿಸಬೇಕು ಎಂದು ಸೂಚಿಸಲಾಗಿದೆ.

ಒಪ್ಪದಿದ್ದರೆ ರಾಜೀನಾಮೆ ಅಂಗೀಕರಿಸಿ

ಅದರಂತೆ ಖಾತೆಯನ್ನೂ ನೀಡಿದ್ದೀರಿ. ಇದೇ ಖಾತೆಗೆ ಪಟ್ಟು ಹಿಡಿದು ಬೇರೆ ಖಾತೆ ನಿರ್ವಹಿಸಲು ಒಪ್ಪದಿದ್ದರೆ, ಸಚಿವರಾಗಲು ಸಮರ್ಥರಲ್ಲ. ಮನವೊಲಿಸಲು ಒಮ್ಮೆ ಪ್ರಯತ್ನಿಸಿ, ಪಕ್ಷದ ಮನವಿಗೆ ಸ್ಪಂದಿಸದಿದ್ದರೆ, ರಾಜೀನಾಮೆ ಅಂಗೀಕರಿಸಿ ಮುಂದೆ ನೋಡೋಣ ಎಂದಿದ್ದಾರೆ.

ರಾಮಲಿಂಗಾ ರೆಡ್ಡಿ ರಾಜೀನಾಮೆ ಪತ್ರ ಕೈಸೇರುತ್ತಿದ್ದಂತೆ ಶಿವಕುಮಾರ್ ಮನವೊಲಿಕೆ ಪ್ರಯತ್ನ ನಡೆಸಿದರು. ಆದರೆ, ರೆಡ್ಡಿ ತಮ್ಮ ದೂರವಾಣಿ ಸಂಪರ್ಕ ಕಡಿತಗೊಳಿಸಿ ಅಜ್ಞಾತ ಸ್ಥಳಕ್ಕೆ ತೆರಳಿದರು.

ರಾಹುಲ್ ರಾಜ್ಯ ಪ್ರವಾಸಕ್ಕೂ ಮುನ್ನ ರೆಡ್ಡಿ ಮನವೊಲಿಕೆಗೆ ನಡೆಸಿದ ಯತ್ನ ವಿಫಲವಾದ ನಂತರ ಅನಿವಾರ್ಯವಾಗಿ ಪಕ್ಷದ ಅಧಿನಾಯಕನಿಗೆ ವಿಷಯ ತಿಳಿಸಿ, ಕೆಲವು ಇಲಾಖೆಗಳ ಬದಲಾವಣೆಗೆ ಅನುಮತಿ ನೀಡುವಂತೆ ಕೋರಿದರು.

ಇದಕ್ಕೆ ಒಪ್ಪದ ರಾಹುಲ್, ಇಂತಹ ವಿಚಾರಗಳನ್ನು ಸಹಿಸಲು ಸಾಧ್ಯವಿಲ್ಲ. ರಾಜೀನಾಮೆ ಅಂಗೀಕರಿಸಿ ಎಂದರು.

ರಾಹುಲ್ ಆದೇಶ ವಿವರ ತಿಳಿಯುತ್ತಿದ್ದಂತೆ ಸಚಿವ ಮುನಿಯಪ್ಪ, ಖಾತೆ ಹಂಚಿಕೆ ಕುರಿತು ವ್ಯಕ್ತಪಡಿಸಿದ್ದ ಅಸಮಾಧಾನ ಕೈಬಿಟ್ಟು ಇಲಾಖೆ ನಿರ್ವಹಣೆಗೆ ಸಿದ್ಧ. ಇದರ ಜೊತೆಗೆ ಇನ್ನೊಂದು ಖಾತೆ ಕೊಡಿ ಎಂದು ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಸರಿರಾತ್ರಿವರೆಗೆ ಕಡತಗಳ ವಿಲೇವಾರಿ ಸರ್ಕಸ್!!



ನಿರ್ವಹಿಸುತ್ತಿರುವಂತೆ ಕಾಣುತ್ತಿದೆ. ಇದನ್ನು ನೋಡಿದರೆ ವಿವಾಧಿತ ಮುಡಾ(ಹಿಂದೆ) ಪ್ರತಿರೂಪ ಎಂಡಿಎಯಲ್ಲಿ ಏನೋ ನಡೆಯುತ್ತಿರಬಹುದು ಎಂಬ ಮಾಹಿತಿ ದೊರೆತ ಕೂಡಲೇ 'ಮೈಸೂರು ಮಿತ್ರ' ಸ್ಥಳಕ್ಕೆ ಭೇಟಿ ನೀಡಿದಾಗ ಎಲ್ಲರೂ ಒಂದು ಕ್ಷಣ ಅವಕ್ಕಾದರು. ಕ್ಯಾಮರಾ ಕಣ್ಣಿಗೆ ಬೀಳುತ್ತಿದ್ದಂತೆ ಮಧ್ಯವರ್ತಿಗಳು ದಿಕ್ಕಾಪಾಲಾಗಿ ಓಡಿದರೆ, ಎಂಡಿಎ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಂಗಾಲಾದರು. ಅವರ ಮುಖಚರ್ಯೆ ಹಾಗೂ ವರ್ತನೆ ಗಮನಿಸಿದರೆ ಅಲ್ಲಿ ಏನೋ ಬೇರೆಯದ್ದೇ ನಡೆಯುತ್ತಿದೆ ಎಂಬುದನ್ನು ಸಾರಿ ಸಾರಿ ಹೇಳುವಂತಿತ್ತು. ನೂತನ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರರಿಗೆ ಆಪ್ತ ಸಹಾಯಕರಾಗಿ ಹೋಗುತ್ತಿರುವ ಕೆ.ಆರ್.ರಕ್ಷಿತ್, ತಮ್ಮ ಹಂತದಲ್ಲಿದ್ದ ಅನೇಕ ಮಹತ್ವದ ದಾಖಲೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಮುಂದಾಗಿ, ಸಂಬಂಧಪಟ್ಟ ವಿಭಾಗಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆಗೆ ಅವುಗಳ ವಾರಸುದಾರರ ಮಧ್ಯವರ್ತಿಗಳ ಸಮ್ಮುಖದಲ್ಲಿ ರಾತ್ರಿ ಬಹುಹೊತ್ತಿನವರೆಗೂ ಕಾರ್ಯನಿರ್ವಹಿಸಿದರು ಎಂದು ಎಂಡಿಎ ಮೂಲಗಳೇ ತಿಳಿಸಿವೆ. ಮುಡಾ ಹೆಸರು ಎಂಡಿಎ ಆಗಿ ಬದಲಾಗಿದೆ. ಆದರೆ, ಅಲ್ಲಿನ ಭ್ರಷ್ಟಚಾರ ಕರ್ಮಸಿದ್ಧಾಂತ ಮಾತ್ರ ಬದಲಾಗಿಲ್ಲ ಎಂಬ ಆರೋಪದ ನಡುವೆ ಸರಿರಾತ್ರಿವರೆಗೂ ತರಾತುರಿಯಲ್ಲಿ ದಾಖಲೆಗಳ ವಿಲೇವಾರಿ ನಡೆಸಿರುವುದು ಸಾರ್ವಜನಿಕ ವಲಯದಲ್ಲಿ ಅನುಮಾನ ಹೆಚ್ಚಿಸಿದೆ. ಬದಲಿ ನಿವೇಶನ ಹಂಚಿಕೆ ಹಗರಣದ ಬಳಿಕ ಪ್ರಾಧಿಕಾರದ ಹೆಸರು ಬದಲಿಸಲಾಗಿದೆಯೇ ಹೊರತು ಬೇರೇನೂ ಬದಲಾಗಿಲ್ಲ ಎಂಬ ದೂರು ಸಾರ್ವಜನಿಕರಲ್ಲಿ ಶಾಶ್ವತವಾಗಿ ನೆಲೆನಿಂತಿದೆ.

ಎಂಡಿಎ ಸಭೆಯ ಗೌಪ್ಯತೆ ಹಾಳಾಯ್ತು!?

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯ ಕಾರ್ಯಸೂಚಿ ಸೇರಿದಂತೆ ಅಲ್ಲಿ ಚರ್ಚೆ ಆಗುವ ವಿಚಾರಗಳ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳಲಾಗುತ್ತದೆ. ಪತ್ರಕರ್ತರು ಕೇಳಿದರೂ ಯಾವುದನ್ನೂ ಬಹಿರಂಗಪಡಿಸುವುದಿಲ್ಲ. ಇಷ್ಟೊಂದು ರಹಸ್ಯ ಕಾಪಾಡಿಕೊಳ್ಳುವಾಗ ಕಾರ್ಯಸೂಚಿಯ ವಿವರ ತಿಳಿದುಕೊಳ್ಳಲು ಹೊರಗಿನ ವ್ಯಕ್ತಿಗಳಿಗೆ ಹೇಗೆ ಅವಕಾಶ ಮಾಡಿಕೊಟ್ಟರು. ಅಲ್ಲಿದ್ದ ವರು ಒಂದು ವಿಭಾಗದ ಕಚೇರಿಯಿಂದ ಮತ್ತೊಂದು ಕಚೇರಿಗೆ ಸ್ವೇಚ್ಛೆಯಾಗಿ ಓಡಾಡಲು ಹೇಗೆ ಅನುವು ಮಾಡಿಕೊಟ್ಟರು. ಹೊರಗೆ ಪ್ರಾಧಿಕಾರದ ಎರಡು ದ್ವಾರಕ್ಕೆ ಬೀಗ ಹಾಕುವ ಭದ್ರತಾ ಸಿಬ್ಬಂದಿ ಇವರನ್ನು ಮಾತ್ರ ಹೇಗೆ ಒಳಗೆ ಬಿಟ್ಟರು. ಪ್ರಾಧಿಕಾರದ ಸಭೆಗೆ ಸಂಬಂಧಿಸಿದ ದಾಖಲಾತಿ ಸಿದ್ಧಪಡಿಸಿಕೊಳ್ಳುವ ಅಧಿಕಾರಿಗಳು, ಸಿಬ್ಬಂದಿ ಕ್ಯಾಮರಾ ಕಂಡು ಏಕೆ ಹೆದರಬೇಕು. ಅದೂ ಮಧ್ಯವರ್ತಿಗಳು ಏಕೆ ಕಾಲ್ಕಿತ್ತರು. ಇಷ್ಟು ವರ್ಷಗಳ ಕಾಲ ಇಲ್ಲದ ತಡರಾತ್ರಿ ಕರ್ತವ್ಯ ನಿಷ್ಠೆ ಈಗ ದಿಢೀರ್ ಬಂದಿದ್ದಾರೂ ಹೇಗೆ, ಇಂತಹ ಸರಣಿ ಪ್ರಶ್ನೆಗಳು ಮೂಡುತ್ತಿವೆ.

ಹಿರಿಯ ಐಪಿಎಸ್ ಅಧಿಕಾರಿ ಪತ್ನಿ ಬಲಿ

ಎಂದು ಅಸಮಾಧಾನ ವ್ಯಕ್ತಪಡಿಸಿದರು. ಜಿ.ಜಿ. ರಾಜೇಂದ್ರ ಮಾತನಾಡಿ, ಕಾಡುಜೀವಿಗಳು ತೋಟ ಪ್ರದೇಶಗಳಿಗೆ ಬಾರದಂತೆ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವ ಚಿಂತನೆ ನಡೆಸುತ್ತಿದ್ದೇನೆಂದು ಹೇಳಿದ್ದಾರೆ.

ಗ್ರಾಮಸ್ಥರ ಪ್ರತಿಭಟನೆ: ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದ ಮುಂದೆ ಗ್ರಾಮಸ್ಥರು ಸೇರಿ ಅರಣ್ಯ ಇಲಾಖೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕಾಡಾನೆಗಳು ತೋಟಗಳಲ್ಲಿ ಬೀಡು ಬಿಟ್ಟಿವೆ. ಅರಣ್ಯ ಇಲಾಖೆ ಕಾಡಾನೆಗಳನ್ನು ನಿಯಂತ್ರಿಸಲು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಜೀವ ಹಾನಿಯಾದ ಸಂದರ್ಭದಲ್ಲಿ ಪರಿಹಾರದ ಚೆಕ್ ವಿತರಿಸಲು ಮಾತ್ರವೇ ಅರಣ್ಯ ಇಲಾಖೆ ಮುಂದಾಗುತ್ತಿದೆ ಎಂದು ಆಕ್ರೋಶಿಸಿದರು. ತಕ್ಷಣವೇ ಕಾಡಾನೆಗಳನ್ನು ಕಾಡಿಗಟ್ಟಲು ಕ್ರಮ ಕೈಗೊಳ್ಳಬೇಕು. ಕಾಡಂಚಿನ ಪ್ರದೇಶಗಳಲ್ಲಿ ಸೋಲಾರ್ ಬೇಲಿ, ರೈಲ್ವೆ ಬ್ಯಾರಿಕೇಡ್, ಆನೆ ಕಂದಕಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಜೀವ ಹಾನಿ ಮಾಡುತ್ತಿರುವ ಕಾಡಾನೆಗಳನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದರು.

ಶಾಸಕರ ಭೇಟಿ–ಸಾಂತ್ವನ: ಶಾಸಕ ಪೊನ್ನಣ್ಣ ಆಸ್ಪತ್ರೆಗೆ ತೆರಳಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ಘಟನೆಯಲ್ಲಿ ಗಾಯಗೊಂಡ ಕಾರ್ಮಿಕರ ಆರೋಗ್ಯ ವಿಚಾರಿಸಿ, ಉನ್ನತ ಚಿಕಿತ್ಸೆ ನೀಡುವಂತೆ ಸೂಚಿಸಿದರಲ್ಲದೆ, ಅವರ ಆರೋಗ್ಯದ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು. ಇದೇ ವೇಳೆ ಮಾನವ ಜೀವ ಹಾನಿ ಎಸಗಿದ ಕಾಡಾನೆ ಹಾಗೂ ತೋಟಗಳಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ತಕ್ಷಣವೇ ಕಾಡಿಗೆ ಅಟ್ಟುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಆದೇಶಿಸಿದರು. ಈ ಘಟನೆ ನಂತರ ಅರಣ್ಯ ಇಲಾಖೆ ಮತ್ತು ಸ್ಥಳೀಯ ಆಡಳಿತ ಕಾಡಾನೆಗಳ ಚಲನವಲನದ ಮೇಲೆ ನಿಗಾ ಹೆಚ್ಚಿಸುವ ಸಾಧ್ಯತೆ ಇದ್ದು, ಅರಣ್ಯ ಗಡಿಭಾಗ ಗಳಲ್ಲಿ ಹೆಚ್ಚುವರಿ ಗಸ್ತು ತಿರುಗುವಿಕೆ ಕೈಗೊಳ್ಳುವ ನಿರೀಕ್ಷೆಯಿದೆ.

ಬಡ ಭೂಮಾಲೀಕರ ಹಿತಾಸಕ್ತಿಗೆ ಧಕ್ಕೆ ತಂದು ಸರ್ಕಾರ ಭೂಮಿ ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಿಲ್ಲ

ಬೆಂಗಳೂರು, ಜೂ.5– ಲಾಭಗಳಿಸುವ ಖಾಸಗಿ ಸಂಸ್ಥೆಯ ವಿಸ್ತರಣೆಗೆ ಭೂಮಿ ಸ್ವಾಧೀನಪಡಿಸಿಕೊಳ್ಳುವುದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಾಯ್ದೆಯ ಉದ್ದೇಶಕ್ಕೆ ವಿರುದ್ಧವಾಗಿದ್ದು, ಅಲ್ಪ ಪರಿಹಾರ ನೀಡಿ ಜನರ ಭೂಮಿಯನ್ನು ಕಸಿದುಕೊಳ್ಳಲು ಅಧಿಕಾರಿಗಳು ಕಾನೂನಿನ ಮೇಲೆ ನಡೆಸಿದ ವಂಚನೆಯಾಗಿದೆ ಎಂದು ಹೈಕೋರ್ಟ್ ಛೀಮಾರಿ ಹಾಕಿದೆ.



ಇಂತಹ ಅಧಿಕಾರ ಬಳಕೆ ಕಾನೂನು ಬದ್ಧ ಹಾಗೂ ಸಂವಿಧಾನಾತ್ಮಕ ವಂಚನೆಯಾಗಿದ್ದು, ಈ ಹಿನ್ನೆಲೆಯಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದ ಪಾರ್ಕಿಂಗ್ ವಲಯಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ಕೆ.ಸಿಂಗ್ ಮತ್ತು ಟಿ.ಎಂ.ನಡಾಫ್ ಅವರಿದ್ದ ವಿಭಾಗೀಯ ಪೀಠ ಮಹತ್ವದ ತೀರ್ಪು ನೀಡಿದೆ. ಈ ಭೂಮಿಯನ್ನು ಮೆ. ಇಂಡಿಯನ್ ಮೆಷಿನ್ ಟೂಲ್ಸ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ (ಐಎಂಟಿಎಂಎ) ಸ್ಥಾಪಿಸಿರುವ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದ ಪಾರ್ಕಿಂಗ್ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು.

ಐಎಂಟಿಎಂಎಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂಪೂರ್ಣ ಪ್ರಕ್ರಿಯೆಯು ಸಂವಿಧಾನಾತ್ಮಕ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ನ್ಯಾಯಪೀಠ ಹೇಳಿದೆ. 2013ರಲ್ಲಿ ಭೂಮಾಲೀಕರು ಸಲ್ಲಿಸಿದ್ದ ಮೇಲ್ಮನವಿಗಳನ್ನು ಅಂಗೀಕರಿಸಿದ ನ್ಯಾಯಪೀಠವು, ಕೆಐಎಡಿಬಿ ಮತ್ತು ಐಎಂಟಿಎಂಎ ಸಲ್ಲಿಸಿದ್ದ ಮೇಲ್ಮನವಿಗಳನ್ನು ವಜಾಗೊಳಿಸಿದೆ. ಜೊತೆಗೆ, ಏಕಸದಸ್ಯ ನ್ಯಾಯಮೂರ್ತಿಗಳ ಆದೇಶವನ್ನು ರದ್ದುಪಡಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನೇ ಅಮಾನ್ಯಗೊಳಿಸಿದೆ.

ಅಂತಿಮ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 14 ವರ್ಷಗಳಾದರೂ ಪರಿಹಾರದ ಮೊತ್ತ ನಿಗದಿಪಡಿಸುವ ಪ್ರಶಸ್ತಿ ಘೋಷಿಸಿಲ್ಲ. ಆದ್ದರಿಂದ ಭೂಸ್ವಾಧೀನ ಪ್ರಕ್ರಿಯೆಯು ಕಾಲಹರಣಗೊಂಡಿದೆ ಎಂದು ನಾವು ಅಭಿಪ್ರಾಯಪಡುತ್ತೇವೆ. ಹಣಕಾಸು ದಾಖಲೆಗಳಿಂದ ಸ್ಪಷ್ಟವಾಗುವಂತೆ ಲಾಭದಾಯಕ ಖಾಸಗಿ ಸಂಸ್ಥೆಗಾಗಿ ಸರ್ಕಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ ಎಂದು ನ್ಯಾಯಪೀಠ ಹೇಳಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಕಾಯ್ದೆಯ ಉದ್ದೇಶವು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಭೂಮಿ ಸ್ವಾಧೀನಪಡಿಸಿಕೊಳ್ಳುವುದೇ ಹೊರತು, ನಿರ್ದಿಷ್ಟ ಖಾಸಗಿ ಸಂಸ್ಥೆಗಾಗಿ ಭೂಮಿ ಸಂಗ್ರಹಿಸುವುದಲ್ಲ ಎಂದು ನ್ಯಾಯ ಪೀಠ ಸ್ಪಷ್ಟಪಡಿಸಿದೆ. ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದ ನಂತರ, ಅಲ್ಲಿ ಕೈಗಾರಿಕೆ ಸ್ಥಾಪಿಸಲು ಅರ್ಜಿದಾರರಿಗೆ ಭೂಮಿ ಹಂಚಿಕೆ ಮಾಡಬಹುದು ಎಂದು ತಿಳಿಸಿದೆ.

ಬಡ ಭೂಮಾಲೀಕರ ಹಿತಾಸಕ್ತಿಗೆ ಧಕ್ಕೆ ತಂದು ಸರ್ಕಾರ ತನ್ನ ಆಯ್ಕೆಯ ಖಾಸಗಿ ಸಂಸ್ಥೆಗೆ ಭೂಮಿಯನ್ನು ಒದಗಿಸಲು ಸಾಧ್ಯವಿಲ್ಲ. ಸರ್ಕಾರದ 'ಎಮಿನೆಂಟ್ ಡೊಮೇನ್' ಅಧಿಕಾರದ ಬಳಕೆ ಕಾನೂನುಬದ್ಧ ವಂಚನೆಯಾಗಬಾರದು ಅಥವಾ ಖಾಸಗಿ ಕೈಗಳಿಗೆ ಭೂಮಿ ವರ್ಗಾಯಿಸುವ ಸಾಧನವಾಗಬಾರದು ಎಂದು ನ್ಯಾಯಪೀಠ ತನ್ನ ತೀರ್ಪಿನಲ್ಲಿ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಭಾರತದಲ್ಲಿ ದುರಂದರ್ ಮಾದರಿ ವಿಧ್ವಂಸಕ ಕೃತ್ಯಕ್ಕೆ ಪಾಕ್ ಐಎಸ್‌ಐ ಸಂಚು

ಬೆಂಗಳೂರು, ಜೂ.5–ಕಲ್ಪತರು ನಾಡು ತುಮಕೂರು ಪೊಲೀಸರು ರಾಷ್ಟ್ರೀಯ ತನಿಖಾ ಆಯೋಗ ನೀಡಿದ ಮಾಹಿತಿ ಆಧರಿಸಿ ಮಿಂಚಿನ ಕಾರ್ಯಾಚರಣೆ ನಡೆಸಿ ಶಂಕಿತ ಉಗ್ರನೊಬ್ಬನನ್ನು ಬಂಧಿಸಿದ್ದಾರೆ. ಆತ ನೀಡಿದ ಮಾಹಿತಿ ಆಧರಿಸಿ ಕಾಟನ್ ಸಿಟಿ ದಾವಣಗೆರೆಯಲ್ಲಿ ಮತ್ತೊಬ್ಬ ಉಗ್ರನನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ತುಮಕೂರಿನಲ್ಲಿ ಬಂಧಿತನಾಗಿರುವ ಶಂಕಿತ ಉಗ್ರನನ್ನು ಅಲ್ಲಾಭಕ್ಷ್ ಎಂದು ಗುರುತಿಸಲಾಗಿದೆ ದಾವಣಗೆರೆಯಲ್ಲಿ ಬಂಧಿತ ಶಂಕಿತ ಉಗ್ರನನ್ನು ಬಿಡಿ ಲೇಔಟ್ ನಿವಾಸಿ ಜಮೀರ್ ಖಾನ್ ಎಂದು ಗುರುತಿಸಲಾಗಿದೆ. ಮುಂಬೈನ ವ್ಯಕ್ತಿಯೊಬ್ಬರ ಹತ್ಯೆಗೆ ಸುಪಾರಿ ಪಡೆದು ಸ್ಕೆಚ್ ಹಾಕಿದ ಆರೋಪದಲ್ಲಿ ತುಮಕೂರು ಪೊಲೀಸರು ಅಲ್ಲಾಭಕ್ಷ್‌ನನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ವಿಚಾರಣೆ ವೇಳೆ ಈತ ಹೇಳಿದ ಸಂಗತಿಯನ್ನು ಕೇಳಿ ಪೊಲೀಸರು ಬೆಚ್ಚಿ ಬಿದ್ದಿದ್ದಾರೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐ ಎಸ್ ಐ ಮೂಲಕ ಆರ್ಥಿಕ ನೆರವು ಪಡೆಯುತ್ತಿದ್ದ ಈತ ದಾವಣಗೆರೆಯ ಜಮೀರ್ ಖಾನ್ ಅವರೊಂದಿಗೆ ಸೇರಿ ಕರ್ನಾಟಕ ಸೇರಿದಂತೆ ದೇಶದ ಹಲವು ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸಿದ ಮಾಹಿತಿ ಬೆಳಕಿಗೆ ಬಂದಿದೆ. ಇತ್ತೀಚೆಗೆ ಭರ್ಜರಿ ಯಶಸ್ಸು ಕಂಡ ದುರಂದರ್ ಸಿನಿಮಾ ಮಾದರಿಯಲ್ಲಿ ಭಾರತದ ಹಲವೆಡೆ ವಿಧ್ವಂಸಕ ಕೃತ್ಯ ನಡೆಸಲು ಐ ಎಸ್ ಐ ಸಂಚು ರೂಪಿಸಿದೆ ಇದು ಭಾರತದಲ್ಲಿರುವ ಉಗ್ರರಾದ ಶಾಬಾಸ್ ಬುಟ್ಟಿ ಮತ್ತು ರಾಣಾ ಉನೇನ್ ಎನ್ನುವವರಿಗೆ ದೊಡ್ಡ ಪ್ರಮಾಣದಲ್ಲಿ ಹಣ ಸಂದಾಯ ಮಾಡುತ್ತಿದೆ ಈ ಹಣದೊಂದಿಗೆ ಅವರು ದೇಶದ ಇತರೆಡೆ ತಮ್ಮಂತೆ ಯೋಚಿಸುವ ಮುಸ್ಲಿಂ ಯುವಕರನ್ನು ತಮ್ಮ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತಿರುವ ವಿಷಯ ಗೊತ್ತಾಗಿದೆ. ಈ ಕುರಿತು ತುಮಕೂರು ಪೊಲೀಸರು ರಾಷ್ಟ್ರೀಯ ತನಿಖಾ ಆಯೋಗಕ್ಕೆ ಮಾಹಿತಿ ನೀಡಿದ್ದಾರೆ ಆನಂತರ ಅಲ್ಲಾಭಕ್ಷಿ ನೀಡಿದ ಮಾಹಿತಿ ಆದರಿಸಿ ದಾವಣಗೆರೆಯಲ್ಲಿ ಜಮೀರ್ ಖಾನ್‌ನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ

ದಾವಣಗೆರೆಯಲ್ಲಿ ಬಂಧಿತ ಉಗ್ರ ಮಾಹಿತಿ

ಈತ ಕೂಡ ಐಎಸ್‌ಎಸ್ ಫಂಡಿಂಗ್ ಮಾಡುತ್ತಿದ್ದ ಉಗ್ರರಾದ ಶಾಬಾಸ್ ಭುಟ್ಟಿ ಹಾಗೂ ರಾಣಾ ಉನೇನ್ ಜೊತೆ ನಿರಂತರ ಸಂಪರ್ಕದಲ್ಲಿದ್ದ. ಈ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿತ್ತು. ಇದನ್ನಾಧರಿಸಿ ತುಮಕೂರು ಪೊಲೀಸರು ಬಂಧಿಸಿದ್ದಾರೆ.

ಬಂಧಿತರು ವಾಟ್ಸಾಪ್, ಇನ್ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲಿ ನಿರಂತರವಾಗಿ ಉಗ್ರರ ಸಂಪರ್ಕದಲ್ಲಿದ್ದ. ದೇಶದಲ್ಲಿ ಸಂಚು ನಡೆಸಲು ಭಾರತದ ಮುಸ್ಲಿಂ ಯುವಕರನ್ನು ಬಳಕೆ ಮಾಡಿಕೊಂಡು ಐಎಸ್‌ಎಸ್ ಭಯೋತ್ಪಾದಕ ಸಂಘಟನೆ ವಿಸ್ತರಿಸಲು ಸಂಚು ರೂಪಿಸಿದ್ದರು. ಈತ ಹಾಗೂ ತುಮಕೂರಿನಲ್ಲಿ ಬಂಧಿತನಾಗಿರುವ ಶಂಕಿತ ಉಗ್ರ ಅಲ್ಲಾಭಕ್ಷ್‌ಗೆ ಉಗ್ರರು ಮುಂಬೈನಲ್ಲಿ ಉದ್ಯಮಿಯೊಬ್ಬನನ್ನು ಮುಗಿಸಲು ಸುಪಾರಿ ಪಡೆದಿದ್ದರು. ಅಷ್ಟರೊಳಗೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ದಾವಣಗೆರೆಯ ಬಿಡಿ ಲೇಔಟ್ ನಿವಾಸಿಯಾಗಿದ್ದ ಶಂಕಿತ ಭಯೋತ್ಪಾದಕ, ಕಟ್ಟಡ ನಿರ್ಮಾಣ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ. ಹಾಸನ ಸೇರಿದಂತೆ ಹಲವು ಕಡೆಗಳಲ್ಲಿ ಕೆಲಸಕ್ಕಾಗಿ ಹೋಗುತ್ತಿದ್ದ. ತಂದೆ–ತಾಯಿ, ಇಬ್ಬರು ಸಹೋದರರ ಜೊತೆ ದಾವಣಗೆರೆಯಲ್ಲಿ ವಾಸವಿದ್ದ. ಇನ್ಸ್ಟಾಗ್ರಾಂ ಮೂಲಕ ಪಾಕಿಸ್ತಾನದ ಶಾಬಾಸ್ ಭುಟ್ಟಿ ಹಾಗೂ ರಾಣಾ ಉನೇನ್ ಜೊತೆ ಈತನಿಗೆ ಸಂಪರ್ಕವಿತ್ತು. ಅವರ ನಿರ್ದೇಶನದಂತೆ ಭಾರತದಲ್ಲಿ ಸಂಚು ರೂಪಿಸುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ಇಂಡಿಯನ್ ಬ್ಲ್ಯಾಕ್‌ಬೆರಿ ಸುಗ್ಗಿ ಆರಂಭ; ಮೈಸೂರಲ್ಲೂ ವಹಿವಾಟು ಜೋರು

ವರ್ಷಕ್ಕೊಮ್ಮೆ ದೊರೆಯುವ ಹಣ್ಣು ತಿನ್ನಲು ಬಾಯ್ಚಪ್ಪರಿಸುತ್ತಿರುವ ಜನ





ಮೈಸೂರಿನ ವಿವಿಧೆಡೆ ಜಂಬು ನೇರಳೆ ಹಣ್ಣು ವ್ಯಾಪಾರ ಗರಿಗೆದರಿರುವುದು.

ಹಣ್ಣುಗಳನ್ನು ಕೊಯ್ಲು ಮಾಡಿದ ನಂತರ ಹೆಚ್ಚು ದಿನ ಸಂಗ್ರಹಿಸಿಡಲು ಸಾಧ್ಯವಿಲ್ಲ. ಹಾಗಾಗಿ ವಿವಿಧ ರೀತಿಯಲ್ಲಿ ಮೌಲ್ಯವರ್ಧನೆ ಸಹ ಮಾಡಲಾಗುತ್ತಿದೆ. ಜ್ಯೂಸ್, ಬೀಜದಿಂದ ಪೌಡರ್ ಸೇರಿದಂತೆ ವಿವಿಧ ಪದಾರ್ಥ ತಯಾರಿಸಿ ಮೌಲ್ಯವರ್ಧನೆ ಮಾಡಲಾಗುತ್ತಿದೆ. ಇದರಿಂದ ಇನ್ನು ಹೆಚ್ಚಿನ ಮಾರುಕಟ್ಟೆ ದೊರೆಯುವಂತಾಗಿದೆ. ನೇರಳೆ ಗಿಡದಲ್ಲಿ ಫೆಬ್ರವರಿ ತಿಂಗಳಿಂದ ಹೂ ಬಿಡಲು ಪ್ರಾರಂಭವಾಗಿ ಜೂನ್‌ವರೆಗೆ ಮುಂದುವರೆಯುತ್ತವೆ. ವರ್ಷಕ್ಕೆ ಒಮ್ಮೆ ಮಾತ್ರ ನೇರಳೆ ಹಣ್ಣು ದೊರೆಯಲಿದ್ದು, ಮಾರ್ಚ್‌ನಿಂದ ಪ್ರಾರಂಭವಾಗಿ ಆಗಸ್ಟ್‌ವರೆಗೆ ದೊರೆಯಲಿದೆ.





"ನಾವು ಮಾರಾಟ ಮಾಡುತ್ತಿರುವುದು ಫಾರಂ ಜಂಬು ನೇರಳೆ ಹಣ್ಣು. ಕೆಜಿ 150 ರೂ.ಗೆ ಮಾರಾಟ ಮಾಡುತ್ತಿದ್ದು, ಬೆಂಗಳೂರಿನಿಂದ ಈ ಹಣ್ಣುಗಳು ಬರುತ್ತವೆ. ಆ ಹಣ್ಣುಗಳನ್ನು ಸಗಟು ರೀತಿಯಲ್ಲಿ ಖರೀದಿಸಿ ಮಾರಾಟ ಮಾಡುತ್ತೇವೆ. -ರಮ್ಯನಹಳ್ಳಿ ಗ್ರಾಮದ ಸಿದ್ದಮ್ಮ, ವ್ಯಾಪಾರಿ.

ಮೈಸೂರು, ಜೂ.5(ಪಿಎಂ)- ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂಡಿಯನ್ ಬ್ಲ್ಯಾಕ್‌ಬೆರಿ ಸುಗ್ಗಿ ಆರಂಭವಾಗಿದೆ. ಹೌದು, ದೇವರಾಜ ಮಾರುಕಟ್ಟೆ ಸೇರಿದಂತೆ ಮೈಸೂರು ನಗರದ ವಿವಿಧ ರಸ್ತೆಬದಿಗಳಲ್ಲಿ ವಹಿವಾಟು ಚುರುಕುಗೊಂಡಿದೆ.

ಮಧುಮೇಹ ನಿಯಂತ್ರಿಸುವ ಜೊತೆಗೆ ಆರೋಗ್ಯಕ್ಕೆ ಪೂರಕ ಅಂಶ ಹೊಂದಿರುವ ಹಿನ್ನೆಲೆಯಲ್ಲಿ ನಾಗರಿಕರು ಈ ಹಣ್ಣುಗಳ ಮೊರೆ ಹೋಗುತ್ತಿದ್ದಾರೆ. ಉಪ್ಪು ಮಿಶ್ರಣದಲ್ಲಿ ನೆನೆಸಿ ಬಾಯ್ಚಪ್ಪರಿಸುವ ಬಯಕೆಯಲ್ಲಿ ಹಣ್ಣು ಖರೀದಿಗೆ ಮುಂದಾಗುತ್ತಿದ್ದಾರೆ. ವರ್ಷಕ್ಕೊಮ್ಮೆ ದೊರೆಯುವ ಹಣ್ಣುಗಳ ಪೈಕಿ ನೇರಳೆ ಹಣ್ಣು ಸಹ ಒಂದು. ನೇರಳೆ ಮರದಲ್ಲಿ ಫೆಬ್ರವರಿ ತಿಂಗಳಿಂದ ಹೂ ಬಿಡಲು ಆರಂಭವಾಗಿ ಜೂನ್‌ವರೆಗೆ ಮುಂದುವರೆಯುತ್ತದೆ. ನೇರಳೆ ಕಾಯಿ ವರ್ಷದ ಮೊದಲ ಮಳೆ ಬಂದ ಕೂಡಲೇ ಹಣ್ಣಾಗಲು ಪ್ರಾರಂಭಗೊಂಡು ಏಪ್ರಿಲ್‌ನಿಂದ ಜುಲೈವರೆಗೆ ಹಣ್ಣುಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತವೆ.

ಕ್ರಾಫರ್ಡ್ ಭವನದ ಸಮೀಪದ ರೈಲ್ವೆ ಗೇಟ್‌ನ ರಸ್ತೆಬದಿಯಲ್ಲಿ ರಮ್ಯನಹಳ್ಳಿ ಪುಟ್ಟಸ್ವಾಮಿ ಎಂಬುವವರು ತಮ್ಮ ಜಮೀನಿನ ಮರಗಳಿಂದ ಹಣ್ಣುಗಳನ್ನು ಪ್ರತಿದಿನ ಕೊಯ್ಲು ಮಾಡಿ ತಂದು ಮಾರಾಟ ಮಾಡುತ್ತಿದ್ದಾರೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ನಮ್ಮದೇ ಜಮೀನಿನಲ್ಲಿ ನಾಲ್ಕು ಮರಗಳಿದ್ದು, ಅವುಗಳ ನಾಟಿ ಜಂಬು ನೇರಳೆ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದು, ಆರಂಭದಲ್ಲಿ ಕೆಜಿಗೆ 400 ರೂ. ಇತ್ತು. ಈಗ ಕೆಜಿಗೆ 200 ರೂ.ನಂತೆ ಮಾರಾಟ ಮಾಡುತ್ತಿರುವುದಾಗಿ ಹೇಳುತ್ತಾರೆ ಅವರು.

ಮರಕ್ಕೆ ಏಣಿ ಹಾಕಿಕೊಂಡು ಒಂದೊಂದೆ ಹಣ್ಣುಗಳನ್ನು ಕೊಯ್ಲು ಕೊಳ್ಳಬೇಕು. ಮಧುಮೇಹ ನಿಯಂತ್ರಣಕ್ಕೆ ಈ ಹಣ್ಣು ಒಳ್ಳೆಯದು. ಸಿದ್ದಮ್ಮ ಬೆಂಗಳೂರಿನಿಂದಲೂ ಫಾರಂ ಹಣ್ಣುಗಳು ಸಹ ಪೂರೈಕೆ ಆಗುತ್ತಿವೆ. ನಾವು ಯಾವುದೇ ಔಷಧ ಸಿಂಪಡಣೆ ಮಾಡುವುದಿಲ್ಲ. ದಿನಕ್ಕೆ 10ರಿಂದ 20 ಕೆಜಿಯಷ್ಟು ಕೊಯ್ಲು ಮಾಡಿಕೊಂಡು ಬಂದು ವ್ಯಾಪಾರ ಮಾಡುತ್ತೇನೆ. ಮಳೆ ಬಂದರೆ ಹಣ್ಣುಗಳು ಉದುರಿ ವ್ಯರ್ಥವಾಗುವುದೇ ಹೆಚ್ಚು. ಕಾಯಿ ಇದ್ದಾಗ ಮಳೆ ಬಂದರೆ ಒಳ್ಳೆಯದು ಎನ್ನುತ್ತಾರೆ ಅವರು.

ದೇವರಾಜ ಮಾರುಕಟ್ಟೆ ಆವರಣದಲ್ಲಿ ವ್ಯಾಪಾರ ಮಾಡುತ್ತಿರುವ ರಮ್ಯನಹಳ್ಳಿ ಮರಿಚಿಕ್ಕಣ್ಣ ಮಾತನಾಡಿ, ತಗಡೂರು, ಎಡತೊರೆ, ಎಮ್ಮರಗಾಲ ಮೊದಲಾದ ಗ್ರಾಮಗಳ ರೈತರಿಂದ ಸಗಟು ರೀತಿಯಲ್ಲಿ ಖರೀದಿಸಿ ವ್ಯಾಪಾರ ಮಾಡುತ್ತಿದ್ದು, ನಾನು ಮಾರಾಟ ಮಾಡುತ್ತಿರುವುದೆಲ್ಲವೂ ಜಂಬು ನೇರಳೆ ಹಣ್ಣುಗಳೇ. ಕಾಲು ಕೆಜಿಗೆ 30, ಅರ್ಧ ಕೆಜಿ 50 ಹಾಗೂ ಕೆಜಿ 100 ರೂ.ನಂತೆ ಮಾರಾಟ ಮಾಡುತ್ತಿರುವುದಾಗಿ ಅವರು ಹೇಳಿದರು.


ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಜಂಬು ನೇರಳೆ ಹಣ್ಣು ಸೇರಿದಂತೆ ವಿವಿಧ ಹಣ್ಣು ವ್ಯಾಪಾರ ಮಾಡುತ್ತಿರುವ ವ್ಯಾಪಾರಿಯೊಬ್ಬರು ಮಾತನಾಡಿ, ರಮ್ಯನಹಳ್ಳಿಯ ರೈತರ ಜಮೀನಿನಲ್ಲಿ ಕೊಯ್ಲು ಮಾಡಿ ತರುವ ಜಂಬು ನೇರಳೆ ಹಣ್ಣುಗಳನ್ನು ಸಗಟು ರೀತಿ ಖರೀದಿಸಿ ಮಾರಾಟ ಮಾಡುತ್ತಿದ್ದು, ಕೆಜಿಗೆ 200 ರೂ. ಇದೆಯೆಂದು ಹೇಳಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ಹಣ್ಣು ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಹಾಗೂ ನಿವೃತ್ತ ಡೀನ್ ಡಾ.ಜಿ.ಎಸ್.ಕೆ.ಸ್ವಾಮಿ, ಆರೋಗ್ಯಕ್ಕೆ ಅಗತ್ಯವಾದ ಪೌಷ್ಟಿಕತೆ ಹಾಗೂ ಜೀವಸತ್ವ ಹೇರಳವಾಗಿ ದೊರೆಯುವ ಹಣ್ಣುಗಳ ಪೈಕಿ ನೇರಳೆ ಹಣ್ಣು ಸಹ ಒಂದು ಎಂದು ತಿಳಿಸಿದರು.

ನೇರಳೆ ಹಣ್ಣು ಔಷಧೀಯ ಗುಣ ಹೊಂದಿರುವ ಹಿನ್ನೆಲೆಯಲ್ಲಿ ಮಧುಮೇಹ ನಿಯಂತ್ರಣಕ್ಕೆ ಪೂರಕವಾದುದು. ಈ ಮೊದಲು ಕಾಡು ಹಾಗೂ ಜಮೀನುಗಳಲ್ಲಿ ಸ್ವಾಭಾವಿಕವಾಗಿ ಬೆಳೆದ ಮರಗಳೇ ಹೆಚ್ಚಿದ್ದವು. ಈಗ ಈ ಹಣ್ಣಿನ ಪ್ರಾಮುಖ್ಯತೆ ಅರಿವು ಬರುತ್ತಿರುವ ಹಿನ್ನೆಲೆಯಲ್ಲಿ ತೋಟಗಳ ಪರಿಕಲ್ಪನೆಯೂ ಬಂದಿದೆ. ಈಗ ಸಾಕಷ್ಟು ತಳಿಗಳನ್ನು ಸಹ ಬಿಡುಗಡೆ ಮಾಡಲಾಗಿದೆ. ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಅನೇಕ ವರ್ಷಗಳ ಸಂಶೋಧನೆ ಫಲವಾಗಿ ಎಜಿಜೆ 85 ತಳಿ ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ್ದು, ಈ ತಳಿಯ ಹಣ್ಣು ದೊಡ್ಡ ಗಾತ್ರ ಹೊಂದಿದ್ದು, ಹೆಚ್ಚಿನ ತಿರುಳನ್ನು ಹೊಂದಿರುತ್ತದೆ. ಇದರ ಬೇಡಿಕೆ ಹೆಚ್ಚಿರುವ ಹಿನ್ನೆಲೆಯಲ್ಲಿ ಅನೇಕ ರೈತರು ಈ ತಳಿಯ ತೋಟಗಳನ್ನು ಮಾಡಿಕೊಂಡಿದ್ದಾರೆ ಎಂದು ವಿವರಿಸಿದರು.

ಮಹಾರಾಷ್ಟ್ರದಿಂದ ಕೊಂಕಣ ಬಹದೋಲಿ ತಳಿ ಸಹ ಬಿಡುಗಡೆಯಾಗಿದೆ. ವಿಶೇಷವಾಗಿ ಹೆಚ್ಚು ಔಷಧೀಯ ಗುಣ ಇರುವುದು ನೇರಳೆ ಹಣ್ಣಿನ ಬೀಜದಲ್ಲಿಯೇ ಅಡಗಿದೆ. ಹಾಗಾಗಿ ಬೀಜ ಪುಡಿಗೊಳಿಸಿ ಮಾರಾಟ ಮಾಡುವುದು ಈಗ ಚಾಲ್ತಿಯಲ್ಲಿದೆ. ತೋಟಗಳ ಪರಿಕಲ್ಪನೆ ಈಗ ಹೆಚ್ಚಾಗುತ್ತಿದ್ದು, ಕಸಿ ಮಾಡಿದ ಗಿಡ ಬೆಳೆಸುವುದರಿಂದ 3ರಿಂದ 4 ವರ್ಷಗಳಲ್ಲಿ ಫಸಲು ದೊರೆಯಲಿದೆ. ಬೀಜದಿಂದ ಬೆಳೆಸಿದರೆ 7ರಿಂದ 10 ವರ್ಷಗಳ ಕಾಲ ಕಾಯಬೇಕಾಗುತ್ತದೆ. ಕಸಿ ಗಿಡಗಳನ್ನು ನಾಟಿ ಮಾಡುವುದರಿಂದ ಸೂಕ್ತ ಜೊತೆಗೆ ಇದರಿಂದ ಮರಗಳು ಹೆಚ್ಚು ಎತ್ತರ ಬೆಳೆಯುವುದು ತಪ್ಪಲಿದ್ದು, ಇದರಿಂದ ಹಣ್ಣು ಕೊಯ್ಲು ಸುಲಭವಾಗಲಿದೆ ಎಂದರು.

ಮಧುಮೇಹ ನಿಯಂತ್ರಣಕ್ಕೆ ಹಣ್ಣಿಗಿಂತಲೂ ಬೀಜವೇ ಹೆಚ್ಚು ಪರಿಣಾಮಕಾರಿ...



"ನಾಯಿ ನೇರಳೆ ಗಾತ್ರದಲ್ಲಿ ಸಣ್ಣ. ಜೊತೆಗೆ ರುಚಿಕರವಾಗಿದ್ದರೂ ಬೀಜ ದೊಡ್ಡ ಗಾತ್ರ ಇರುತ್ತದೆ. ಜಂಬು ನೇರಳೆ ಹಣ್ಣುಗಳಲ್ಲಿ ಬೀಜದ ಗಾತ್ರ ಕಡಿಮೆ ಇದ್ದು, ತಿರುಳು ಹೆಚ್ಚಿರುತ್ತದೆ. ಹಾಗಾಗಿ ಜಂಬು ನೇರಳೆ ಹಣ್ಣು ತಿನ್ನಲು ಇಷ್ಟಪಡುವುದೇ ಹೆಚ್ಚು. ಬೀಜದಲ್ಲಿ ಹೆಚ್ಚು ಔಷಧೀಯ ಗುಣ ಇರುವ ಹಿನ್ನೆಲೆಯಲ್ಲಿ ಭವಿಷ್ಯದಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆಯಾಗುವ ಸಾಧ್ಯತೆ ಇದೆ. ಮಧುಮೇಹ ನಿಯಂತ್ರಣಕ್ಕೆ ಹಣ್ಣಿಗಿಂತಲೂ ಬೀಜವೇ ಹೆಚ್ಚು ಪರಿಣಾಮಕಾರಿ. ಜೊತೆಗೆ ಸಾವಯವ ವಿಧಾನದಲ್ಲೇ ಹೆಚ್ಚು ಬೆಳೆಯುವುದರಿಂದ ಆರೋಗ್ಯಕ್ಕೆ ಅನೇಕ ಅನುಕೂಲಗಳೂ ಇವೆ.

-ಡಾ. ಜಿ.ಎಸ್.ಕೆ. ಸ್ವಾಮಿ, ನಿವೃತ್ತ ಡೀನ್, ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯ.

ಬನ್ನೂರು ರಾಜುಗೆ 'ನಾಲ್ವಡಿ ಪ್ರಶಸ್ತಿ' ಪ್ರದಾನ



ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರಾಜ್ಯ ಪ್ರಶಸ್ತಿಗೆ ಭಾಜನರಾದ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅವರು ಅನಾರೋಗ್ಯದ ಕಾರಣದಿಂದಾಗಿ ಕಲಾಮಂದಿರದಲ್ಲಿ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಅವರ ಸ್ವಗೃಹಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಭೇಟಿ ನೀಡಿ, ಪ್ರಶಸ್ತಿ ಫಲಕ ಪ್ರದಾನ ಮಾಡಿ ಗೌರವಿಸಿದರು. ಈ ವೇಳೆ ಸಾಮಾಜಿಕ ಚಳವಳಿಗಾರ ಅರವಿಂದ್ ಶರ್ಮ ಇದ್ದರು.

ಈಗಿರುವುದು ಹೊರ ರಾಜ್ಯ, ದೇಶದ ಆಪ್‌ಗಳು

ಆಟೋ, ಕ್ಯಾಬ್ ಬುಕ್ಕಿಂಗ್‌ಗಾಗಿ ನಾಳೆಯಿಂದ ಮೈಸೂರಲ್ಲಿ 'ಗೋ ಪಯಣ' ಆಪ್‌ಗೆ ಚಾಲನೆ

ಮೈಸೂರು, ಜೂ.5(ಜಿಎ)-ರಾಜ್ಯದಲ್ಲಿ ಆಟೋ, ಕ್ಯಾಬ್ ಮೊದಲಾದವು ಬಳಸಿಕೊಳ್ಳುತ್ತಿರುವ ಆಪ್‌ಗಳು ಹೊರ ರಾಜ್ಯ ಇಲ್ಲವೇ ಹೊರ ದೇಶದ್ದಾಗಿವೆ. ಹೀಗಾಗಿ ನಮ್ಮದೇ 'ಗೋ ಪಯಣ' ಎಂಬ ಆಪ್ ಸೌಲಭ್ಯ ರೂಪಿಸಿದ್ದು, ಇದಕ್ಕೆ ಜೂ.7ರ ಬೆಳಗ್ಗೆ 10 ಗಂಟೆಗೆ ನಂಜು ಮಳಿಗೆಯ ಗೋಪಾಲಸ್ವಾಮಿ ಪಿಯು ಕಾಲೇಜಿನಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ ಚಾಲನೆ ನೀಡಲಾಗುವುದು ಎಂದು ಇಂಡಿಯಾ ಮೈಂಡ್ ಟೆಕ್ನಾಲಜೀಸ್ ಎಲ್‌ಎಲ್‌ಪಿ ಸಂಸ್ಥಾಪಕ ಡಾ. ಮುರಳಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಟೋ ಚಾಲಕರು ಒಂದು ಬಾರಿ 25 ರೂ. ಹಾಗೂ ಕ್ಯಾಬ್ ಚಾಲಕರು 85 ರೂ. ಪಾವತಿಸಿದಲ್ಲಿ ಇದು ದಿನದ 24 ಗಂಟೆ ಸಕ್ರಿಯವಾಗಿರುತ್ತದೆ. ನಗರದ ಪ್ರದೇಶ ಮಾತ್ರವಲ್ಲ, ಗ್ರಾಮಾಂತರ ಪ್ರದೇಶದಲ್ಲಿನ ಆಟೋ, ಕ್ಯಾಬ್ ಚಾಲಕರು ಸಹಾ ಸದಸ್ಯರಾಗಬಹುದಾಗಿದೆ. ಈ ಆಪ್ ಬಳಸಿಕೊಂಡು ಪ್ರಯಾಣಿಸುವವರು ನೇರವಾಗಿ ಆಟೋ ಅಥವಾ ಕ್ಯಾಬ್ ಚಾಲಕರಿಗೇ ಹೋಗುತ್ತದೆ. ಆದರೆ ಈ ವ್ಯವಸ್ಥೆ ಇತರೆ ಆಪ್‌ಗಳಲ್ಲಿಲ್ಲ. ಅದು ನೇರವಾಗಿ ಕಂಪನಿಗೆ ಹೋಗಿ ಬಹಳಷ್ಟು ಸಮಯದ ಬಳಿಕ ಸಂದಾಯವಾಗುತ್ತದೆ. ಈ ರೀತಿಯ ವಿಳಂಬ ತಮ್ಮ ಗೋ ಪಯಣದಲ್ಲಿಲ್ಲ ಎಂದರು.

ಸರ್ಕಾರ ನಿಗದಿ ಪಡಿಸಿದ ದರವನ್ನು ಮಾತ್ರ ಪ್ರಯಾಣಿಕರು ಪಾವತಿಸುತ್ತಾರೆ. ಯಾವುದೇ ಹೆಚ್ಚುವರಿ ಶುಲ್ಕ ಅಥವಾ ಗುಪ್ತ ವೆಚ್ಚ ಇರುವುದಿಲ್ಲ. ರಾಜ್ಯದ ಜನತೆಯ ಅಭಿವೃದ್ಧಿ ಗಮನದಲ್ಲಿರಿಸಿಕೊಂಡು ಈ ಆಪ್ ರೂಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿಇಓ ಪೃಥ್ವಿ, ಧನುಷ್, ನವನೀತ್ ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಲ್ಲಿ ಕೋಟ್ಯಾಂತರ ರೂ. ಹಗರಣ

- ಕೆಎಸ್‌ಆರ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಯಿಂದ ಮುಖ್ಯ ಕಾರ್ಯದರ್ಶಿಗೆ ದೂರು
- ನಿಯಮ ಗಾಳಿಗೆ ತೂರಿ ಪುತ್ರನ ಸಂಸ್ಥೆಗೆ ಪರಿವರ್ತಕಗಳ ಖರೀದಿಗೆ ಗುತ್ತಿಗೆ
- ಬಿಲ್ಲುಗಳ ಅನುಮೋದನೆಗಾಗಿ ಅಧಿಕಾರಿಗಳ ವರ್ಗಾವಣೆಯ ತಂತ್ರ

ಮೈಸೂರು,ಜೂ.5(ಜಿಎ)-ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದಲ್ಲಿ ನಡೆದಿರುವ ಕೋಟ್ಯಾಂತರ ರೂ. ಮೌಲ್ಯದ ಹಗರಣ ನಡೆದಿದ್ದು, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಇನ್ನಿತರ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ವಕೀಲ ಹಾಗೂ ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ರವಿಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದ್ಯದಲ್ಲಿಯೇ ಲೋಕಾಯುಕ್ತರಿಗೂ ದೂರು ನೀಡಲಾವುದು ಎಂದರು. ರೈತರು ಮತ್ತು ಜನಸಾಮಾನ್ಯರಿಗೆ ಗುಣಮಟ್ಟದ ವಿದ್ಯುತ್ ಪರಿವರ್ತಕ ಹಾಗೂ ವಿದ್ಯುತ್ ನೀಡದೇ, ಪ್ರತಿ ವರ್ಷ ನಿಗಮ ನಷ್ಟದಲ್ಲಿದೆ ಎಂಬ ನೆಪವೊಡ್ಡಿ ವಿದ್ಯುತ್ ದರವನ್ನು ನಿರಂತರವಾಗಿ ಏರಿಸಲಾಗುತ್ತಿದೆ. ಇದೇ ವೇಳೆ ಇನ್ನೊಂದೆಡೆ ಸಾರ್ವಜನಿಕರ ಬೆವರಿನ ತೆರಿಗೆ ಹಣವನ್ನು ನಿಗಮದ ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ಖಾಸಗಿ ಗುತ್ತಿಗೆದಾರರ ಒಕ್ಕೂಟ ಒಂದುಗೂಡಿ ವ್ಯವಸ್ಥಿತವಾಗಿ ಲೂಟಿ ಮಾಡುತ್ತಿದ್ದಾರೆ ಎಂದು ಅವರು ದೂರಿದರು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಅನ್ವಯ 5 ಲಕ್ಷ ರೂ. ಮೀರಿದ ಯಾವುದೇ ಸಾಮಗ್ರಿ ಖರೀದಿಗೆ ಕಡ್ಡಾಯ ವಾಗಿ ರಾಜ್ಯ ಇ.ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಬೇಕು. ಆದರೆ, ಸೆಸ್ಕ್ ಉನ್ನತಾಧಿಕಾರಿಗಳು ಕಾಯ್ದೆಯನ್ನು ಸಂಪೂರ್ಣವಾಗಿ ಗಾಳಿಗೆ ತೂರಿ ಯಾವುದೇ ಟೆಂಡರ್ ಇಲ್ಲದೆ ನೇರ ಖರೀದಿ ಅದೇಶಗಳ ಮೂಲಕ ವಿವಿಧ 8 ಖಾಸಗಿ ಕಂಪನಿಗಳಿಗೆ ಕೋಟ್ಯಾಂ ತರ ರೂ. ಮೌಲ್ಯದ ಒಟ್ಟು 2,693 ವಿದ್ಯುತ್ ಪರಿ ವರ್ತಕಗಳನ್ನು ಪೂರೈಸಲು ಅಕ್ರಮ ಗುತ್ತಿಗೆ ನೀಡಿದ್ದಾರೆ ಎಂದು ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ವಕೀಲ ರವಿಕುಮಾರ್ ಮಾತನಾಡಿದರು.

ಸೆಸ್ಕ್‌ನ ಮಾಜಿ ತಾಂತ್ರಿಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು ತಮ್ಮ ಅಧಿಕಾರಾವಧಿಯಲ್ಲಿ ಯಾವುದೇ ಬ್ಯಾಂಕ್ ಗ್ಯಾರಂಟಿ ಪಡೆಯದೆಯೇ ತಮ್ಮ ಸ್ವಂತ ಮಗನಾದ ಕೆ.ಎಂ. ಸುಪ್ರೀತ್‌ರಾಜ್ ಒಡೆತನದ 'ಮೆಸರ್ಸ್ ಆದ್ಯ ಗ್ರೂಪ್' ಸಂಸ್ಥೆಗೆ ನಿಯಮಬಾಹಿರವಾಗಿ ವಿದ್ಯುತ್ ಪರಿವರ್ತಕಗಳ ಪೂರೈಕೆಯ ಗುತ್ತಿಗೆ ನೀಡಿದ್ದಾರೆ. ಈ ಕುರಿತು ಲೋಕಾಯುಕ್ತ ತನಿಖಾಧಿಕಾರಿಗಳು ಪ್ರಶ್ನಿಸಿದಾಗ ತಮಗೂ ಆ ಕಂಪನಿಗೂ ಯಾವುದೇ ಸಂಬಂಧವಿಲ್ಲ ಎಂದು ಮುನಿಗೋಪಾಲರಾಜು ಸುಳ್ಳು ಲಿಖಿತ ಹೇಳಿಕೆ ನೀಡಿದ್ದರು. ಆದರೆ, ಅಧಿಕೃತ ಒಪ್ಪಂದ ಪತ್ರದಲ್ಲಿ ಸುಪ್ರೀತ್‌ರಾಜ್ ಅವರ ತಂದೆಯ ಹೆಸರು 'ಕೆ.ಎಂ. ಮುನಿಗೋಪಾಲ ರಾಜು' ಎಂದು ಅತ್ಯಂತ ಸ್ಪಷ್ಟವಾಗಿ ನಮೂದಾಗಿದ್ದು ಅವರ ಧರ್ಮಪತ್ನಿ ಹೊನ್ನಮ್ಮ ಜೆ ಒಪ್ಪಂದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ಸಹಿ ಮಾಡಿರುವುದು ದಾಖಲೆಯಲ್ಲಿ ಸಾಕ್ಷಿ ಇದೆ ಎಂದು ತಿಳಿಸಿದರು.

ನಿಯಮಬಾಹಿರವಾಗಿ ಖರೀದಿಸಲಾದ ಈ ಪರಿವರ್ತಕಗಳ ಬಿಲ್ಲುಗಳನ್ನು ಯಾವುದೇ ಆಕ್ಷೇಪಣೆಯಿಲ್ಲದೆ ಪಾಸ್ ಮಾಡಿಸಿಕೊಳ್ಳಲು ಅಧಿಕಾರಿಗಳ ವರ್ಗಾವಣೆ ಆಡಳಿತ ಯಂತ್ರವನ್ನು ಅತ್ಯಂತ ದುರುದ್ದೇಶಪೂರ್ವಕವಾಗಿ ಬಳಸಿಕೊಳ್ಳಲಾಗಿದೆ. ಮೈಸೂರಿನ ದಸರಾ ಹಬ್ಬದ ಅತ್ಯಂತ ಬಿಡುವಿಲ್ಲದ ಸಮಯದಲ್ಲಿ ಯಾವುದೇ ದಕ್ಷ ಅಧಿಕಾರಿಗಳನ್ನು ವರ್ಗಾಯಿಸಬಾರದು ಎಂಬ ನಿಯಮವಿದ್ದರೂ, ಕೇವಲ 3 ತಿಂಗಳ ಅವಧಿಗೆ (20.07.2024ರಿಂದ 23.10.2024) ಅನಿತಾ (ಕಾರ್ಯನಿರ್ವಾಹಕ ಇಂಜಿನಿಯರ್)ರನ್ನು ಎನ್.ಆರ್ ಮೊಹಲ್ಲಾ ವಿಭಾಗದಿಂದ ಕೊಳ್ಳೇಗಾಲ ವಿಭಾಗಕ್ಕೆ ವಿಶೇಷವಾಗಿ ನಿಯೋಜಿಸಲಾಯಿತು. ಇವರು ಅಕ್ರಮ ಬಿಲ್‌ಗಳನ್ನು ಪಾಸ್ ಮಾಡಿದ ತಕ್ಷಣವೇ ಅವರನ್ನು ಮೂಲ ಸ್ಥಾನಕ್ಕೆ ಮರು ನಿಯೋಜನೆಗೊಳಿಸಲಾಯಿತು. ಇದೇ ರೀತಿ, ಚಾಮರಾಜನಗರದಲ್ಲಿ ಅಕ್ರಮ ಬಿಲ್ ಪಾವತಿಗೆ ಅಡ್ಡಿಯಾಗಬಹುದು ಎಂಬ ಭಯದಿಂದ ದಕ್ಷ ಅಧಿಕಾರಿ ಪ್ರದೀಪ್ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಂತೆ 2 ತಿಂಗಳು ತಡೆದು, ಆ ಜಾಗಕ್ಕೆ ಬೇಗೂರಿನ ತಮಗೆ ನಿಷ್ಠರಾದ ರಾಮಚಂದ್ರ ಜೆ ಅವರನ್ನು ಪ್ರಭಾರ ನೆಲೆಯಲ್ಲಿ ನಿಯೋಜಿಸಿ ಅಕ್ರಮ ಬಿಲ್ ಮತ್ತು ನಕಲಿ ವರದಿಗಳ ಮೂಲಕ ಕೋಟ್ಯಾಂತರ ರೂ. ಹಣ ವರ್ಗಾಯಿಸಿ ದ್ದಾರೆ ಎಂದು ದೂರಿದರು. ನಿಗಮದ ಪ್ರಗತಿ ಪರಿಶೀಲನೆ ನೆಪದಲ್ಲಿ ಖಾಸಗಿ ಭವನದಲ್ಲಿ ಸಭೆ ಕರೆದು, ಭ್ರಷ್ಟಾಚಾರದ ಆರೋಪಿಯಾಗಿರುವ ಮಾಜಿ ಎಂಡಿ ಮುನಿಗೋಪಾಲರಾಜು ಅವರ ವೈಯಕ್ತಿಕ ಬೀಳ್ಕೊಡುಗೆ ಕಾರ್ಯಕ್ರಮ ನಡೆಸಿ ಎಲ್ಲರಿಗೂ ದುಬಾರಿ ಉಡುಗೊರೆ ನೀಡಲಾಗಿದೆ. ಈ ರೀತಿ ಎಲ್ಲಾ ಅಕ್ರಮಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ನಿಯಮ ಬಾಹಿರವಾದ ಎಲ್ಲ ಖರೀದಿ ಆದೇಶ ರದ್ದುಗೊಳಿಸಬೇಕು ಎಂದು ಅಧಿಕಾರಿಗಳಲ್ಲಿ ಒತ್ತಾಯಿಸಲಾಗಿದೆ ಎಂದರು. ನಾಗರಾಜು, ರವೀಂದ್ರ, ರವಿ ಗೋಷ್ಠಿಯಲ್ಲಿದ್ದರು.



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಚಾವಿಸನಿನಿ) ವ್ಯವಸ್ಥಾಪಕ ನಿರ್ದೇಶಕನಾಗಿ ಅಭಿವೃದ್ಧಿ ಕೆಲಸಗಳನ್ನು ನಿಯಮಾನುಸಾರ ಮಾಡಿದ್ದೇನೆ. ಕಾಮಗಾರಿ/ಪರಿವರ್ತಕಗಳ ಖರೀದಿಗಳಲ್ಲಿ ನಿಯಮಾನುಸಾರ ಟೆಂಡರ್ ಕರೆದು, ಇಲಾಖೆ ಅನುಮೋದನೆ ಪಡೆದು ನೀಡಲಾಗಿದೆ. ಇದರಲ್ಲಿ ಯಾವುದೇ ರೀತಿಯ ನಿಯಮ ಉಲ್ಲಂಘನೆ ಆಗಿಲ್ಲ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸೆಸ್ಕ್ ಕಚೇರಿಯಲ್ಲಿ ಪಡೆಯಬಹುದಾಗಿದೆ. ಕೆಆರ್‌ಎಸ್ ಪಕ್ಷದಿಂದ ನನ್ನ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರ ಹಾಗೂ ಆಧಾರರಹಿತವಾಗಿವೆ.

–ಕೆ.ಎಂ.ಮುನಿಗೋಪಾಲರಾಜು, ನಿವೃತ್ತ ವ್ಯವಸ್ಥಾಪಕ ನಿರ್ದೇಶಕ, ಸೆಸ್ಕ್, ಮೈಸೂರು

ಜೂ.7ಕ್ಕೆ ಐಆರ್‌ಎಂ ಥ್ರೋಟಲ್ ವ್ಯಾಲಿ ಡರ್ಟ್ ಟ್ರ್ಯಾಕ್ ಉದ್ಘಾಟನೆ

ಮೈಸೂರು, ಜೂ.5(ಎಂಕೆ)- ಶ್ರೀರಂಗಪಟ್ಟಣ ಸಮೀಪದ ಕೆ.ಶೆಟ್ಟಿಹಳ್ಳಿಯ ಸುಮಾರು ನಾಲ್ಕೂವರೆ ಎಕರೆ ಪ್ರದೇಶದಲ್ಲಿ ಐಆರ್‌ಎಂ ಥ್ರೋಟಲ್ ವ್ಯಾಲಿ ಡರ್ಟ್ ಟ್ರ್ಯಾಕ್ ನಿರ್ಮಿಸಿದ್ದು, ಜೂ.7 ರಂದು ಬೆಳಗ್ಗೆ 11ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ಮಾಲೀಕರಲ್ಲಿ ಒಬ್ಬರಾದ ರಕ್ಷಿತ್ ಅಯ್ಯರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮೋಟಾರ್ ಸ್ಪೋರ್ಟ್ಸ್‌ನಲ್ಲಿ ಆಸಕ್ತಿ ಇರುವವರು ಇಲ್ಲಿಗೆ ಭೇಟಿ ನೀಡಿ ತರಬೇತಿ ಪಡೆಯಬಹುದಾಗಿದ್ದು, ಮೋಟಾರ್ ಸ್ಪೋರ್ಟ್ಸ್ ಬಳಸುವ ವಾಹನದಲ್ಲಿ ಪ್ರಯಾಣದ ವಿಶಿಷ್ಟ ಅನುಭವ ಪಡೆಯಬಹುದಾಗಿದೆ ಎಂದರು.

ತಮ್ಮ ಸಹೋದರ ರೋಹಿತ್ ಅಯ್ಯರ್‌ರೊಡನೆ ಸೇರಿಕೊಂಡು ತಾವಿದನ್ನು ಸ್ಥಾಪಿಸಿದ್ದು, ಅಂದು ಮಧ್ಯಾಹ್ನ 2 ಗಂಟೆಗೆ ಮೋಟಾರ್ ರೇಸಿಂಗ್ ಪ್ರಾತ್ಯಕ್ಷಿಕೆ ವೀಕ್ಷಿಸಬಹುದಾಗಿದೆ. ಆಸಕ್ತಿಯುಳ್ಳವರು ಕಾರಿನಲ್ಲಿ ಪೂರ್ಣ ಸುರಕ್ಷತಾ ಮಾನದಂಡದೊಡನೆ ಕುಳಿತ ರೋಮಾಂಚಕಾರಿ ಅನುಭವ ಪಡೆಯಬಹುದಾಗಿದೆ. ತಾವು ಈಗಾಗಲೇ ಹಲವಾರು ಮೋಟಾರ್ ರೇಸಿಂಗ್‌ನಲ್ಲಿ ಭಾಗಿಯಾಗಿ ಅನೇಕ ಬಹುಮಾನ ಪಡೆದಿದ್ದು, ಮೋಟಾರ್ ರೇಸಿಂಗ್ ಹವ್ಯಾಸ ರೂಢಿಸಿಕೊಳ್ಳಬೇಕೆನ್ನುವವರಿಗೆ ತರಬೇತಿ ನೀಡಲು ಆರಂಭಿಸಿರುವುದಾಗಿ ಮಾಹಿತಿ ನೀಡಿದರು. ರೋಹಿತ್ ಅಯ್ಯರ್, ಸಚಿನ್ ಹಾಗೂ ಚರಿತಾಗೌಡ ಉಪಸ್ಥಿತರಿದ್ದರು.

ದೇಶ - ವಿದೇಶ

ಗರ್ಲ್‌ಫ್ರೆಂಡ್ಸ್‌ಗೆ ಐಫೋನ್ ಗಿಫ್ಟ್ ನೀಡಲು 6.5 ಲಕ್ಷ ಮೌಲ್ಯದ ನಲ್ಲಿ ಕದ್ದ ಅಪ್ರಾಪ್ತರು

ನಾಗಪುರ: ಪ್ರೇಮಪಾಶಕ್ಕೆ ಬಿದ್ದ ಯುವಕರು ತಮ್ಮ ಗರ್ಲ್‌ಫ್ರೆಂಡ್‌ಗಳನ್ನು ಮೆಚ್ಚಿಸಲು ಏನೆಲ್ಲಾ ಮಾಡುತ್ತಾರೆ ಎಂಬುದಕ್ಕೆ ಉದಾಹರಣೆಯಾಗಿ ಮಹಾರಾಷ್ಟ್ರದ ನಾಗಪುರದಲ್ಲಿ ಒಂದು ವಿಚಿತ್ರ ಮತ್ತು ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ. ತಮ್ಮ ಪ್ರೇಯಸಿಯರಿಗೆ ದುಬಾರಿ ಬೆಲೆಯ ಐಫೋನ್ ಮೊಬೈಲ್‌ಗಳನ್ನು ಉಡುಗೊರೆಯಾಗಿ ನೀಡಲು ಹಣವಿಲ್ಲದೆ, ಮೂವರು ಯುವಕರು ಸೇರಿ ಅಂಗಡಿ ಮತ್ತು ಐಷಾರಾಮಿ ಬಂಗಲೆಗಳಿಂದ ಬರೋಬ್ಬರಿ 6.5 ಲಕ್ಷ ರೂಪಾಯಿ ಮೌಲ್ಯದ ನೀರಿನ ನಲ್ಲಿಗಳನ್ನು ಕದ್ದಿದ್ದಾರೆ. ಈ ಮೂವರನ್ನು ನಾಗಪುರ ಪೊಲೀಸರು ಬಂಧಿಸಿದ್ದಾರೆ.'ರಾಹುಲ್ ಸೆರಾಮಿಕ್ಸ್ ಪ್ರೈವೇಟ್ ಲಿಮಿಟೆಡ್' ಹೆಸರಿನ ಗೋದಾಮಿನ ಮಾಲೀಕ ರಾಹುಲ್ ಜಯಚಂದ್ ಬಾತ್ರಾ ಅವರು ಪೊಲೀಸರಿಗೆ ದೂರು ನೀಡಿದ ನಂತರ ಈ ಘಟನೆ ಬೆಳಕಿಗೆ ಬಂದಿದೆ. ಬಂಧಿತ ಯುವಕರು ನಾಗಪುರದ ಹಜಾರಿಪಹಾಡ್ ಮತ್ತು ಸೆಮಿನರಿ ಹಿಲ್ಸ್‌ನಂತಹ ಗಣ್ಯರು ವಾಸಿಸುವ ಪ್ರದೇಶಗಳನ್ನು ಗುರಿಯಾಗಿಸಿಕೊಂಡಿದ್ದರು. ಇಲ್ಲಿನ ಗೋಡೌನ್, ದೊಡ್ಡ ದೊಡ್ಡ ಬಂಗಲೆಗಳು ಮತ್ತು ಅಪಾರ್ಟ್‌ಮೆಂಟ್‌ಗಳಿಗೆ ನುಗ್ಗಿ, ಅಲ್ಲಿ ಅಳವಡಿಸಲಾಗಿದ್ದ ಅತ್ಯಂತ ದುಬಾರಿ ಮೌಲ್ಯದ ಹಿತ್ತಾಳೆ ಮತ್ತು ಕರಕುಶಲ ವಿನ್ಯಾಸದ ನಲ್ಲಿಗಳನ್ನು ಬಿಚ್ಚಿ ಕದಿಯುತ್ತಿದ್ದರು. ಕದ್ದ ಸಾಮಗ್ರಿಗಳ ಒಟ್ಟು ಮೌಲ್ಯ 6.5 ಲಕ್ಷ ರೂಪಾಯಿ ಎಂದು ಅಂದಾಜಿಸಲಾಗಿತ್ತು.

ವಿಚ್ಛೇದನ ಪಡೆದ 23 ವರ್ಷಗಳ ಬಳಿಕ 85 ಕೋಟಿ ಜೀವನಾಂಶ ಪಡೆದ ಮಹಿಳೆ


ಲಂಡನ್: ಬ್ರಿಟನ್‌ನಲ್ಲಿ ನೆಲೆಸಿರುವ ಭಾರತ ಮೂಲದ



ಮಹಿಳೆ ವರ್ಷಾ ಗೋಹಿಲ್ ವಿಚ್ಛೇದನದ ಬಳಿಕ ತಮ್ಮ ಹಕ್ಕು ಮತ್ತು ನ್ಯಾಯಕ್ಕಾಗಿ ಕಳೆದ 23ವರ್ಷಗಳಿಂದ ನಡೆಸಿದ ಹೋರಾಟಕ್ಕೆ ಅಂತೂ ಜಯ ಸಿಕ್ಕಿದೆ. ಪತಿಯು ಮುಚ್ಚಿಟ್ಟಿದ್ದ ಸಂಪತ್ತನ್ನು ಕಾನೂನುಬದ್ಧವಾಗಿ ಪತ್ತೆಹಚ್ಚುವಲ್ಲಿ ಯಶಸ್ವಿಯಾದ ವರ್ಷಾ ಅವರಿಗೆ ಯುಕೆ ನ್ಯಾಯಾಲಯವು ಸುಮಾರು 6.6 ಮಿಲಿಯನ್ ಪೌಂಡ್‌ಗಳು ಅಂದರೆ ಭಾರತೀಯ ಕರೆನ್ಸಿಯಲ್ಲಿ ಸರಿಸುಮಾರು 85 ಕೋಟಿ ರೂ.ಗಳನ್ನು ನೀಡುವಂತೆ ಆದೇಶಿಸಿದೆ. ಈ ತೀರ್ಪು ಜಾಗತಿಕ ಮಟ್ಟದಲ್ಲಿ ಕೌಟುಂಬಿಕ ನ್ಯಾಯ ಮತ್ತು ಆರ್ಥಿಕ ಪಾರದರ್ಶಕತೆಯ ಕಾನೂನಿಗೆ ಒಂದು ಅತ್ಯಂತ ಮಹತ್ವದ ಮೈಲಿಗಲ್ಲಾಗಿ ಹೊರಹೊಮ್ಮಿದೆ. ಈ ಕಥೆ ಆರಂಭವಾದದ್ದು 2002ರಲ್ಲಿ. ವರ್ಷಾ ಗೋಹಿಲ್ ಅವರು ತಮ್ಮ ಪತಿಯಿಂದ ವಿಚ್ಛೇದನ ಪಡೆದಾಗ ಆರಂಭಿಕ ಒಪ್ಪಂದದಂತೆ ಕೆಲವು ಆಸ್ತಿ ಮತ್ತು ಆರ್ಥಿಕ ಸಹಾಯವನ್ನು ಪಡೆದುಕೊಂಡಿದ್ದರು. ಆದರೆ, ತನ್ನ ಮಾಜಿ ಪತಿ ತನ್ನ ಸಂಪೂರ್ಣ ಆಸ್ತಿಯ ವಿವರಗಳನ್ನು ಕೋರ್ಟ್‌ಗೆ ಹಂಚಿಕೊಳ್ಳದೆ ಮುಚ್ಚಿಟ್ಟಿದ್ದಾರೆ ಎಂಬ ಬಲವಾದ ಅನುಮಾನ ವರ್ಷಾ ಅವರಿಗೆ ಇತ್ತು. ಆರಂಭದಲ್ಲಿ ಯಾವುದೇ ಪುರಾವೆಗಳಿಲ್ಲದಿದ್ದರೂ, ಅವರು ತಮ್ಮ ನ್ಯಾಯಸಮ್ಮತ ಹೋರಾಟವನ್ನು ಎಂದಿಗೂ ಕೈಬಿಡಲಿಲ್ಲ. ವರ್ಷಾ ಅವರ ಈ ಗೆಲುವು ಜಗತ್ತಿನಾದ್ಯಂತ ಲಕ್ಷಾಂತರ ಮಹಿಳೆಯರ ಆತ್ಮವಿಶ್ವಾಸ ಮತ್ತು ಸ್ವಾಭಿಮಾನಕ್ಕೆ ಸಂದ ಜಯವಾಗಿದೆ ಎಂದು ಕಾನೂನು ತಜ್ಞರು ಬಣ್ಣಿಸಿದ್ದಾರೆ.

ವಾಯುಪಡೆಯ ನೂತನ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ನೇಮಕ

ನವದೆಹಲಿ: ಭಾರತೀಯ ವಾಯುಪಡೆಯ ನೂತನ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ನೇಮಕಗೊಂಡಿದ್ದಾರೆ. ಜುಲೈ 1ರಿಂದ ಅವರು ಈ ನೂತನ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ.



ಪ್ರಸ್ತುತ ಅವರು ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್‌ನ ಪ್ರಧಾನ ಕಚೇರಿಯಲ್ಲಿ ಚೀಫ್ ಆಫ್ ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಏರ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ತಮ್ಮ ವಿವಿಧ ಅಧಿಕಾರಾವಧಿಯಲ್ಲಿ ವಾಯುಪಡೆಯ ಆಧುನೀಕರಣ ಮತ್ತು ವಾಯುಪಡೆಯಲ್ಲಿ ದೇಶೀಯ ಫೈಟರ್ ಜೆಟ್ ಯೋಜನೆಗಳನ್ನು ಉತ್ತೇಜಿಸುವಲ್ಲಿ ಏರ್ ಮಾರ್ಷಲ್ ಅಶುತೋಷ್ ಪ್ರಮುಖ ಕೊಡುಗೆ ನೀಡಿದ್ದಾರೆ. ಅಲ್ಲದೆ, ಮೀಡಿಯಂ ಮಲ್ಟಿ-ರೋಲ್ ಕಾಂಬ್ಯಾಟ್ ಏರ್‌ಕ್ರಾಫ್ಟ್ ಪ್ರಯೋಗಗಳ ಯೋಜನೆ ಮತ್ತು ನಿರ್ವಹಣೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಇವರು ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಖಡಕ್ವಾಸ್ಲಾ, ಡಿಫೆನ್ಸ್ ಸರ್ವಿಸಸ್ ಸ್ಟಾಫ್ ಕಾಲೇಜ್ (ಬಾಂಗ್ಲಾದೇಶ) ಮತ್ತು ನವದೆಹಲಿಯ ನ್ಯಾಷನಲ್ ಡಿಫೆನ್ಸ್ ಕಾಲೇಜ್‌ನ ಹಳೆಯ ವಿದ್ಯಾರ್ಥಿ. ದಕ್ಷಿಣ ವಲಯದ ಪ್ರಮುಖ ಫೈಟರ್ ಟ್ರೈನಿಂಗ್ ಬೇಸ್‌ನ ಕಮಾಂಡರ್ ಆಗಿಯೂ ಕಾರ್ಯನಿರ್ವಹಿಸಿದ್ದ ಇವರ ಸುದೀರ್ಘ ಅನುಭವವು ಭಾರತೀಯ ವಾಯುಪಡೆ ಮತ್ತಷ್ಟು ಬಲಪಡಿಸಲಿದೆ.

ಭಾರತ-ಅಮೆರಿಕ ಬಾಂಧವ್ಯಕ್ಕೆ ಹೊಸ ಮೈಲಿಗಲ್ಲು

ವಾಷಿಂಗ್ಟನ್: ಭಾರತ ಮತ್ತು ಅಮೆರಿಕ ನಡುವಿನ ಆರ್ಥಿಕ ಹಾಗೂ ರಾಜತಾಂತ್ರಿಕ ಬಾಂಧವ್ಯವನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ



ಅತ್ಯಂತ ಆಶಾದಾಯಕ ಬೆಳವಣಿಗೆಯೊಂದು ಶ್ವೇತ ಭವನದಲ್ಲಿ ನಡೆದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ತಮ್ಮ 'ಅತ್ಯಂತ ಆಪ್ತ ಮತ್ತು ಒಳ್ಳೆಯ ಸ್ನೇಹಿತ' ಎಂದು ಮುಕ್ತಕಂಠದಿಂದ ಶ್ಲಾಘಿಸಿದ್ದು, ಉಭಯ ದೇಶಗಳು ಶೀಘ್ರದಲ್ಲೇ ಪರಸ್ಪರ ಪ್ರಯೋಜನಕಾರಿ ವ್ಯಾಪಾರ ಒಪ್ಪಂದಕ್ಕೆ ಬರಲಿವೆ ಎಂಬ ಬಲವಾದ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಆಮದು ಸುಂಕಗಳು ಮತ್ತು ಜಾಗತಿಕ ಕಾರ್ಮಿಕ ಮಾನದಂಡಗಳ ಕುರಿತು ಉಂಟಾಗಿದ್ದ ಸಣ್ಣಪುಟ್ಟ ತಾಂತ್ರಿಕ ಭಿನ್ನಾಭಿಪ್ರಾಯಗಳ ನಡುವೆಯೂ, ಟ್ರಂಪ್ ಅವರ ಈ ಸೌಹಾರ್ದಯುತ ಹೇಳಿಕೆಯು ಭಾರತ-ಯುಎಸ್ ವ್ಯಾಪಾರ ಮಾತುಕತೆಗೆ ಹೊಸ ಚೈತನ್ಯ ನೀಡಿದೆ. ಪ್ರಧಾನಿ ಮೋದಿ ಮೇಲಿನ ಗೌರವ ಒಪ್ಪಂದಕ್ಕೆ ದಾರಿ. ಶ್ವೇತ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧಗಳು ಪ್ರಸ್ತುತ ಉನ್ನತ ಮಟ್ಟದಲ್ಲಿವೆ ಎಂದು ಹೆಮ್ಮೆಯಿಂದ ಹೇಳಿದ್ದಾರೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತನಾಡಿ ಮೋದಿಯೆಂದರೆ ತನಗೆ ತುಂಬಾ ಇಷ್ಟ, ಅವರು ನನ್ನ ಒಳ್ಳೆಯ ಸ್ನೇಹಿತ ಎಂದು ಹೇಳಿದ್ದಾರೆ.

ಮಣಿಪುರದಲ್ಲಿ ಗುಂಡಿನ ದಾಳಿಗೆ ಮೂವರ ಸಾವು, ಮನೆಗಳಿಗೆ ಬೆಂಕಿ

ಇಂಫಾಲ್: ಮಣಿಪುರದ ಕಾಂಗ್ಪೋಕ್ಪಿ ಜಿಲ್ಲೆಯಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, ಮೂವರು ಸಾವನ್ನಪ್ಪಿದ್ದಾರೆ. ಶುಕ್ರವಾರ ಮುಂಜಾನೆ ಅಪರಿಚಿತ



ಶಸ್ತ್ರಸಜ್ಜಿತ ದುಷ್ಕರ್ಮಿಗಳು ನ್ಯೂ ಕೈಥೆಲ್‌ಮಾನ್ಬಿ ಪ್ರದೇಶದ ಲೋಯಿಬೋಲ್ ಗ್ರಾಮದ ಮೇಲೆ ಮಾರಕ ದಾಳಿ ನಡೆಸಿದ್ದಾರೆ. ಹಿಂಸಾಚಾರಕ್ಕೆ ಮೂವರು ಬಲಿಯಾಗಿದ್ದು, ಹಲವಾರು ಮನೆಗಳು ಸುಟ್ಟು ಭಸ್ಮವಾಗಿವೆ. ಮುಂಜಾನೆ 4.10ರ ಸುಮಾರಿಗೆ ಈ ದಾಳಿ ನಡೆದಿದೆ. ಭಾರೀ ಶಸ್ತ್ರಸಜ್ಜಿತ ದಾಳಿಕೋರರು ಗ್ರಾಮದ ಮೇಲೆ ಮನಬಂದಂತೆ ಗುಂಡು ಹಾರಿಸಿದ್ದು, ಗ್ರಾಮದ ನಿವಾಸಿಗಳಲ್ಲಿ ಭೀತಿ ಮೂಡಿಸಿದೆ.

ಮೃತರನ್ನು ಲೆತ್ಖೋಂಗಮ್ ಹಾವೋಕಿಪ್, ಟಿನ್ಮರಿ ಹಾವೋಕಿಪ್ ಮತ್ತು ಜಂಗ್ಮಿನ್ಲಾಲ್ ಹಾವೋಕಿಪ್ ಎಂದು ಗುರುತಿಸಲಾಗಿದೆ. ಪ್ರದೇಶದಲ್ಲಿ ತೀವ್ರ ಗುಂಡಿನ ಚಕಮಕಿ ಮತ್ತು ಬೆಂಕಿ ಇಡುವ ಸುದ್ದಿ ತಿಳಿದ ಬೆನ್ನಲ್ಲೇ ಭದ್ರತಾ ಪಡೆಗಳು ಪ್ರದೇಶಕ್ಕೆ ಧಾವಿಸಿವೆ. ಇದುವರೆಗೂ ಯಾವುದೇ ಗುಂಪು ಹಿಂಸಾಚಾರದ ಹೊಣೆ ಹೊತ್ತುಕೊಂಡಿಲ್ಲ. ಸ್ಥಳೀಯ ನಿವಾಸಿಗಳು ಸಶಸ್ತ್ರ ಬಂಡುಕೋರರು ಎಸಗಿರಬಹುದೆಂದು ಶಂಕಿಸಲಾಗಿದೆ. ಇದರಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ.

ಕೊಡಗು ಜಿಲ್ಲೆಯಾದ್ಯಂತ ಸಂಘ-ಸಂಸ್ಥೆ, ಶಾಲಾ ಮಕ್ಕಳಿಂದ ಪರಿಸರ ದಿನಾಚರಣೆ








ಮಡಿಕೇರಿ, ವಿರಾಜಪೇಟೆ, ಕುಶಾಲನಗರ ಮತ್ತು ನಾಪೋಕ್ಲುನಲ್ಲಿ ವಿದ್ಯಾರ್ಥಿಗಳು ಮಹಿಳಾ ಸಂಸ್ಥೆಗಳು, ಕಾನೂನು ಸೇವಾ ಸಮಿತಿ ಗಿಡ ನೆಡುವುದು, ಜಾಥಾ ನಡೆಸುವುದರ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಿದವು.

ಮಡಿಕೇರಿ, ಜೂ.5-ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜಿಲ್ಲೆಯ ವಿವಿದೆಡೆ ಶಾಲಾ ಕಾಲೇಜು, ಸಂಘ ಸಂಸ್ಥೆಗಳು ತಮ್ಮದೇ ಆದ ರೀತಿಯಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಿದವು.

ಕೊಡಗು ವಿದ್ಯಾಲಯದಲ್ಲಿ ವಿವಿಧ ಪರಿಸರ ಸ್ನೇಹಿ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಕೊಡಗು ವಿದ್ಯಾಲಯದ ಎನ್‌ಸಿಸಿ ಘಟಕ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ಪ್ರಾಂಶುಪಾಲೆ ಕೆ.ಎಸ್. ಸುಮಿತ್ರಾ, ಆಡಳಿತ ವ್ಯವಸ್ಥಾಪಕ ಪಿ.ರವಿ. ಡಿಆರ್‌ಎಫ್‌ಒ ಸುನಿಲ್ ಮತ್ತು ಅವರ ತಂಡದ ಸಮ್ಮುಖದಲ್ಲಿ ಉಕ್ಕುಡದ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ಸಸಿಗಳನ್ನು ನೆಡಲಾಯಿತು.

ವಿದ್ಯಾರ್ಥಿಗಳು ಉತ್ಸಾಹದಿಂದ ವಿವಿಧ ಪ್ರಬೇಧದ ಸಸಿಗಳನ್ನು ನೆಟ್ಟು, ಅವುಗಳ ಸಂರಕ್ಷಣೆ ಹಾಗೂ ಪೋಷಣೆಯ ಜವಾಬ್ದಾರಿಯನ್ನು ಅರಿತುಕೊಂಡರು. ಈ ಕಾರ್ಯಕ್ರಮ ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಸುವುದರ ಜೊತೆಗೆ, ಪ್ರಕೃತಿಯ ಬಗ್ಗೆ ಕಾಳಜಿ ಮತ್ತು ಜವಾಬ್ದಾರಿಯ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಎನ್‌ಸಿಸಿ ಕೆಡೆಟ್‌ಗಳು ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು.

ವಿರಾಜಪೇಟೆ: ಪರಿಸರದಿಂದ ಎಲ್ಲವನ್ನು ಪಡೆದುಕೊಳ್ಳುವ ಮಾನವ ಪರಿಸರಕ್ಕೆ ಏನಾದರೂ ಕೊಡುಗೆ ನೀಡುವಂತಾಗಬೇಕು ಎಂದು 2ನೇ ಅಪರ ಜಿಲ್ಲಾ ಸತ್ರ ನ್ಯಾಯಾಧೀಶರಾದ ಎಸ್.ನಟರಾಜ್ ಹೇಳಿದರು.

'ವಿಶ್ವ ಪರಿಸರ ದಿನಾಚರಣೆ' ಅಂಗವಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ ಅರಣ್ಯ ಇಲಾಖೆ ಪ್ರಾದೇಶಿಕ ವಿಭಾಗ, ಸರಕಾರಿ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಕಾಲೇಜಿನ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಎಲ್ಲಾ ವಸ್ತು ಸಾಮಗ್ರಿಗಳನ್ನು ಕೊಂಡುಕೊಳ್ಳುವ ಸಂದರ್ಭ ಪಟ್ಟಣ ಹಾಗೂ ಇತರೆಡೆಗಳಲ್ಲಿ ಪ್ಲಾಸ್ಟಿಕ್ ಬ್ಯಾಗ್ ಬಳಸುತ್ತಿರುವುದರಿಂದ ಪರಿಸರಕ್ಕೆ ಹಾನಿ ಉಂಟಾಗುತ್ತಿದೆ. ಅದರಿಂದ ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡಬೇಕಾಗಿದೆ. ಪರಿಸರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಗಿಡ ನೆಡುವ ಮೂಲಕ ಮರಗಳನ್ನು ಬೆಳೆಸುವಂತಾಗಬೇಕು. ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯವಾಗಿದೆ ಎಂದರು.

ಅರಣ್ಯ ಸಹಾಯಕ ಸಂರಕ್ಷಣಾಧಿಕಾರಿ ತಹಸೀನ್ ಬಾನು ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಪ್ರಧಾನ ಸಿವಿಲ್ ನ್ಯಾಯಾಧೀಶ ಎ.ವಿಶ್ವನಾಥ್, ತಹಶೀಲ್ದಾರ್ ಪ್ರವೀಣ್ ಕುಮಾರ್, ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರೈಮಂಡ್, ವಕೀಲರ ಸಂಘದ ಅಧ್ಯಕ್ಷ ಸಿ.ಕೆ.ಪೂವಣ್ಣ, ವಕೀಲ ವಿ.ಪಿ.ರಮೇಶ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ನಾಪೋಕ್ಲು: ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ವತಿಯಿಂದ ಕಾರುಗುಂದ ಗೌಡ ಸಮಾಜದ ಆವರಣದಲ್ಲಿ ಗಿಡ ನೆಡುವುದರೊಂದಿಗೆ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಕಾರ್ಯಕ್ರಮದ ನೇತೃತ್ವ ವಹಿಸಿ ದಿನದ ಮಹತ್ವದ ಬಗ್ಗೆ ಮಾತನಾಡಿದರು. ಒಕ್ಕೂಟದ ಉಪಾಧ್ಯಕ್ಷೆ ಹೊಸೋಕ್ಲು ಲತಾ ಮೊಣ್ಣಪ್ಪ, ಕಾರ್ಯದರ್ಶಿ ಕೇಕಡ ಪೂಜಾ ನಾಗೇಂದ್ರ, ಕೋಶಾಧಿಕಾರಿ ಕೊಡಪಾಲು ತೀರ್ಥ ಗಣಪತಿ, ಸಂಘಟನಾ ಕಾರ್ಯದರ್ಶಿ ಬೈಮನ ಜ್ಯೋತಿ ತಿಮ್ಮಯ್ಯ, ನಿವೃತ್ತ ಶಿಕ್ಷಕಿ ಪಾಣತಲೆ ತಾರಾಮಣಿ, ಬೈಮನ ಕಾಂತಿ ದಯಾನಂದ ಸೇರಿದಂತೆ ಒಕ್ಕೂಟದ ನಿರ್ದೇಶಕರು ಪಾಲ್ಗೊಂಡಿದ್ದರು.

ಕುಶಾಲನಗರ : ಸಮೀಪದ ಕೂಡುಮಂಗಳೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಅರಣ್ಯ ಇಲಾಖೆ, ಶಾಲೆಯ ಇಕೋ ಕ್ಲಬ್ ಹಾಗೂ ಭಾರತ್ ಸ್ಕೌಟ್ಸ್, ಗೈಡ್ಸ್ ಸಂಸ್ಥೆ ವತಿಯಿಂದ ನಮ್ಮ ನಡೆ ಹಸಿರೆಡೆಗೆದಡಿ ಶುಕ್ರವಾರ ಪ್ರಕೃತಿಯಿಂದ ಪ್ರೇರಿತ, ಹವಾಮಾನಕ್ಕಾಗಿ, ನಮ್ಮ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಭಾರತ್ ಸ್ಕೌಟ್ಸ್, ಗೈಡ್ಸ್ ಸಂಸ್ಥೆಯ ಸ್ಥಳೀಯ ಸಂಸ್ಥೆ ಅಧ್ಯಕ್ಷ ಡಾ ಪ್ರವೀಣ್ ದೇವರಗುಂಡ ಸೋಮಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಪ್ರತಿಯೊಬ್ಬರೂ ಅರಣ್ಯ ಮತ್ತು ಪರಿಸರ ಸಂರಕ್ಷಣೆಗೆ ತೊಡಗಿದಾಗ ಮಾತ್ರ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಶಾಲಾ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮಕುಮಾರ್ ಮಾತನಾಡಿದರು. ಜಿಲ್ಲಾ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಎಂ.ಟಿ.ದಯಾನಂದ ಪ್ರಕಾಶ್ ಪರಿಸರ ಪ್ರತಿಜ್ಞಾ ವಿಧಿ ಬೋಧಿಸಿದರು. ಹಿರಿಯ ಶಿಕ್ಷಕ ಕೆ.ಗೋಪಾಲಕೃಷ್ಣ, ಶಿಕ್ಷಕಿಯರಾದ ಬಿ.ಎನ್.ಸುಜಾತ, ಎಸ್.ಎಂ. ಗೀತಾ, ಬಿ.ಎಸ್.ಅನ್ನಿಲಾ ರೇಖಾ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ತಳೂರು ಎ.ಭೋಜಪ್ಪ ನಿಧನ



ನಾಪೋಕ್ಲು, ಜೂ.5-ಅರ್ವತ್ತೋಕ್ಲು ಗ್ರಾಮದ ತಳೂರು ಎ. ಭೋಜಪ್ಪ (ಅಪ್ಪ ದೊರೆ 65) ಗುರುವಾರ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ ಜಾನಕಿ ಹಾಗೂ ಓರ್ವ ಪುತ್ರ, ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಅರ್ವತ್ತೋಕ್ಲು ಗ್ರಾಮದಲ್ಲಿ ನೆರವೇರಿತು.

ಕೃಷ್ಣವೇಣಿ ನಿಧನ

ಮಡಿಕೇರಿ ಆಂಜನೇಯ ದೇವಾಲಯದ ಅರ್ಚಕ ಬಿಆರ್ ಸುರೇಶ ಸಗರಿತಾಯರ ಪತ್ನಿ ಕೃಷ್ಣವೇಣಿ (58) ಗುರುವಾರ ಅನಾರೋಗ್ಯದಿಂದ ನಿಧನರಾದರು. ಮೃತರು ಪತಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಹಿಂದು ರುದ್ರಭೂಮಿಯಲ್ಲಿ ಜರುಗಿತು.



ಕೇಂದ್ರ ಕಾರಾಗೃಹದಲ್ಲಿ ಎಡಿಜಿಪಿ, ಐಜಿಪಿ ಮಾಹಿತಿ ಸಂಗ್ರಹಣೆ

ಮಡಿಕೇರಿ: ಕೇಂದ್ರ ಕಾರಾಗೃಹದಲ್ಲಿ ನಡೆದಿದ್ದ ವಿಚಾರಣಾಧೀನ ಕೈದಿಯ ಮೇಲೆ ಚೂರಿ ಇರಿತ ಪ್ರಕರಣದ ತನಿಖೆ ಚುರುಕುಗೊಳಿಸಲಾಗಿದೆ. ರಾಜ್ಯ ಬಂಧಿಖಾನೆ ಇಲಾಖೆ ಎಡಿಜಿಪಿ ಅಲೋಕ್ ಕುಮಾರ್ ಮತ್ತು ದಕ್ಷಿಣ ವಲಯ ಬಂಧಿಖಾನೆ ಇಲಾಖೆ ಐಜಿಪಿ ದಿವ್ಯಶ್ರೀ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಎಡಿಜಿಪಿ, ಐಜಿಪಿ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.

ಜೈಲು ಸಿಬ್ಬಂದಿಗಳು, ವಿವಿಧ ಬ್ಯಾರಕ್‌ಗಳಲ್ಲಿ ಬಂಧನದಲ್ಲಿರುವ ಇತರೆ ವಿಚಾರಣಾಧೀನ ಕೈದಿಗಳಿಂದ ಮಾಹಿತಿ ಪಡೆದುಕೊಂಡರು. ಮಾರಣಾಂತಿಕ ಹಲ್ಲೆ ನಡೆದ ಸ್ಥಳ, ಸಿ.ಸಿ ಕ್ಯಾಮರಾ ದೃಶ್ಯಗಳು, ಕರ್ತವ್ಯದಲ್ಲಿದ್ದ ಸಿಬ್ಬಂದಿ, ಭದ್ರತಾ ವ್ಯವಸ್ಥೆ ಪರಿಶೀಲನೆ ನಡೆಸಿದರು.

ವಿಚಾರಣಾಧೀನ ಕೈದಿಗಳ ಸಂಖ್ಯೆ, ಪುರುಷ ಮತ್ತು ಮಹಿಳಾ ಕೈದಿಗಳ ವಿವರ ಮತ್ತಿತರ ವಿಚಾರಗಳ ಬಗ್ಗೆ ಅಧೀಕ್ಷಕರಿಂದ ಮಾಹಿತಿ ಪಡೆದರು. ಕೈದಿಗಳ ಮನ ಪರಿವರ್ತನೆ, ವಿದ್ಯಾಭ್ಯಾಸ, ಯೋಗ ಹಾಗೂ ದೈನಂದಿನ ಚಟುವಟಿಕೆಗಳ ಕುರಿತು ಜೈಲು ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು. ಕೈದಿಗಳನ್ನು ಬ್ಯಾರಕ್‌ಗಳಿಂದ ಹೊರ ಬಿಡುವ ಸಂದರ್ಭ ವಿಶೇಷ ಗಮನ ಹರಿಸಬೇಕು. ಆತ್ಮಹತ್ಯೆಯ ಮನಸ್ಥಿತಿ, ಹೊಡೆದಾಟ, ಪುಂಡಾಟಿಕೆ ಮಾಡುವ ಕೈದಿಗಳನ್ನು ಪ್ರತ್ಯೇಕ ಕೊಠಡಿಗಳಲ್ಲಿಡಬೇಕು ಎಂದು ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಚಿಸಿದರು.

ಮಡಿಕೇರಿ ಜೈಲಿನಲ್ಲಿ ವಿಚಾರಣಾಧೀನ ಕೈದಿಯ ಮೇಲಿನ ಹಲ್ಲೆ ಪ್ರಕರಣ ವಿಷಾದನೀಯ. ಈ ಕುರಿತು ಈಗಾಗಲೇ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಂದ ಮಾಹಿತಿ ಪಡೆಯಲಾಗಿದೆ. ಮುಂದೆ ಇಂತಹ ಘಟನೆಗಳು ನಡೆಯದಂತೆ ತಡೆಯಲು ಸೂಚನೆಗಳನ್ನು ನೀಡಲಾಗಿದೆ. ಜೈಲುಗಳ ಸುಧಾರಣೆಗೂ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ನಡುವೆ ಇಂತಹ ಘಟನೆ ನಡೆದಿರುವುದು ಸರಿಯಲ್ಲ ಎಂದು ಎಡಿಜಿಪಿ ಅಲೋಕ್ ಕುಮಾರ್ ಹೇಳಿದರು.

ಅಧಿಕಾರಿ, ಸಿಬ್ಬಂದಿಗಳ ನಿರ್ಲಕ್ಷ್ಯ: ಕಾರಾಗೃಹದಲ್ಲಿ ಇಂತಹ ದೊಡ್ಡ ಘಟನೆಗಳು ನಡೆದ ಸಂದರ್ಭದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳ ನಿರ್ಲಕ್ಷ್ಯ ಕಂಡು ಬರುತ್ತದೆ. ಈ ಘಟನೆ ಕುರಿತು ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿಚಾರಣೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ನೀಡಲಾಗುತ್ತದೆ. ಆ ಬಳಿಕ ಇಲಾಖೆ ನಿಯಮದ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಐಜಿಪಿ ದಿವ್ಯಶ್ರೀ ತಿಳಿಸಿದರು.

ಕೇಂದ್ರ ಕಾರಾಗೃಹದಲ್ಲಿ ಗಾರ್ಡ್ ಸಿಬ್ಬಂದಿಗಳ ಹುದ್ದೆಯಲ್ಲಿ ಶೇ.45ರಷ್ಟು ಖಾಲಿ ಇದೆ. ಇನ್ನುಳಿದ ಶೇ.55ರಷ್ಟು ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಡಿಕೇರಿ ತಂಪು ಪ್ರದೇಶವಾದ ಕಾರಣ ವಿಚಾರಣಾಧೀನ ಕೈದಿಗಳಿಗೆ ಆರೋಗ್ಯ ಸಮಸ್ಯೆ ಎದುರಾಗುತ್ತವೆ. ಈ ವೇಳೆ ತುರ್ತಾಗಿ ಆಸ್ಪತ್ರೆಗೆ ದಾಖಲಿಸುವ, ಅಲ್ಲಿ ಬೆಂಗಾವಲು ಕರ್ತವ್ಯ ನಿರ್ವಹಿಸುವ ಜೊತೆಯಲ್ಲಿಯೇ ಜೈಲಿನ ಭದ್ರತೆಯ ಕರ್ತವ್ಯ ನಿರ್ವಹಿಸುವ ಸವಾಲುಗಳು ಜೈಲು ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲಿದೆ ಎಂದು ಹೇಳಿದರು.

ಜೈಲುಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿಗೆ ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರಕಾರ ನೇಮಕಾತಿ ಅಧಿಸೂಚನೆ ಹೊರಡಿಸಿದ ಬಳಿಕವೇ ನೂತನ ನೇಮಕಾತಿ ನಡೆಯಲಿದೆ ಎಂದರು.

ಲಾರಿ-ಬೈಕ್ ಡಿಕ್ಕಿ : ಸವಾರನಿಗೆ ತೀವ್ರ ಗಾಯ



ಮಡಿಕೇರಿ, ಜೂ.5-ಲಾರಿ ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಗಂಭೀರ ಗಾಯಗೊಂಡ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ದೇವರಕೊಲ್ಲಿ ಬಳಿ ಶುಕ್ರವಾರ ಸಂಜೆ ನಡೆದಿದೆ. ಮಂಗಳೂರು ಮೂಲದ ಶಿವು ಎಂಬಾತ ಗಾಯಗೊಂಡಿದ್ದು, ಸುಳ್ಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಕುಶಾಲನಗರದಲ್ಲಿ ಕಾರ್ಯಕ್ರಮ ಒಂದರ ಡೆಕೊರೇಷನ್ ಕೆಲಸಕ್ಕೆಂದು ಮಂಗಳೂರಿ ನಿಂದ ಮಡಿಕೇರಿ ಮಾರ್ಗವಾಗಿ ಆಗಮಿಸುತ್ತಿದ್ದ ಸಂದರ್ಭ ದೇವರಕೊಲ್ಲಿ ಬಳಿ ಮಂಗಳೂರು ಕಡೆಗೆ ತೆರಳುತ್ತಿದ್ದ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಕೈಗಾರಿಕಾ ತರಬೇತಿ ಸಂಸ್ಥೆಗೆ ಅರ್ಜಿ ಆಹ್ವಾನ

ಮಡಿಕೇರಿ, ಜೂ.5- ಜಿಲ್ಲೆಯ ಮಡಿಕೇರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ 2026-27ನೇ ಸಾಲಿನ ಪ್ರವೇಶದ ಸಲುವಾಗಿ ಅಧಿಸೂಚನೆಯನ್ನು ಹೊರಡಿಸಿ ಪ್ರವೇಶವನ್ನು ಮಾಡಲಾಗಿದೆ. ಎಲೆಕ್ಟ್ರೀಷಿಯನ್ 5 ಸ್ಥಾನ, ಎಲೆಕ್ಟ್ರಾನಿಕ್ ಮೆಕಾನಿಕ್ 24 ಸ್ಥಾನ, ಫಿಟ್ಟರ್ 9 ಸ್ಥಾನ, ಮೆಕಾನಿಸ್ಟ್ 20 ಸ್ಥಾನ, ಸಿಎನ್‌ಸಿ 24 ಸ್ಥಾನ, ಐಆರ್‌ಡಿಎಂ 20 ಸ್ಥಾನ, ವಿಡಿಎ 24 ಸ್ಥಾನ, ಎಂಪಿಸಿಎ 20 ಸ್ಥಾನ, ಇಡಿಟಿ 20 ಸ್ಥಾನ, ಎಂಇವಿ 24 ಸ್ಥಾನ, ಟರ್ನರ್ 20 ಸ್ಥಾನ ಒಟ್ಟು 198 ಸ್ಥಾನಗಳು ಖಾಲಿ ಉಳಿದಿದೆ. ಖಾಲಿ ಉಳಿದಿರುವ ಸ್ಥಾನಗಳನ್ನು ನೇರವಾಗಿ ಭರ್ತಿ ಮಾಡಲು ಜೂ. 2 ರಿಂದ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಮಡಿಕೇರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಮೋದಿಯವರ ಆಶಯದಂತೆ ಪ್ರತಿಯೊಬ್ಬರೂ ಗಿಡನೆಡಿ

ಬಿಜೆಪಿ ನಗರ ಮಂಡಲ ವತಿಯಿಂದ ವಿಶ್ವಪರಿಸರ ದಿನಾಚರಣೆ

ಚಾಮರಾಜನಗರ : ಪ್ರಧಾನಿ ನರೇಂದ್ರ ಮೋದಿಯವರ ಆಶಯದಂತೆ ಪ್ರತಿಯೊಬ್ಬರೂ ಒಂದೊಂದು ಗಿಡನೆಟ್ಟು ಪರಿಸರ ಉಳಿಸಿ ಬೆಳೆಸಬೇಕು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಸಲಹೆ ನೀಡಿದರು.



ಬಿಜೆಪಿ ನಗರ ಮಂಡಲ ವತಿಯಿಂದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖಂಡರು, ಕಾರ್ಯಕರ್ತರು ಗಿಡನೆಟ್ಟು ನೀರೆರೆದರು.

ನಗರದ ರಾಮಸಮುದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಬಿಜೆಪಿ ನಗರ ಮಂಡಲ ವತಿಯಿಂದ ನಡೆದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡನೆಟ್ಟು ನೀರೆರೆದು ಮಾತನಾಡಿದರು.

ದೇಶದ ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಅಧಿಕಾರ ಸ್ವೀಕರಿಸಿ ಇಂದಿಗೆ 12 ವರ್ಷಗಳು ಆಗಿದೆ. ಅವರ ಕರೆಯಂತೆ ಇಡೀ ದೇಶದಲ್ಲಿ ಪರಸರ ಬಹಳ ಸುಂದರವಾಗಿರಬೇಕು. ಸ್ವಚ್ಛ ಭಾರತ ಅಭಿಯಾನದಲ್ಲಿ ಪ್ರತಿಯೊಬ್ಬ ನಾಗರೀಕನೂ ತನ್ನ ತಾಯಿ ಹೆಸರಿನಲ್ಲಿ ಒಂದು ಗಿಡ ನೆಡುವ ಮೂಲಕ ಪರಿಸರ ಕಾಪಾಡಬೇಕು ಎಂಬ ಆದೇಶದಿಂದ ಇಡೀ ರಾಷ್ಟ್ರದಲ್ಲಿ ಬಿಜೆಪಿ ಶಾಲೆಗಳು, ಆಸ್ಪತ್ರೆಗಳು ಸ್ವಚ್ಛ ಮಾಡುವುದು, ಗಿಡ ನೆಡುವ ಮುಖಾಂತರ ವಿಶ್ವ ಪರಿಸರ ದಿನಾಚರಣೆ ಮಾಡಲಾಗುತ್ತಿದೆ ಪ್ರತಿಯೊಬ್ಬರೂ ಮನೆ ಮುಂದೆ ಗಿಡನೆಟ್ಟು ಬೆಳೆಸಿದರೆ ಉತ್ತಮ ಗಾಳಿ, ಆರೋಗ್ಯ ಸಿಗುತ್ತದೆ ಹಾಗಾಗಿ ಪರಿಸರ ಉಳಿವಿಗಾಗಿ ಪ್ರತಿಯೊಬ್ಬರೂ ಮುಂದಾಗಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಮಾತನಾಡಿ, ನರೇಂದ್ರ ಮೋದಿ ಅವರು ಮೊಟ್ಟಮೊದಲು ಪ್ರಧಾನಿ ಮಂತ್ರಿಯಾಗಿ ಪದಗ್ರಹಣ ಸ್ವೀಕರಿಸಿದ ಮೇಲೆ ಒಂದು ದೃಢ ನಿರ್ಧಾರ ತೆಗೆದುಕೊಂಡು, ಸ್ವಚ್ಛಭಾರತ ಅಭಿಯಾನದ ಮೂಲಕ ಪರಿಸರ ಉಳಿಸಬೇಕು. ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸುರೇಶ್, ನಗರಮಂಡಲ ಅಧ್ಯಕ್ಷ ಶಿವರಾಜು ಓಬಿಸಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಬಾಲಸುಬ್ರಹ್ಮಣ್ಯಂ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ, ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ಅರಕಲವಾಡಿ ನಾಗೇಂದ್ರ, ಮುಖಂಡ ಅರಕಲವಾಡಿ ನಾಗೇಂದ್ರ ಸಾಹಿತಿ ಮಂಜುನಾಥ ಪ್ರಸನ್ನ, ನಗರ ಮಂಡಲ, ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಭಾಸ್ಕರ್, ಎಸ್‌ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್, ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಚಂದ್ರು, ಯುವ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ, ನಗರಸಭಾ ಸದಸ್ಯರಾದ ಶೇಖರ್, ಮಂಜುನಾಥ್, ಶಿವಣ್ಣ ಎಸ್‌ಸಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವು, ಮುಖಂಡರಾದ ಚಂದ್ರಶೇಖರ್, ಬಂಗಾರನಾಯಕ, ಪರಶಿವಯ್ಯ, ಮಣಿ, ಕಾರ್ಯಾಲಯ ಕಾರ್ಯದರ್ಶಿ ರಂಗಸ್ವಾಮಿ, ಮಂಜುನಾಥ್, ವೀರೇಂದ್ರ, ಶಾಲೆಯ ಮುಖ್ಯ ಶಿಕ್ಷಕ ಎಂ.ನಂಜುಂಡಸ್ವಾಮಿ, ಶಿಕ್ಷಕಿ ದೇವಿಕಾ ಭಾಗವಹಿಸಿದ್ದರು

ಗಿಡ-ಮರಗಳನ್ನು ಬೆಳೆಸಿ, ಉಳಿಸುವ ಕೆಲಸವೇ ಮುಂದಿನ ಪೀಳಿಗೆಗೆ ಕೊಡುವ ದೊಡ್ಡ ಕೊಡುಗೆ

ಚಾಮರಾಜನಗರ, ಜೂ.5- ಜನಸಂಖ್ಯೆ ಹೆಚ್ಚಳಕ್ಕೆ ತಕ್ಕಂತೆ ಗಿಡಮರಗಳನ್ನು ಬೆಳೆಸಿ, ಉಳಿಸುವ ಕೆಲಸವಾಗಬೇಕು, ಇದೇ ನಮ್ಮ ಮುಂದಿನ ಪೀಳಿಗೆಗೆ ಕೊಡುವ ದೊಡ್ಡ ಕೊಡುಗೆ ಎಂದು ರಾಷ್ಟ್ರೀಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ರೈತರತ್ನ ಕುರುಬೂರು ಶಾಂತಕುಮಾರ್ ಹೇಳಿದರು.



ಗಿಡಕ್ಕೆ ನೀರು ಹಾಕುವುದರ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ನಗರದ ಎಪಿಎಂಸಿ ಸಭಾಂಗಣದಲ್ಲಿ ರಾಷ್ಟ್ರೀಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ಚಾಮರಾಜನಗರ ಜಿಲ್ಲಾ ಘಟಕದ ವತಿಯಿಂದ ನಗರದ ಎಪಿಎಂಸಿ ಸಭಾಂಗಣದಲ್ಲಿ ಆಯೋಜಿಸಿದ್ದ 'ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಈಚಿನ ವರ್ಷಗಳಲ್ಲಿ ಬೆಳೆ ಬೆಳೆಯಲು ರೈತರು ರಾಸಾಯನಿಕ ಗೊಬ್ಬರ, ಕೀಟನಾಶಕ ಬಳಕೆ ಹೆಚ್ಚುತ್ತಿದ್ದು, ದೇಶದಲ್ಲೇ ಪಂಜಾಬ್ ಒಂದನೇ ಸ್ಥಾನದಲ್ಲಿದ್ದರೆ, ತೆಲಂಗಾಣ ಎರಡನೇ ಸ್ಥಾನದಲ್ಲಿದೆ. ಪರಿಣಾಮ ಎರಡು ರಾಜ್ಯಗಳ ಜನರು ವಿಷಾಹಾರ ಸೇವಿಸಿ ಅನಾರೋಗ್ಯಪೀಡಿತರಾಗುತ್ತಿದ್ದಾರೆ ಎಂದರು.

ಕರ್ನಾಟಕದಲ್ಲಿ 47 ಸಾವಿರ ಕೆರೆಗಳಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ 680 ಕೆರೆಗಳಿವೆ. ಕೆರೆಗಳಲ್ಲಿರುವ ಮಣ್ಣನ್ನು ತಮ್ಮ ತಮ್ಮ ಜಮೀನುಗಳಿಗೆ ಬಳಕೆ ಮಾಡಿ, ಕೊಟ್ಟಿಗೆ ಗೊಬ್ಬರ ಸೇರಿಸಿದರೆ ಭೂಮಿಯು ಫಲವತ್ತತೆ ಕಾಣುತ್ತದೆ, ಇದರಿಂದ ಮಣ್ಣಿನ ಆರೋಗ್ಯ ಸುಧಾರಿಸುತ್ತದೆ ಎಂದರು. 80ರ ದಶಕದಲ್ಲಿ 40 ಲಕ್ಷ ಟನ್ ಆಹಾರ ಉತ್ಪಾದನೆ ಮಾಡಲಾಗುತ್ತಿತ್ತು, ಪ್ರಸ್ತುತ ವಾರ್ಷಿಕ 365 ಲಕ್ಷ ಟನ್‌ನಷ್ಟು ಆಹಾರ ಉತ್ಪಾದನೆಯಾಗುತ್ತಿದೆ. ಆದರೆ ಆಹಾರ ಬೆಳೆದು ದೇಶದ ಜನರ ಹಸಿವನ್ನು ಹೋಗಲಾಡಿಸುವ ರೈತರ ಬದುಕು ಹಸನಾಗದಿರುವುದು ಬೇಸರದ ಸಂಗತಿ, ಪರಿಸರದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಅರಣ್ಯ ಇಲಾಖೆಯಿಂದ ಆಗಬೇಕು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಪರಿಸರ ನಾಶದಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು ಪಡೆದು, ಮನೆ, ಜಮೀನಿನಲ್ಲಿ ಗಿಡ ನೆಟ್ಟು ಪೋಷಣೆ ಮಾಡಬೇಕು ಎಂದರು.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ಮಾತನಾಡಿ, 4 ವರ್ಷದ ಹಿಂದೆ ದೇಶಾದ್ಯಂತ ಕಾಣಿಸಿಕೊಂಡಿದ್ದ ಕರೋನಾ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆಯಿಂದ 30ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ದೇಶಾದ್ಯಂತ ಸುದ್ದಿಯಾಗಿತ್ತು. ಇದು ಆತಂಕಕಾರಿ ವಿಷಯ ಎಂದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಮಾತನಾಡಿ, ನಗರೀಕರಣದ ಹೆಸರಿನಲ್ಲಿ ಪರಿಸರದ ನಾಶ ಎಗ್ಗಿಲ್ಲದೇ ನಡೆಯುತ್ತಿದೆ. ಅರಣ್ಯ ನಾಶ ಮಾಡಿದರೆ, ಇಡೀ ಮನುಕುಲವೇ ನಾಶವಾಗಲಿದೆ. ಗಡಿಜಿಲ್ಲೆ ಚಾಮರಾಜನಗರ ಶೇ52ರಷ್ಟು ಅರಣ್ಯಪ್ರದೇಶ ಹೊಂದಿದ್ದು, ಶುದ್ಧಗಾಳಿ ಸಿಗುವ ದೇಶದ ಪ್ರಮುಖ ನಗರ, ಪಟ್ಟಣಗಳ ಪಟ್ಟಿಯಲ್ಲಿ ಚಾಮರಾಜನಗರ 4ನೇ ಸ್ಥಾನದಲ್ಲಿದೆ ಎಂದು ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಘೋಷಣೆ ಮಾಡಿದೆ. ಮಾನವಕುಲ ಉಳಿಯಬೇಕಾದರೆ ಮರಗಿಡಗಳನ್ನು ನೆಟ್ಟು ಪೋಷಿಸುವ ಕಾರ್ಯ ನಿರಂತರವಾಗಿ ನಡೆಯಬೇಕು ಎಂದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಗರದ ಬಾಲಕಿಯರ ಸರ್ಕಾರಿ ಪ್ರೌಢಶಾಲಾ ಆವರಣ ಹಾಗೂ ಎಪಿಎಂಸಿ ಆವರಣದಲ್ಲಿ ಗಿಡನೆಟ್ಟು ನೀರೆಯಲಾಯಿತು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಉಪ ನಿರ್ದೇಶಕ ಬಸವಣ್ಣ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾಧ್ಯಕ್ಷ ಸೋಮಶೇಖರ್, ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಜಿಲ್ಲಾ ಉಪಾಧ್ಯಕ್ಷ ಮೂಡಲಪುರ ಶಿವಮೂರ್ತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್. ಮೂಕಳ್ಳಿ ಮಹದೇವಸ್ವಾಮಿ ತಾಲೂಕು ಅಧ್ಯಕ್ಷ ನಂಜೆ ದೇವನಪುರ ಸತೀಶ್, ತಾಲೂಕು ಉಪಾಧ್ಯಕ್ಷ ಎಚ್.ಮೂಕಳ್ಳಿ ಶಿವಕುಮಾರಸ್ವಾಮಿ ಹಾಗೂ ಹೆಗ್ಗೋಠಾರ ಶಿವಸ್ವಾಮಿ, ಉಡಿಗಾಲ ಸುಂದ್ರಪ್ಪ ಯಳಂದೂರು ತಾಲೂಕು ಅಧ್ಯಕ್ಷ ಗೌಡಳ್ಳಿ ಷಡಕ್ಷರಿ ಸ್ವಾಮಿ, ವೀರನಪುರ ನವೀನ್, ಮೈಸೂರು, ನಂಜನಗೂಡು, ಟಿ.ನರಸೀಪುರ ತಾಲೂಕು ಸಂಘದ ಮುಖಂಡರು ಚಾಮರಾಜನಗರ ಬಾಲಕಿಯರ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕಿ ನಾಗರತ್ನಮ್ಮ, ವಿದ್ಯಾರ್ಥಿಗಳು ಹಾಜರಿದ್ದರು.

ಮಹಿಳೆಯನ್ನು ಯಾಮಾರಿಸಿ ಚಿನ್ನಾಭರಣ ದೋಚಿದ ಕಳ್ಳರು

ಇಷ್ಟೊಂದು ಒಡವೆ ಹಾಕಿಕೊಳ್ಳಬಾರದು, ಬಿಚ್ಚಿಕೊಡಿ ಕವರಿಗೆ ಹಾಕಿಕೊಡುತ್ತೇವೆ ಎಂದು ಹೇಳಿ ಖದೀಮರಿಂದ ವಂಚನೆ

ಬೇಗೂರು(ಗುಂಡ್ಲುಪೇಟೆ): ಗೃಹಿಣಿಯೊಬ್ಬರನ್ನು ಯಾಮಾರಿಸಿ ಚಿನ್ನಾಭರಣ ದೋಚಿರುವ ಘಟನೆಯೊಂದು ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ನಿವಾಸಿ ಹೇಮಾವತಿ ಎಂಬುವರೇ ಆಭರಣ ಕಳೆದುಕೊಂಡ ಮಹಿಳೆ.

ಹೇಮಾವತಿ ಅವರು ಎಂದಿನಂತೆ ಬುಧವಾರ ಬೆಳಗ್ಗೆ ತಮ್ಮ ಮನೆಯಿಂದ ಸಮೀಪದಲ್ಲಿಯೇ ಇದ್ದ ತರಕಾರಿ ಅಂಗಡಿಗೆ ಹೋಗಿದ್ದರು. ತರಕಾರಿ ಖರೀದಿಸಿ ಹಿಂತಿರುಗುವಾಗ ಅವರ ಕುತ್ತಿಗೆಯಲ್ಲಿದ್ದ 11 ಲಕ್ಷ ರೂ. ಮೌಲ್ಯದ ಮಾಂಗಲ್ಯ ಸರದ ಮೇಲೆ ಕಳ್ಳರ ಕಣ್ಣು ಬಿದ್ದಿದೆ.

ಸರವನ್ನು ನೋಡಿದ ಕಳ್ಳರು ಬೈಕ್‌ನಲ್ಲಿ ಮಾಸ್ಕ್ ಧರಿಸಿ ಬಂದಿದ್ದಾರೆ. ಮಹಿಳೆಯನ್ನು ಅಮ್ಮ ಇಲ್ಲಿ ಬನ್ನಿ. ಅಲ್ಲಿ ನಮ್ಮ ಆಫೀಸರ್ ಕರೆಯುತ್ತಿದ್ದಾರೆ ಎಂದು ಮಹಿಳೆಯನ್ನು ಸಮೀಪಕ್ಕೆ ಕರೆಸಿದ್ದಾರೆ. ಮಹಿಳೆ ಸಮೀಪಕ್ಕೆ ಬಂದಾಗ ಏನಮ್ಮ ಇಷ್ಟೊಂದು ಚಿನ್ನ ಹಾಕಿಕೊಳ್ಳಬಾರದು. ಕಳ್ಳರು ನೋಡಿದರೆ ನಿಮ್ಮ ಜೀವಕ್ಕೆ ಕುತ್ತು ತಂದು ಸರವನ್ನು ದೋಚಿಕೊಂಡು ಹೋಗುತ್ತಾರೆ ಎಂದು ಹೆದರಿಸಿದ್ದಾರೆ. ನೀವು ಸರವನ್ನು ಬಿಚ್ಚಿ ಕೊಡಿ, ನಾವು ಕವರ್‌ಗೆ ಹಾಕಿ ಕೊಡುತ್ತೇವೆ ಎಂದು ಮಹಿಳೆಯನ್ನು ನಂಬಿಸಿದ್ದಾರೆ.

ಇದನ್ನು ನಂಬಿದ ಗೃಹಿಣಿ ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರ ಸಮೇತ ಸುಮಾರು 70 ಗ್ರಾಂ ಚಿನ್ನಾಭರಣವನ್ನು ಬಿಚ್ಚಿಕೊಟ್ಟಿದ್ದಾರೆ. ಕಳ್ಳರು ಕಣ್ಣು ಮಿಟುಕುವಷ್ಟರಲ್ಲಿ ಕಳ್ಳರು ಬೇರೆ ಕವರನ್ನು ಮಹಿಳೆಯ ಕೈಗಿತ್ತು ಪರಾರಿಯಾಗಿದ್ದಾರೆ. ಸ್ಥಳದಲ್ಲಿಯೇ ಕವರ್ ಬಿಚ್ಚಿ ನೋಡದೆ ಗೃಹಿಣಿ ಹಾಗೆಯೇ ಮನೆಗೆ ಬಂದಿದ್ದಾರೆ. ಮನೆಯ ಗೇಟ್ ಬಳಿ ಕವರ್ ತೆಗೆದು ನೋಡಿದಾಗ ಮೋಸಹೋಗಿರುವುದು ತಿಳಿದಿದೆ.

ಈ ಸಂಬಂಧ ಮಹಿಳೆಯು ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು. ಪೊಲೀಸರು ಕಳ್ಳರಿಗೆ ಬಲೆ ಬೀಸಿದ್ದಾರೆ.

ದೇಶಿಪುರ ಸರ್ಕಾರಿ ಶಾಲೆಗೆ ಜಿಲ್ಲಾಧಿಕಾರಿ ಶ್ರೀರೂಪ ಭೇಟಿ

ಚಾಮರಾಜನಗರ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗುಂಡ್ಲುಪೇಟೆ ತಾಲೂಕಿನ ಕಾಡಂಚಿನ ಗ್ರಾಮವಾದ ದೇಶಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಗುರುವಾರ ಭೇಟಿ ನೀಡಿ, ಶಾಲೆಯಲ್ಲಿ ಆಯೋಜಿಸಲಾಗಿದ್ದ ವಿಶೇಷ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಮಕ್ಕಳೊಂದಿಗೆ ಜಿಲ್ಲಾಧಿಕಾರಿಯವರು ವಿವಿಧ ಜಾತಿಯ ಮರಗಳ ಬೀಜಗಳನ್ನು ಬಳಸಿ ಮಣ್ಣಿನ ಬೀಜದ ಉಂಡೆಗಳನ್ನು ತಯಾರಿಸಿದರು. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಬಗ್ಗೆ ಶಾಲಾ ಶಿಕ್ಷಕರಿಂದ ಮಾಹಿತಿ ಪಡೆದು ಪರಿಸರಕ್ಕೆ ಪೂರಕವಾದ ವಿನೂತನ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಶ್ರೀಗಂಧದ ಸಸಿ ನೆಟ್ಟು, ಪ್ರತಿಯೊಂದು ಗಿಡದ ಜವಾಬ್ದಾರಿಯನ್ನು ವಿದ್ಯಾರ್ಥಿಗಳಿಗೆ ವಹಿಸಿರುವ ಶಾಲೆಯ ಉತ್ತಮ ಕಾರ್ಯ ನಡೆಯನ್ನು ಶ್ಲಾಘಿಸಿದ ಜಿಲ್ಲಾಧಿಕಾರಿಯವರು 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನಕ್ಕೆ ಚಾಲನೆ ನೀಡಿ, ತಾಯಿ-ಮಕ್ಕಳಿಗೆ ಶ್ರೀಗಂಧದ ಸಸಿಗಳನ್ನು ವಿತರಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ, ಶಿಕ್ಷಕ ವೃಂದ, ಇದ್ದರು.

ತಡೆಗೋಡೆಗೆ ಡಿಕ್ಕಿ ಹೊಡೆದು ಗದ್ದೆಗೆ ಬಿದ್ದ ಆಟೋ

ಮಾದಪ್ಪನ ದರ್ಶನಕ್ಕೆ ಆಟೋದಲ್ಲಿ ತೆರಳುತ್ತಿದ್ದ ಇಬ್ಬರು ಸಾವು

ಕೊಳ್ಳೇಗಾಲ,ಜೂ.5-ತಡೆಗೋಡೆಗೆ ಆಟೋವೊಂದು ಡಿಕ್ಕಿ ಹೊಡೆದು ಭತ್ತದ ಗದ್ದೆಗೆ ಬಿದ್ದ ಪರಿಣಾಮ ಮಾದಪ್ಪನ ದರ್ಶನಕ್ಕೆ ತೆರಳುತ್ತಿದ್ದ ಇಬ್ಬರು ಸಾವನ್ನಪ್ಪಿ ಮತ್ತೋರ್ವ ಗಾಯಗೊಂಡಿರುವ ಘಟನೆ ತಾಲೂಕಿನ ಮಧುವನಹಳ್ಳಿ-ನರಿಪುರ ಬೈಪಾಸ್ ರಸ್ತೆಯಲ್ಲಿ ಶುಕ್ರವಾರ ಬೆಳಗ್ಗೆ ಸಂಭವಿಸಿದೆ.

ಬೆಂಗಳೂರಿನ ನಿವಾಸಿಗಳಾದ ಕೀರ್ತಿರಾಜ್, ಮನೋಜ್ ಮೃತ ದುರ್ದೈವಿ ಯುವಕರು. ಇವರ ಜೊತೆಯಲ್ಲಿದ್ದ ಮತ್ತೋರ್ವ ಯುವಕ ಬೆಂಗಳೂರಿನಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಮೂಲತಃ ಗುಲ್ಬರ್ಗಾದ ಲಕ್ಷ್ಮಣ ಅಲಿಯಾಸ್ ಲಕ್ಷ್ಮೀಕಾಂತ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೂವರು ಬೆಂಗಳೂರಿನಿಂದ ರಾತ್ರಿ ಹೊರಟು ಬೆಳಗಿನ ಜಾವ ಮಹದೇಶ್ವರಬೆಟ್ಟಕ್ಕೆ ತೆರಳಲು ಆಗಮಿಸಿದ್ದ ವೇಳೆ ಮಧುವನಹಳ್ಳಿ-ನರೀಪುರ ಬೈಪಾಸ್ ರಸ್ತೆಯಲ್ಲಿ ಆಟೋ ನಿಯಂತ್ರಣ ತಪ್ಪಿ ತಡೆಗೋಡೆಗೆ ಡಿಕ್ಕಿ ಹೊಡೆದು ಭತ್ತದ ಗದ್ದೆಗೆ ಬಿದ್ದಿದೆ. ಇದರಿಂದ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ್ದು, ಇನ್ನೋರ್ವ ಗಾಯಗೊಂಡಿದ್ದು ಕೊಳ್ಳೇಗಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಚಾ. ನಗರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.



ಸ್ಥಳಕ್ಕೆ ಎಎಸ್ಪಿ ಶಶಿಧರ್, ಡಿವೈಎಸ್ಪಿ ಮೋಹನ್, ಸಿಪಿಐ ರವೀಂದ್ರ, ಪಿಎಸ್‌ಐ ಚಲುವರಾಜು ಸೇರಿದಂತೆ ಇನ್ನಿತರರು ಭೇಟಿ ನೀಡಿ ಪರಿಶೀಲಿಸಿದರು.

ಇಂದು ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಹುಟ್ಟುಹಬ್ಬ

ಚಾಮರಾಜನಗರ: ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಕಲಾ ವೇದಿಕೆ, ಸಾಂಸ್ಕೃತಿಕ ಕಲಾ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಗರದ ಡಾ. ರಾಜ್‌ಕುಮಾರ್ ಆವರಣದಲ್ಲಿ ಶನಿವಾರ ಮಧ್ಯಾಹ್ನ 2 ಗಂಟೆಗೆ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಹುಟ್ಟುಹಬ್ಬ ಆಚರಿಸಲಾಗುವುದು ಎಂದು ಎಸ್‌ಪಿಬಿ ಸಂಘದ ಜಿಲ್ಲಾಧ್ಯಕ್ಷ ಶಿವಣ್ಣ ಮಂಗಲ ತಿಳಿಸಿದರು.



ನಾಗಲಿಂಗೇಶ್

ಈ ವೇಳೆ ಸಂಗೀತ ಕ್ಷೇತ್ರದಲ್ಲಿ ಯುವ ವಯಸ್ಸಿನಲ್ಲೇ ಗಣನೀಯ ಸಾಧನೆ ಮಾಡಿರುವ ಕೀ-ಬೋರ್ಡ್ ಕಲಾವಿದ ನಾಗಲಿಂಗೇಶ್ ಆಚಾರ್ ಅವರಿಗೆ ಡಾ.ಎಸ್.ಪಿ.ಬಿ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ 'ಗಡಿನಾಡ ಸಂಗೀತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಜೊತೆಗೆ ಯಳಂದೂರಿನ ಅಶ್ವಿನಿ ಆಸ್ಪತ್ರೆಯ ಡಾ.ರಮೇಶ್ ಉಡುಪ ಮತ್ತು ಶಶಿಕಲಾ ರಮೇಶ್ ಅವರಿಗೆ 'ವೈದ್ಯರತ್ನ' ಪ್ರಶಸ್ತಿ ನೀಡಲಾಗುವುದು ಎಂದು ಹೇಳಿದರು.

ಕೀ-ಬೋರ್ಡ್ ಕಲಾವಿದ ನಾಗಲಿಂಗೇಶ್ ಆಚಾರ್, ಖ್ಯಾತ ಕೀಬೋರ್ಡ್ ವಾದಕ ಷಣ್ಮುಖ ಸಜ್ಜಾ ಅವರಿಂದ ತರಬೇತಿ ಪಡೆದು, ಕನ್ನಡ ಚಲನಚಿತ್ರ ರಂಗದ ಖ್ಯಾತನಾಮರೊಂದಿಗೆ ಕೆಲಸ ಮಾಡಿದ್ದಾರೆ. 'ಶೃತಿ ಮಾಂತ್ರಿಕ', 'ಸಂಗೀತ ಯೋಗಿ' ಸೇರಿದಂತೆ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಬಹಳ ಚಿಕ್ಕ ವಯಸ್ಸಿನಲ್ಲಿಯೇ ಕೀಬೋರ್ಡ್ ಸಂಗೀತದಲ್ಲಿ ಮಾಡಿರುವ ವಿಶೇಷ ಸಾಧನೆ ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಚೂಡ ಅಧ್ಯಕ್ಷ ಮಹಮ್ಮದ್ ಅಜ್ಗರ್, ಜಿಲ್ಲಾಧಿಕಾರಿ ಶ್ರೀರೂಪ, ಅಪರ ಜಿಲ್ಲಾಧಿಕಾರಿ ಟಿ.ಜವರೇಗೌಡ, ಎಸ್‌ಪಿ ಸ್ನೇಹರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ಎಸ್.ರಾಜು, ಉದ್ಯಮ ಶ್ರೀನಿಧಿ ಕುಮಾರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits : Fixed Salary + PF+ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್‌ಕಾರ್ಡ್, ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ಸ್ಥಳ : Shree Guru Residency, Metropole Circle, Mysore, Time 11 Am and Date 09-06-2026 (Followed by Lunch)
9448376423 9886883858

ಮನೆ ಬಾಡಿಗೆಗೆ ಇದೆ
2 BHK N/F, Pooja Room, Varanda, attached room, open Kitchen at 1st floor, Just near to Mysore Palace, only for Vegetarians, behind main MCC office building.
Call : 9448247580
(Brokers Excuse)

MUDA SITE FOR SALE
RT NAGAR, MYSURU
₹5400/- PER SFT.
9902333166

HOUSE FOR SALE
15x30
3 Floors, Muda Allotted Hebbal 1st stage Park Facing, Contact:
7795268902

FOR RENT
2 BHK with car parking ground floor, 2 BHK 1st Floor, 1 office room available for rent. Contact:
9972355066, 9916215206
Close to passport office, post office and Jayadeva Hospital. Area: Mathura Nagar (KRS Road)

ತಕ್ಷಣ ಬೇಕಾಗಿದ್ದಾರೆ
ಹಾಸ್ಟಲ್ ವಾರ್ಡನ್ ಹುದ್ದೆಗಾಗಿ ಅನುಭವಿ ಉಪನ್ಯಾಸಕರು ಮತ್ತು ಸಂಸ್ಕೃತ ಉಪನ್ಯಾಸಕರು ಹಾಗೂ PUC ವಿದ್ಯಾಭ್ಯಾಸವುಳ್ಳ ಪುರುಷ ಆಫೀಸ್ ಅಟೆಂಡರ್ ತಕ್ಷಣ ಬೇಕಾಗಿದ್ದಾರೆ
7406235556

ರೆಸ್ಟೋರೆಂಟ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ
* ಆಲ್ ರೌಂಡರ್ ಕುಕ್ ನಾನ್ ವೆಜ್ (1)
* ತಂದೂರಿ ಕುಕ್ (1)
* ಕ್ಯಾಪ್ಟನ್ (1)
ಸ್ಥಳ :– ವಿಜಯನಗರ 4ನೇ ಹಂತದಲ್ಲಿ ಕೆಲಸಮಾಡಲು ಆಸಕ್ತಿ ಇರುವವರಿಗೆ ಮೊದಲ ಆದ್ಯತೆ
Ph :9353263974

TEACHERS VACANCY
Our growing Academy located near Sidharth Nagar, Mysuru, requires two part-time teachers to teach classes 1 to 6 (All subjects).
Calligraphy experts preferred.
Office maid also Required
WhatsApp your resume to
8105025999

ನೇರ ಸಂದರ್ಶನ
1. ಭದ್ರತಾ ಸಿಬ್ಬಂದಿ – 10 ಜನ 25 ರಿಂದ 35 ವರ್ಷ ವಾರದ ಸಂಬಳವಿರುತ್ತದೆ. 500/– ರುಪಾಯಿಗಳು ಪ್ರತಿ ದಿನಕ್ಕೆ. ರಾತ್ರಿ ಪಾಳಿ ಮಾತ್ರ, ಸಂಪರ್ಕಿಸಿ
94481 50408
99007 49104

ಸೈಟು ಮಾರಾಟಕ್ಕಿವೆ
DTCP ಅಪ್ರೂವ್ಡ್, 30x50 corner, 30x50 south facing, 30x40 east facing, 22x30
5 site sales T Narasipura Main Road Near,
8971936090

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಮತ್ತು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ. ವಿಜಯನಗರ, ಬೋಗಾದಿ, ಮೇಟಗಳ್ಳಿ, ಕೆ.ಡಿ. ರೋಡ್ ಹಾಗೂ ಮೈಸೂರು ಸುತ್ತಮುತ್ತ.
9538886328
7795104543

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
6362150462, 7795749881

OLD HOUSE FOR SALE
25 x 30, East Face at Bogadi 2nd Stage.
Price: Rs. 70 Lakh
Contact:
9342184586

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಫಾರಂ ಸ್ಟೇಗೆ ಬೇಕಾಗಿದ್ದಾರೆ
ಮ್ಯಾನೇಜರ್ ಮತ್ತು ರೂಂ ಬಾಯ್ಸ್ ಇಲವಾಲ ಹತ್ತಿರ ಇರುವ ಡಾಮೆಂಟ್ರಿ ಹಾಗೂ ರೂಂಗಳುಳ್ಳ ಫಾರಂಸ್ಟೇ ಅನ್ನು ಸ್ವಂತ ನಡೆಸಿಕೊಂಡು ಹೋಗಲು ಅನುಭವ ಉಳ್ಳವರು, ಸಂಪರ್ಕಿಸಿ:
9113529833

ಸೈಟ್ ಮಾರಾಟಕ್ಕಿದೆ
15x40 ಸೈಟ್
(ಚದರ 2200/– ರೂಪಾಯಿಗಳು)
ಆಚಾರ್ಯ ವಿದ್ಯಾಕುಲ ಹತ್ತಿರ, ತ್ರಿಮೂರ್ತಿ ನಗರ
9448150408

ಸಂಕಲ್ಪ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು.
ತಿರುಪತಿ, ತಿರುಮಲ, ಕಾಳಹಸ್ತಿ ಪ್ಯಾಕೇಜ್ 12th June ಹೊರಡುವುದು. ಎರಡು ದಿನದ ಪ್ರವಾಸ
ಕೆ.ಡಿ.ಸರ್ಕಲ್, ವಿಜಯನಗರ, 2ನೇ ಹಂತ
ಸಂಪರ್ಕಿಸಿ : 8197998916/ 9036960777/9844403259

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್ (ಆಸ್ತಿಪತ್ರ ಬರಹಗಾರರ ಆಫೀಸ್‌ನಲ್ಲಿ ಕೆಲಸ ಮಾಡಿ ಅನುಭವವುಳ್ಳವರು) ಮೈಸೂರು
96860 71750
89719 36090

ಜಮೀನು ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ತಾಲ್ಲೂಕು, ಕೊಲ್ಲೇಗೌಡನಹಳ್ಳಿ ಸರ್ಕಲ್ ಹತ್ತಿರ ಮೈಸೂರು – ಮಾನಂದವಾಡಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ 1 ಎಕರೆ ಕೃಷಿ ಭೂಮಿ ಮಾರಾಟಕ್ಕಿದೆ ದಲ್ಲಾಳಿಗಳಿಗೆ ಅವಕಾಶವಿಲ್ಲ ಆಸಕ್ತರು ನೇರವಾಗಿ ಸಂಪರ್ಕಿಸಿ
9980907989
9449885857

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಅನುಭವಯುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ವಯೋಮಿತಿ : 50 ವರ್ಷದ ಒಳಗೆ
ಸಂಬಳ : 27,000/- (26 ದಿನಗಳು)
ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ಕಳೆದಿದೆ
ಉಷಾ ಚನರಾಯಪಟ್ಟಣ, # 55, 4ನೇ ಮೈನ್, 8ನೇ ಕ್ರಾಸ್, ಜಯನಗರ, ಮೈಸೂರು, ನಮ್ಮ ಮನೆಯ ಸೇಲ್‌ಡೀಡ್, ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಹಾಗೂ ಇನ್ನಿತರೆ ದಾಖಲೆಗಳು ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ :
9880487945/ 8660239549

ಕಳೆದಿದೆ
ಮನೆ ನಂ.209, ಕಾಮಾಕ್ಷಿ ಆಸ್ಪತ್ರೆ ರಸ್ತೆ, 12ನೇ ಮೇನ್, 9ನೇ ಕ್ರಾಸ್, ಸರಸ್ವತಿಪುರಂ, ಮೈಸೂರು ರ ಮೂಲ ಕ್ರಯಪತ್ರ ಸಂಖ್ಯೆ MDA-1-01320-2018-19, CD No.MDAD 61, 12.07.2018 ಕಳೆದಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ: ಎಂ.ಎ.ಶಂಕರ, ಮೊ.ನಂ.6360121583,
email: shankarama209@gmail.com

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

MUDA SITE FOR SALE
30/40
Preethi layout Near Vivekananda nagara Bhramaramba Choultry
30/50 Site
near RT nagara Dattagalli
9900464111

CHANGE OF NAME
I, Asha T.N., W/o N. Vasanth Kumar & D/o Nagaraju, aged about 30 years, residing at # 886/13, 3rd Cross, Bestar Block, Suwege Form Road, Vidyaranyapuram, Mysuru. Declaring that the name of the Plaintiff as Niveditha T.N., instead of Asha T.N.

CHANGE OF NAME
I, Raja Bai, W/o. Prasanna Kumar & D/o. Late G. Mahadev Rao Bhonsley residing at No. 3619/M7, 2nd Cross, Umarkhayam Road, Thilaknagar, Mysore-570021, in my passport No. P5306408, my name is mentioned as Raja Bai Mahadev Rao. Hence I have changed my name from RAJA BAI MAHADEV RAO to RAJA BAI in front of Notary Syed Ameer vide affidavit dated 13/5/2026.

ಮಾರಾಟಕ್ಕಿದೆ
ಕಾಫಿ ಬೀಜ ರೋಸ್ಟರ್ ಹಾಗೂ ಕಾಫಿ ಪೌಡರ್ ಮಿಲ್ ಸಹಿತ ಅಂಗಡಿ ಮಾರಾಟಕ್ಕಿದೆ.
ಗೌರಿ ಶಂಕರ್ ಕಾಂಪ್ಲೆಕ್ಸ್, ಜೆ.ಪಿ.ನಗರ, ಮೈಸೂರು.
7353930410

WANTED
A reputed lodge in the heart of the city is looking for a receptionist role. those having previous experience & having computer & hotel industry knowledge Prefered.
9663427888
9663747452

CHANGE OF NAME
I, Muruga Nanjappa P. S/o Nanjappa, Residing at 110/A, 10th Main E Block, J.P. Nagar, VTC: Mysore P.O., Mysore South District : Mysore State, Karnataka-570008, have changed my name and shall here after be known as James N In my old Passport my name is Mentioned as Muruga Nanjappa P and My date of birth is recorded as 27-01-1979 However my correct date of birth is 27-01-1981
Sd/- Muruga Nanjappa P

WANTED
Required 40x60 Site(01) old House in and around Hootagalli, KHB Colony, Contact only owners
9148158314
Brokers Excuse

ಸೈಟು ಮಾರಾಟಕ್ಕಿದೆ
30x36 E/P BCM Layout ಕ್ಲಿಯರ್ ಡಾಕ್ಯುಮೆಂಟ್ at ದೊಡ್ಡಹುಂಡಿ 18 Lakhs
9342124023

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

COMMERCIAL SPACE FOR RENT
1200 Square feet Commercial Space attached to Ring road opposite to APMC for Rent
9148158314
9886386698

ROOM FOR RENT
I Block Ramakrishna Nagar
9740069393

For Sale ರಿಂಗ್ ರಸ್ತೆ ಸಮೀಪ
ವಿಜಯನಗರ MUDA- 1.2 Cr
ದಟ್ಟಗಳ್ಳಿ–ಬೋಗಾದಿ ಸಿಗ್ನಲ್ 1-10 cr
ಜೆ.ಪಿ.ನಗರ 50x80 -2.5cr, 40x60- 1.12cr
ವಿಜಯನಗರ 3ನೇ ಸ್ಟೇಜ್ 40x60-2.6 cr
ಪೊಲೀಸ್ ಲೇಔಟ್ ಪಕ್ಕ 30x50 75 ಲಕ್ಷ
10/15/20 ಗುಂಟೆ ಫಾರ್ಮ್ ಲ್ಯಾಂಡ್ ಸಿಟಿಗೆ 12 ರಿಂದ 15 KMನಲ್ಲಿ ಲಭ್ಯ 6-8/ಲಕ್ಷ ಗುಂಟೆ,
Call 81230 75038
Broker Excuse

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಟಿ.ಎನ್. ಪುರ ಹೈವೆ ಚಿಕ್ಕಳ್ಳಿ ಹತ್ತಿರ, 22.3 ಲಕ್ಷ
ವಸಂತನಗರ ಪೊಲೀಸ್ ಲೇಔಟ್ ಪಕ್ಕ 32 ಲಕ್ಷ
ಮಾನಸಿನಗರ ಪಕ್ಕ ವಿದ್ಯಾವಿಕಾಸ 34 ಲಕ್ಷ
ಬೋಗಾದಿ ಟ್ರೆಂಡ್ ಫ್ಲಾಟ್ ಹತ್ತಿರ 30 ಲಕ್ಷ
ವಿಜಯನಗರ 4ನೇ ಸ್ಟೇಜ್ ಪಕ್ಕ 64 ಲಕ್ಷ
ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ.
Mob: 8123075038
Brokers Excuse. 0% commission.

SITE FOR SALE
KBL Silicon City
30x50 North Facing
30x40 South Facing
9986709614
Brokers Excuse

JNANAJYOTHI VIDYALAYA
BEERIHUNDI. BHOGADI ROAD.
WANTED TEACHERS
for Hindi-1, EVS-1 For primary.
Contact immediately
9845390377
8197057626

SITE FOR SALE
A KHATA, SITE NO-163 & 164 (30X40) NORTH FACE, PREETHI LAYOUT, CHIKHUNSURU, MYSURU.
DIRECT OWNER
78999-15191

JOB OPPORTUNITY PROGRAMME SEMINAR
Shree Guru Residency, Near Metropole Hotel & Railway Station Road, Seminar date: 09-6-2026 at 11 am, Exclusively for Retired officials & Intrested House Wives, Age 45 & above, Education SSLC & above any degree. Tea & Lunch allowed. Call for free registration.
7022034200

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

MUDA APPROVED SITES
Mysore Zilla Panchayat Society Opposite to Air Force Apartment
40x60 East Facing Site Attached to Park Near to RT Nagar Mysore Yadahalli Ready E-Khatha
9738449955

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (SSLC PASS) 18,000 Rs ESI & PF ಸೌಲಭ್ಯ ಮೇಟಗಳ್ಳಿ ಹಾಗೂ ಕೂರ್ಗಳ್ಳಿ ಸುತ್ತಮುತ್ತ
9035367083
6361548626

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ MNC ಕಂಪನಿಗಳಿಗೆ ನೂತನವಾಗಿ ಉತ್ತೀರ್ಣರಾದ ಯುವಕ ಯುವತಿಯರಿಗೆ ಆಫೀಸ್, Voiceprocess, Non voice process, Receptionist, Data Entry, HR, Accounts, Quality, productions, Maintenance, Supervisor, Driver ಮುಂತಾದ ಕೆಲಸಗಳಿಗೆ 7th, 10th, PUC, ITI, Diploma(Any trade), BA, B.Com, BBA, MBA, M.Com Pass/Fail ಆದ ಯುವಕ/ ಯುವತಿಯರು ಬೇಕಾಗಿದ್ದಾರೆ. ಸಂಬಳ : 18,000 - 68,000 (ESI+PF+OT)ದೊಂದಿಗೆ. ಸಂಪರ್ಕಿಸಿ
9035143190
9980838417

DOCUMENT LOST
H Nisarga, Residing at Honjagodanahally, Hurudi Anche, Sakaleshpur Taluk, Hassan District, I have lost my Khatha Pathra, Identification No : Sathgalli 1st Stage, Dimension 40x60, Site No 283, Khatha No 22588, Rajkumar Main road, Finders pls Contact: 9844402623

3 BHK HOUSE FOR LEASE
in Vijayanagara 1st Stage, Specious sit-out & Balcony with car parking and garden facilities available
7899831216
Brokers Excuse

ಬೇಕಾಗಿದ್ದಾರೆ
1) ಲೇಡಿ ಗಾರ್ಡ್ (ಕಂಪ್ಯೂಟರ್ ಬೇಸಿಕ್ ಬೇಕು) ಹೆಬ್ಬಾಳು ಸುತ್ತಮುತ್ತ, 2) ಫೀಲ್ಡ್ ಸೂಪರ್‌ವೈಸರ್ (ಸೆಕ್ಯೂರಿಟಿ ಅನುಭವ/ದ್ವಿಚಕ್ರ ಹೊಂದಿರಬೇಕು.) 3) ಸೆಕ್ಯೂರಿಟಿ ಗಾರ್ಡುಗಳು
9686422400
9242406261

PROPERTIES FOR SALE — RAINING OFFERS THIS JUNE
Book Now For Free Registration
2 & 3 BHK APARTMENTS @ RAMKRISHNA NAGAR
20x30, 20x35, 30x40, 30x50 Sites Near Rainbow School, Bogadi
30X40, 30X50+, 40X60 SITES @ 40FT & 50 FT ROAD NEAR RT NAGAR, DEFENCE APARTMENTS
PRAKRUTHI PROPERTIES
95386 90359, 90359 90359

HOUSE FOR SALE
30x40 Ground, First & Second Floor Duplex House & 40x60 Ground & First Floor House for Sale at Ramakrishnanagar
1BHK House for Rent at T.K Layout
7353430309

SITE FOR SALE
Genuine Deals - Genuine Documents

40x60 E	Sourish	Bogadi	- 1.10 Cr
30x40 E	Vidya Vikas	T.N. Pur Rd.	- 55 Lakhs
30x40 E	Harividyalaya,	Bogadi	- 65 Lakhs
30x40 W	Belavadi	Hunsur Rd.	- 45 Lakhs
32x40 N	Bogadi	Bhanavi Convention	- 66 Lakhs
20x45 E	Dattagally	Christ School	- 56 Lakhs
30x40 E	Nityananda	Hunsur Rd.	- 32 Lakhs
30x40 N	Nypunya	R.T. Nagar	- 65 Lakhs

9886697052 / 9342384641

ಜಮೀನು ಮಾರಾಟಕ್ಕೆ ಇದೆ
ನಂಜನಗೂಡು ತಾಲ್ಲೂಕು, ಬುಜಂಗಯ್ಯನಹುಂಡಿಯಲ್ಲಿ 50 ಗುಂಟೆ ಜಮೀನು ಮಾರಾಟಕ್ಕೆ ಇದೆ. ಬೋರ್‌ವೆಲ್ ಸೌಲಭ್ಯ ಇದೆ.
9379259093, 8971377779

ಬೇಕಾಗಿದ್ದಾರೆ
ITI and Diploma candidatesಗೆ ಹೆಬ್ಬಾಳಿನ ಹೆಸರಾಂತ ಕಂಪನಿಗೆ ಸೇರುವ ಉತ್ತಮ ಅವಕಾಶವಿದೆ.
CTC Rs. 20,820/-.
Mob: 7892441955

SITES FOR SALE
Near Vajmangala, T.Narasipura Road
&
Near KSRTC Bus Depot, Hunsur
8123387555 / 7259348777

SITE FOR SALE
40x60 North site sale in Suvarna Nagar.
Call: 9880273834

SITE FOR SALE
40x40 North face
Panchacharya Layout (Vijayanagar 4th Stage)
Call: 97400 88990

airtel
WANTED PROMOTER
Salary 16500/-(ESI, PF)
Incentive, upto 20000/-
8050273519

TEACHERS WANTED
1. EVS Teacher (1st to 5th) -No. 2
2. English Teacher (6th to 10th) - No. 2
3. Hindi Teacher (6th to 10th) - No. 2
4. Montessori Teacher-No. 1,
5. P.E Teacher -No. 1,
6. Helper (Female) - No. 2
GAYATHRI VIDYALAYA
Hosa undavadi, K R Sagara, Srirangapatna(T), Mandya (D). Send Your Resumes to: gayathrieducationtrust.krs@gmail.com
Contact: 8892927318/ 8088848807/6360302911



SUNZONE SOLAR SYSTEM
VM Double Road, Kuvempunagar, Mysuru
9845175443

Urgent MUDA Approved Site for sale
Anand Sagar Pragatinagar
50X80 East facing 40ft road. Contact
8951144240

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
30x40
East Facing
Near Nypunya school RT Nagar
9035460999

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಹಾಗೂ ಸೂಪರ್‌ವೈಸರ್. ವಯಸ್ಸು 18 ರಿಂದ 50, ಸಂಬಳ: 16,000 ರಿಂದ 22,000, ಚಾಮರಾಜನಗರ, ಮೈಸೂರು, ನಂಜನಗೂಡು
9606079596 / 8971948238
9606959660 / 9611232188

Arokah Designs Studio -ARCHITECTS-
ನಿಮ್ಮ ಕನಸಿನ ಮನೆ ಕಟ್ಟಲು ಆರ್ಕಿಟೆಕ್ಟ್ ಡಿಸೈನರ್ ಹುಡುಕುತ್ತಿದ್ದರೆ. ಇಂದೇ ನಮ್ಮನ್ನು ಸಂಪರ್ಕಿಸಿ. & ಕಡಿಮೆ ಶುಲ್ಕದಲ್ಲಿ ಆರ್ಕಿಟೆಕ್ಟ್ ಡಿಸೈನ್ ಸೇವೆಗಳನ್ನು ಪಡೆಯಿರಿ. ಆರ್ಕಿಟೆಕ್ಚರಲ್ ಫ್ಲೋರ್ ಪ್ಲಾನ್ಸ್, ಎಲಿವೇಷನ್ / 3ಡಿ ಡಿಸೈನ್, ಇಂಟೀರಿಯರ್ ಡಿಸೈನ್, ಸ್ಟ್ರಕ್ಚರಲ್ ಡ್ರಾಯಿಂಗ್, ಎಲೆಕ್ಟ್ರಿಕಲ್ & ಪ್ಲಂಬಿಂಗ್ ಲೇಔಟ್, ವಾಸ್ತು ಫ್ರಾ ವಿಡಿಯೋಸ್, ಬಿಲ್ಡಿಂಗ್ ರಿನೋವೇಷನ್ ಡಿಸೈನ್ ,
Architectural Designs Fees = Architectural Floor Plans = 2999/-, Elevations & 3D Designs = 7999/-
Kuvempunagar, Mysore-
9187046167

CHANGE OF NAME
I, NABEEL KINATTINGAL (Aadhar No. 3624 05735931) S/o Kinattingal Abdul Azeez, aged about 37 years, residing at # 28/E, G/F-02, Siddiqui Nagar, Bannimantap Mysuru-570015, do hereby solemnly affirm and state on oath as follows: I state that I have changed my minor son's name from AMMAR BIN NABEEL to AMMAR BIN NABEEL KINATTINGAL vide Affidavit dated 02-06-2026 before Notary P. Geetha., Mysuru. Henceforth he shall be called as AMMAR BIN NABEEL KINATTINGAL only.
SD/- NABEEL KINATTINGAL

ಮೈಸೂರು ತಾಲೂಕು ಜಯಪುರ ಹೋಬಳಿ ಮತ್ತು ಕೋಟೆ ತಾಲೂಕು ಹಂಪಾಪುರ ಹೋಬಳಿಯಲ್ಲಿ
ಫಾರಂಹೌಸ್ ಮಾಡಲು 10 ಗುಂಟೆ ಹಾಗೂ 25 ಗುಂಟೆ 1 ಎಕರೆ 28 ಗುಂಟೆ ಹಾಗೂ 1 ಎಕರೆ 30 ಗುಂಟೆ ಜಮೀನು ಮಾರಾಟಕ್ಕಿದೆ
9945661696

COMMERCIAL PROPERTY FOR SALE
Small Old House Measuring
50x80
East facing At New kanthRaj urs Road Near Appolo hospital & Behind igiri cafe
9035460999

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ದ್ವಿಚಕ್ರ ವಾಹನದ ಶೋರೂಂ ಗೆ,
SALES EXECUTIVE - 4
[Anydegree] (Freshers also welcome) Male and Female .
ಕೂಡಲೇ ಸಂಪರ್ಕಿಸಿ–
9743647484

WANTED
Teaching Staff for Reputed Institution (Experience Preferred) for Evs, English and Maths, Subjects.Transport Facilities Available. Drop your Resume Through WhatsApp Contact
8971577685
9980631121

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್ ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ, ಮತ್ತು ಬ್ಯಾಂಕ್ ಕೆಲಸಕ್ಕೆ, ಹಾಗೂ ಆಫೀಸ್ ಕೆಲಸಕ್ಕೆ, ಯುವಕ ಯುವತಿಯರು ಬೇಕಾಗಿದ್ದಾರೆ, * ಬ್ಯಾಕ್ ಆಂಡ್ ಆಫೀಸ್, ಡೇಟಾ ಎಂಟ್ರಿ, ಹಾಗೂ ವರ್ಕ್ ಫ್ರಮ್ ಹೋಂ, ಪ್ಯಾಕಿಂಗ್ ಪಿಕಿಂಗ್*, ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಸಂಪರ್ಕಿಸಿ
7022729803
6361167510

Arokah Designs Studio -ARCHITECTS-
ನಿಮ್ಮ ಕನಸಿನ ಮನೆ ಕಟ್ಟಲು ಆರ್ಕಿಟೆಕ್ಟ್ ಡಿಸೈನರ್ ಹುಡುಕುತ್ತಿದ್ದರೆ. ಇಂದೇ ನಮ್ಮನ್ನು ಸಂಪರ್ಕಿಸಿ. & ಕಡಿಮೆ ಶುಲ್ಕದಲ್ಲಿ ಆರ್ಕಿಟೆಕ್ಟ್ ಡಿಸೈನ್ ಸೇವೆಗಳನ್ನು ಪಡೆಯಿರಿ.
Architectural Designs Fees = Architectural Floor Plans = 2999/- Elevations & 3D Designs = 7999/-
Kuvempunagar, Mysore
9187046167

ಬಾಡಿಗೆಗೆ ಇದೆ
ವಾಣಿಜ್ಯ ಮಳಿಗೆ, ನೆಲಹಂತಸ್ತು, 800 sq. feet ಹಿನಕಲ್ ಮೈಸೂರು, ಹುಣಸೂರು, ಮುಖ್ಯ ರಸ್ತೆ
20x30 or 30x40 Site ಮಾರುವವರು, ವಿಜಯನಗರ 3ನೇ ಹಂತ
9844576436
9187227665

ಸದ್ಗುರು ಮ್ಯಾರೇಜಸ್
1) ನಯನ ಕ್ಷತ್ರಿಯ ವಧುವರರಿಗೆ
2) ಕ್ರಿಶ್ಚಿಯನ್ ವಧುವರರಿಗೆ
3) ಗೊಲ್ಲ ಯಾದವ ವಧುವರರಿಗೆ
4) ಗಾಣಿಗ ಶಿವಜ್ಯೋತಿ ಪಣ ವಧುವರರಿಗೆ
5) ತಮಿಳು ವಧುವರರಿಗೆ, ನೇರ ಸಂಪರ್ಕಿಸಿ.
9448229184
7899625268

WANTED WORKERS
FOR PETROL BUNK IN MYSORE
PART TIME OR FULL TIME SALES BOYS OR GIRLS FOR FILLING PETROL/DIESEL/GAS. CASHIER PLUS HELPER. EXPERIENCE - SSLC AND ABOVE
9901120389
9844002226

ಸೈಟು ಮಾರಾಟಕ್ಕಿದೆ
ದಟ್ಟಗಳ್ಳಿ–ಕೆಎಸ್‌ಎಸ್ ಹೊಸ ಆರ್‌ಟಿ ನಗರ ವಿಶಾಕ ನಗರ, ವಿಶ್ವಜಿತ್ ಮಾಧವನ್,
9886281713

ಮೈಸೂರು ಮಿತ್ರ — ಓದುಗರ ಗಮನಕ್ಕೆ
47
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಜೆಡಿಎಸ್ ಮುಖಂಡರ ಆಣೆ-ಪ್ರಮಾಣ ಪ್ರಹಸನ;

ಹೆಬ್ಬಾಳದ ಶ್ರೀಕ್ಷೇತ್ರ ಕಪ್ಪಡಿ ಮುಖ್ಯದ್ವಾರದಲ್ಲಿ ಉದ್ವಿಗ್ನತೆ

●ಹೆಬ್ಬಾಳು ಗ್ರಾಮಸ್ಥರ ವಿರೋಧ: ಪೂಜೆ ಸಲ್ಲಿಸಿ ವಾಪಸ್ಸಾದ ಮುಖಂಡರು ●ಮಂಡ್ಯ ಲೋಕಸಭಾ ಚುನಾವಣೆ ಬೆಟ್ಟಿಂಗ್ ವಿಚಾರದಲ್ಲಿ ತಾರಕಕ್ಕೇರಿದ ಜಟಾಪಟಿ





ಹೆಬ್ಬಾಳು ಗ್ರಾಮದ ಕಪ್ಪಡಿಗೆ ಆಣೆ-ಪ್ರಮಾಣಕ್ಕೆಂದು ತೆರಳುತ್ತಿದ್ದ ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್, ಎಪಿಎಂಸಿ ಮಾಜಿ ಅಧ್ಯಕ್ಷರಾದ ಜೆಡಿಎಸ್ ಮುಖಂಡ ಕುಪ್ಪಹಳ್ಳಿ ಸೋಮಶೇಖರ್ ಅವರನ್ನು ಕ್ಷೇತ್ರದ ಮುಖ್ಯದ್ವಾರದ ಬಳಿ ತಡೆದ ಹೆಬ್ಬಾಳು ಗ್ರಾಮಸ್ಥರು. ಮತ್ತೊಂದು ಚಿತ್ರದಲ್ಲಿ ಸಾ.ರಾ.ನಂದೀಶ್ ತಮ್ಮ ಬೆಂಬಲಿಗರೊಂದಿಗೆ ಕಪ್ಪಡಿ ಗದ್ದಿಗೆಗೆ ನಮಸ್ಕರಿಸಿದರು.

ಕೆ.ಆರ್.ನಗರ, ಜೂ.5– ಇತಿಹಾಸ ಪ್ರಸಿದ್ಧ ಹಾಗೂ ಸತ್ಯಕ್ಕೆ ಹೆಸರುವಾಸಿಯಾದ ತಾಲೂಕಿನ ಹೆಬ್ಬಾಳದಲ್ಲಿರುವ ಕಪ್ಪಡಿ ಕ್ಷೇತ್ರದ ಹೆಬ್ಬಾಗಿಲಿನಲ್ಲಿ ಶುಕ್ರವಾರ ಅಕ್ಷರಶಃ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ರಾಜಕೀಯ ವಿಚಾರಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಮುಖಂಡರ ಆಣೆ–ಪ್ರಮಾಣದ ಪ್ರಹಸನದಿಂದಾಗಿ ಹೆಬ್ಬಾಳದಲ್ಲಿ ನೂರಾರು ಮಂದಿ ಜಮಾವಣೆಗೊಂಡು ಭಾರೀ ಜಟಾಪಟಿಯೇ ನಡೆದು ಹೋಯಿತು. ಇದರಿಂದಾಗಿ ಕೆಲಕಾಲ ರಸ್ತೆ ಸಂಚಾರಕ್ಕೂ ಅಡಚಣೆ ಉಂಟಾಗಿತ್ತು. ಗ್ರಾಮಸ್ಥರ ತೀವ್ರ ಆಕ್ಷೇಪದ ನಡುವೆಯೂ ದೇವರ ದರ್ಶನ ನೆಪದಲ್ಲಿ ಪ್ರತ್ಯೇಕವಾಗಿ ಆಣೆ–ಪ್ರಮಾಣ ಮಾಡಿರುವುದಾಗಿ ತಿಳಿದು ಬಂದಿದೆ.

2019ರ ಲೋಕಸಭಾ ಚುನಾವಣೆ ಪ್ರಚಾರದ ಸಂದರ್ಭ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಸಹೋದರ, ಜಿಪಂ ಮಾಜಿ ಅಧ್ಯಕ್ಷ ಸಾ.ರಾ. ನಂದೀಶ್ ಅವರು ಮಂಡ್ಯದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸುಮಲತಾ ಅಂಬರೀಶ್ ಗೆಲ್ಲುತ್ತಾರೆಂದು 10 ಲಕ್ಷ ರೂ. ಬೆಟ್ಟಿಂಗ್ ಕಟ್ಟಿದ್ದರು. ಆ ಬೆಟ್ಟಿಂಗ್ ಹಣವನ್ನು ಮೈಸೂರಿನ ಅವರ ಕಚೇರಿಯಲ್ಲಿ ಪಡೆದುಕೊಂಡರು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಬೆಂಬಲಿಗ, ಮೈಸೂರಿನ ಹೂಟಗಳ್ಳಿ ಗ್ರಾಮದ ಸುರೇಶ್ ಆರೋಪ ಮಾಡಿದ್ದರು.

ಈ ಬಗ್ಗೆ ಸಾಲಿಗ್ರಾಮ ತಾಲೂಕು ಕುಪ್ಪಹಳ್ಳಿ ಗ್ರಾಮದ ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ಜೆಡಿಎಸ್ ಮುಖಂಡ ಕುಪ್ಪಹಳ್ಳಿ ಸೋಮಶೇಖರ್ ಪ್ರತಿಕ್ರಿಯಿಸಿ, ಹೌದು ನಾನೇ 10 ಲಕ್ಷ ರೂ.ಗಳನ್ನು ಮೈಸೂರಿಗೆ ತೆಗೆದುಕೊಂಡು ಹೋಗಿ ಸಾ.ರಾ.ನಂದೀಶ್ ಅವರ ಬೆಂಬಲಿಗರಿಗೆ ಕೊಟ್ಟಿದ್ದಾಗಿ ಹೇಳಿದ್ದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಇದು ಜಿಲ್ಲೆಯ ಜೆಡಿಎಸ್ ಪಾಳೇಯದಲ್ಲಿ ಬಣ ಬಡಿದಾಟದ ಕಿಚ್ಚು ಹಚ್ಚಿತ್ತು. ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ ಮತ್ತು ಮಾಜಿ ಸಚಿವ ಸಾ.ರಾ.ಮಹೇಶ್ ಬೆಂಬಲಿಗರು ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗಿದ್ದರು. ಈ ಸಂಬಂಧ ಶ್ರೀಕ್ಷೇತ್ರ ಕಪ್ಪಡಿಯಲ್ಲಿ ಆಣೆ–ಪ್ರವಾಣಕ್ಕೆ ಹೂಟಗಳ್ಳಿ ಸುರೇಶ್ ಆಹ್ವಾನಿಸಿದ್ದರು. ಇದಕ್ಕೆ ಸಾ.ರಾ. ನಂದೀಶ್ ಕೂಡ ಒಪ್ಪಿಗೆ ಸೂಚಿಸಿದ್ದರಿಂದ ಆಣೆ–ಪ್ರಮಾಣಕ್ಕೆ ದಿನಾಂಕವೂ ನಿಗದಿಯಾಗಿತ್ತು.

ಗ್ರಾಮಸ್ಥರ ವಿರೋಧ: ಅಂತೆಯೇ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಸಾ.ರಾ.ನಂದೀಶ್ ಹಾಗೂ ಬೆಂಬಲಿಗರು ಹೆಬ್ಬಾಳು ಗ್ರಾಮದ ಕಪ್ಪಡಿ ಕ್ಷೇತ್ರಕ್ಕೆ ಹೋಗುವ ಮುಖ್ಯದ್ವಾರದ ಬಳಿ ಬಂದಾಗ ಗ್ರಾಮಸ್ಥರು ತಡೆದು ನಿಲ್ಲಿಸಿದರು. ಯಾವುದೇ ಕಾರಣಕ್ಕೂ ಆಣೆ–ಪ್ರಮಾಣಕ್ಕೆ ಇಲ್ಲಿ ಅವಕಾಶವಿಲ್ಲ ಎಂದು ಸಾ.ರಾ.ನಂದೀಶ್ ಹಾಗೂ ಜೊತೆಯಲ್ಲಿದ್ದ ಜಿಪಂ ಮಾಜಿ ಸದಸ್ಯ ಅಮಿತ್ ದೇವರಹಟ್ಟಿ ಅವರ ಮನವೊಲಿಸಿದರು. ಬಳಿಕ ಅಲ್ಲಿಗೆ ಬಂದ ಹೂಟಗಳ್ಳಿ ಸುರೇಶ್ ಹಾಗೂ ಬೆಂಬಲಿಗರನ್ನು ಗ್ರಾಮಸ್ಥರು ತಡೆದರು. ಆದಾಗ್ಯೂ ಹೂಟಗಳ್ಳಿ ಸುರೇಶ್, ಕುಪ್ಪಳ್ಳಿ ಸೋಮಶೇಖರ್ ಹಾಗೂ ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್ ಬೇರೊಂದು ಮಾರ್ಗದಲ್ಲಿ ಕಪ್ಪಡಿ ಕ್ಷೇತ್ರಕ್ಕೆ ತೆರಳಿ ಪೂಜೆ ಮಾಡಿಸಿಕೊಂಡು ವಾಪಸ್ಸಾಗುವಾಗ ಕ್ಷೇತ್ರದ ಹೆಬ್ಬಾಗಿಲಿನಲ್ಲಿ ಸಾ.ರಾ.ನಂದೀಶ್ ಬೆಂಬಲಿಗರು ಕಾರು ಅಡ್ಡಗಟ್ಟಲು ಮುಂದಾದರು. ಆದರೆ ಕಾರು ನಿಲ್ಲಿಸದ ಕಾರಣ ಸಾ.ರಾ.ನಂದೀಶ್ ಬೆಂಬಲಿಗರು ಮತ್ತು ಜೆಡಿಎಸ್ ಕಾರ್ಯಕರ್ತರು ಧಿಕ್ಕಾರ ಕೂಗಿದರಲ್ಲದೆ ಕುಪ್ಪಹಳ್ಳಿ ಸೋಮಶೇಖರ್ ಅವರನ್ನು ಅಡ್ಡಗಟ್ಟಿ ತರಾಟೆ ತೆಗೆದುಕೊಂಡರು. ಈ ವೇಳೆ ಮಾತಿನ ಚಕಮಕಿ, ತಳ್ಳಾಟ–ನೂಕಾಟವೂ ನಡೆಯಿತು. ಅವರ ಜೊತೆಯಲ್ಲಿ ಬಂದಿದ್ದವರ ಮತ್ತೊಂದು ಕಾರಿನ ಕೀ ಕಿತ್ತುಕೊಂಡಿದ್ದರಿಂದ ದೊಡ್ಡ ಹೈಡ್ರಾಮವೇ ನಡೆಯಿತು. ಅಷ್ಟರಲ್ಲಿ ಸ್ಥಳಕ್ಕಾಗಮಿಸಿದ ಪೊಲೀಸರು, ಉದ್ರಿಕ್ತ ಗುಂಪಿನಿಂದ ಕುಪ್ಪಹಳ್ಳಿ ಸೋಮಶೇಖರ್ ಅವರನ್ನು ಸುರಕ್ಷಿತವಾಗಿ ಸ್ಕೂಟರ್‌ನಲ್ಲಿ ಕೆ.ಆರ್.ನಗರದ ಕಡೆ ಕಳುಹಿಸಿಕೊಟ್ಟರು.

ಇದಾದ ನಂತರ ಸಾ.ರಾ.ನಂದೀಶ್ ಹಾಗೂ ಅವರ ಬೆಂಬಲಿಗರು ಕಪ್ಪಡಿ ಕ್ಷೇತ್ರಕ್ಕೆ ಹೋಗಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಪಟಾಕಿ ಸಿಡಿಸಿ, ಸಿಹಿ ಹಂಚಿ, ಜೈಕಾರ ಕೂಗಿದರು. ಅಲ್ಲದೆ, ಕುಪ್ಪಹಳ್ಳಿ ಸೋಮಶೇಖರ್ ಹಾಗೂ ಹೂಟಗಳ್ಳಿ ಸುರೇಶ್ ವಿರುದ್ಧ ವಿವಿಧ ಆರೋಪಗಳೊಂದಿಗೆ ಆಕ್ರೋಶ ವ್ಯಕ್ತಪಡಿಸಿದರು. ಮತ್ತೊಂದು ಮೂಲದ ಪ್ರಕಾರ ಹೂಟಗಳ್ಳಿ ಸುರೇಶ್, ಕಪ್ಪಡಿ ಕ್ಷೇತ್ರದಲ್ಲಿ ಆಣೆ–ಪ್ರಮಾಣ ಮಾಡಿ ಹೋಗಿದ್ದಾರೆ ಎಂದು ತಿಳಿದು ಬಂದಿದೆ.

ಈ ವೇಳೆ ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಯುವ ಜೆಡಿಎಸ್ ಎಸ್ಸಿ ಘಟಕದ ಅಧ್ಯಕ್ಷ ಹಂಪಾಪುರ ಸೂರಿ, ಹೆಬ್ಬಾಳು ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಬಾಲು, ಸಾಲಿಗ್ರಾಮ ಜೆಡಿಎಸ್ ಮುಖಂಡರಾದ ಬಾಂಬೆ ಮಹೇಶ್, ವ್ಯಾನ್ ಮಂಜುನಾಥ್, ಡೈರಿ ಅಧ್ಯಕ್ಷ ಮಹೇಂದ್ರ, ಉಪಾಧ್ಯಕ್ಷ ದಾಸಿ ಮಹೇಶ್, ಮುಖಂಡರಾದ ಹೆಬ್ಬಾಳು ಸಂತೋಷ್, ಸುಜಯ್ ಗೌಡ, ಕಪ್ಪಡಿ ಹರೀಶ್, ಮಧು, ವಕೀಲ ಅಂಕನಹಳ್ಳಿ ತಿಮ್ಮಪ್ಪ, ಅಯ್ಯ ರುದ್ರೇಶ್, ಅನೀಫ್, ಶ್ರೀಧರ, ಮಹೇಶ್, ರಾಜೇಗೌಡ, ಕಗ್ಗರೆ ಕುಚೇಲ, ಮಹೇಶ್, ಮುಂಡೂರು ಶಿವು, ಸಾಲಿಗ್ರಾಮ ಪ್ರಶಾಂತ್ ಮತ್ತಿತರರರಿದ್ದರು.

ಬಿಗಿ ಬಂದೋಬಸ್ತ್: ಸಾ.ರಾ.ನಂದೀಶ್ ಕಪ್ಪಡಿಯಿಂದ ವಾಪಸ್ ಬರುವಾಗ ಹೆಬ್ಬಾಳು ಗ್ರಾಮದ ಮುಖ್ಯ ದ್ವಾರದಲ್ಲಿ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ, ನಂದೀಶ್ ಪರ ಘೋಷಣೆ ಕೂಗಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಇನ್ಸ್‌ಪೆಕ್ಟರ್ ಎಸ್.ಶಿವಪ್ರಕಾಶ್ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಎರಡೂ ಕಡೆಯವರು ಯಾವುದೇ ಆಣೆ ಪ್ರಮಾಣ ಮಾಡದೆ ಪೂಜೆ ಸಲ್ಲಿಸಿ ವಾಪಸ್ಸಾದರು.

ಬೆಟ್ಟಿಂಗ್‌ನಲ್ಲಿ ಭಾಗಿಯಾಗಿಲ್ಲ: ಸಾ.ರಾ.ನಂದೀಶ್



ಸಾ.ರಾ.ನಂದೀಶ್

ಕೆ.ಆರ್.ನಗರ: ನಾನು ಯಾವುದೇ ಬೆಟ್ಟಿಂಗ್‌ನಲ್ಲಿ ಭಾಗಿಯಾಗಿಲ್ಲ. ಆದರೆ ಕುಪ್ಪಹಳ್ಳಿ ಸೋಮಶೇಖರ್, ಹೂಟಗಳ್ಳಿ ಸುರೇಶ್ ಹಾಗೂ ಇತರರು ನನ್ನ ವಿರುದ್ಧ ವಿನಾಕಾರಣ ಸುಳ್ಳು ಆರೋಪ ಮಾಡಿದ್ದಾರೆ. ಇದರಿಂದ ನನ್ನ ಮತ್ತು ನನ್ನ ಕುಟುಂಬದವರ ಮನಸ್ಸಿಗೆ ತೀವ್ರ ಆಘಾತವಾಗಿ, ಆರೋಗ್ಯವೂ ಹಾಳಾಗಿದೆ. ಇದು ಅಣ್ಣ–ತಮ್ಮಂದಿರ ನಡುವೆ ಬಿರುಕು ಮೂಡಿಸುವ ಪ್ರಯತ್ನ ಎಂದು ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್ ಬೇಸರ ವ್ಯಕ್ತಪಡಿಸಿದರು.

ನಾನು ಯಾವುದೇ ಕಾರಣಕ್ಕೂ ಪಕ್ಷಕ್ಕೆ ದ್ರೋಹ ಮಾಡಿಲ್ಲ. ಬೆಟ್ಟಿಂಗ್ ಆಡುವುದಕ್ಕೆ ನನ್ನ ಸಹಮತ ಇಲ್ಲ. ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಕೆಲವರು ಮಾಧ್ಯಮಗಳಲ್ಲಿ ಬೆಟ್ಟಿಂಗ್ ಆಡಿದ್ದೇವೆ ಎಂದು ಹೇಳಿದ್ದರೂ, ಅವರ ವಿರುದ್ಧ ಈವರೆಗೂ ಪೊಲೀಸ್ ಇಲಾಖೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇಷ್ಟೆಲ್ಲಾ ಬೆಳವಣಿಗೆಗೆ ಪೊಲೀಸರ ವೈಫಲ್ಯವೇ ಕಾರಣ ಎಂದು ಕಿಡಿಕಾರಿದರು.

ನನ್ನ ಅಣ್ಣ ಸಾ.ರಾ.ಮಹೇಶ್ ಹಾಗೂ ನನ್ನ ರಾಜಕೀಯ ಯಶಸ್ಸನ್ನು ಸಹಿಸದೆ ನಮ್ಮ ವಿರೋಧಿಗಳು ನಮ್ಮ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ನನ್ನ ಅಣ್ಣ ಏನು ಹೇಳಿದ್ದಾರೋ, ಯಾವ ನಿರ್ದೇಶನ ಕೊಟ್ಟಿದ್ದಾರೋ ಅದೇ ರೀತಿ ನಡೆದುಕೊಂಡಿದ್ದೇನೆ. ಹೆಬ್ಬಾಳಿನ ಸ್ಥಳೀಯರು ಯಾವುದೇ ಕಾರಣಕ್ಕೂ ಆಣೆ–ಪ್ರಮಾಣ ಬೇಡ ಎಂದು ಹೇಳಿದರು. ಸುರೇಶ ದೂರವಾಣಿ ಕರೆ ಮಾಡಿ ನನ್ನದು ತಪ್ಪಾಗಿದೆ ಎಂದು ಹೇಳಿದ್ದಾರೆ. ಅದನ್ನು ಮಾಧ್ಯಮದ ಮುಂದೆ ಹೇಳಿ ಎಂದು ಹೇಳಿದೆ. ಎಲ್ಲವನ್ನು ದೇವರು ನೋಡಿಕೊಳ್ಳುತ್ತಾನೆ ಎಂದರು.

ನಾವು ಪ್ರಕೃತಿ ಉಳಿಸಿದರೆ ಪ್ರಕೃತಿ ನಮ್ಮನ್ನು ರಕ್ಷಿಸುತ್ತದೆ

ನಗರಸಭಾ ಆಯುಕ್ತ ಎಂ.ಬಸವರಾಜು ಅಭಿಪ್ರಾಯ



ಗಿಡ ನೆಡುವ ಕಾರ್ಯಕ್ರಮಕ್ಕೆ ನಗರಸಭಾ ಆಯುಕ್ತ ಎಂ.ಬಸವರಾಜು ಚಾಲನೆ ನೀಡಿದರು.

ನಂಜನಗೂಡು, ಜೂ.5– ಪರಿಸರ ನಮ್ಮ ಜೀವನದ ಆಧಾರವಾಗಿದೆ. ನಾವೆಲ್ಲರೂ ಪ್ರಕೃತಿ ಉಳಿಸಿದರೆ ಪ್ರಕೃತಿ ನಮ್ಮನ್ನು ಉಳಿಸುತ್ತದೆ. ಆದ್ದರಿಂದ ನಮ್ಮ ದೈನಂದಿನ ಜೀವನದಲ್ಲಿ ಪರಿಸರ ಸಂರಕ್ಷಣೆಯ ಅಭ್ಯಾಸಗಳನ್ನು ಮೈಗೂಡಿಸಿಕೊಳ್ಳುವ ಜೊತೆಗೆ ಒಂದೊಂದು ಗಿಡ ನೆಟ್ಟು ಪೋಷಣೆ ಮಾಡಬೇಕು ಎಂದು ನಗರಸಭಾ ಆಯುಕ್ತ ಎಂ.ಬಸವರಾಜು ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ನಗರಸಭೆ ವತಿಯಿಂದ ನಗರದ ಚಾಮಲಾಪುರ ಹುಂಡಿ ಬಡಾವಣೆಯಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆಧುನಿಕತೆ, ಅಭಿವೃದ್ಧಿ ಹೆಸರಿನಲ್ಲಿ ಕಾಡುಗಳನ್ನು ಕಡಿದು, ಪರಿಸರ ನಾಶ ಪಡಿಸುವ ಜೊತೆಗೆ ಪ್ಲಾಸ್ಟಿಕ್ ಬಳಕೆಯಿಂದ ಹವಾಮಾನ ವೈಪರಿತ್ಯ ಉಂಟಾಗಿ ಜಾಗತಿಕ ತಾಪಮಾನ ಗಣನೀಯವಾಗಿ ಏರಿಕೆಯಾಗುತ್ತಿದೆ. ಪರಿಸರವನ್ನು ಹೀಗೆ ನಿರ್ಲಕ್ಷಿಸಿದಲ್ಲಿ ಮುಂದೊಂದು ದಿನ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ. ಆದ್ದರಿಂದ ಪರಿಸರ ಸಂರಕ್ಷಣೆ ನಮ್ಮ ಹೊಣೆ ಎಂಬುದನ್ನು ಅರಿತು ಪ್ರತಿಯೊಬ್ಬರೂ ಒಂದೊಂದು ಗಿಡ ನೆಟ್ಟು ಪೋಷಣೆ ಮಾಡಿ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು.

ಸುತ್ತಮುತ್ತಲ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಲು ಎಲ್ಲೆಂದರಲ್ಲಿ ಕಸ ಎಸೆಯದೆ ನಗರಸಭೆಯ ವಾಹನಗಳಿಗೆ ಕಸ ನೀಡಬೇಕು. ಜೊತೆಗೆ ಅಡುಗೆ ಮನೆಯ ಹಸಿ ಮತ್ತು ಒಣ ಕಸ, ಸ್ಯಾನಿಟರಿ, ಡೈಪರ್‌ನಂತಹ ನೈರ್ಮಲ್ಯ ತ್ಯಾಜ್ಯ ಹಾಗೂ ಅವಧಿ ಮುಗಿದ ಮಾತ್ರೆಗಳು, ಔಷಧಿಗಳು, ಎಲೆಕ್ಟ್ರಾನಿಕ್ ಉಪಕರಣಗಳಂತಹ ವಿಶೇಷ ಕಾಳಜಿ ತ್ಯಾಜ್ಯಗಳನ್ನು 4 ವಿಭಾಗಗಳಲ್ಲಿ ವಿಂಗಡಿಸಿ ನೀಡುವ ಮೂಲಕ ಸ್ವಚ್ಛ ನಗರಸಭೆಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ನಗರಸಭೆ ಪರಿಸರ ವಿಭಾಗದ ಇಂಜಿನಿಯರ್ ಮೈತ್ರಾವತಿ ಮಾತನಾಡಿ, ಪರಿಸರ ಸಂರಕ್ಷಣೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಗಿಡ ನೆಟ್ಟು ಪೋಷಣೆ ಮಾಡುವಂತೆ ಪ್ರೇರೇಪಿಸುವ ಸಲುವಾಗಿ ಮತ್ತು ಕಸ ವಿಂಗಡಣೆ ಮೂಲಕ ಸ್ವಚ್ಛ ನಗರಿಯನ್ನಾಗಿ ರೂಪಿಸುವ ಸಲುವಾಗಿ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಲು ಈ ಪರಿಸರ ಸಂರಕ್ಷಣೆ ದಿನಾಚರಣೆ ಏರ್ಪಡಿಸಲಾಗಿದೆ. ಸಾರ್ವಜನಿಕರು ಪರಿಸರ ಸಂರಕ್ಷಣೆ ಮಹತ್ವ ಅರಿತು ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು ಎಂದರು.

ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು, ಮುಖಂಡರಾದ ಶಂಕರಪ್ಪ ನಗರಸಭೆ ಎಇ ಮಹೇಶ್, ಅಧಿಕಾರಿಗಳಾದ ಪಾತ ಲಿಂಗಪ್ಪ ಪ್ರೀತಮ್, ಆದರ್ಶ್, ವಸಂತ್ ಸೇರಿದಂತೆ ಶ್ರೀಶಕ್ತಿ ಸ್ವಸಹಾಯ ಸಂಘಗಳ ಮಹಿಳೆಯರು ಮತ್ತು ಸ್ವಚ್ಛತಾ ಸಿಬ್ಬಂದಿ ಉಪಸ್ಥಿತರಿದ್ದರು.

ಡಾ.ಯತೀಂದ್ರಗೆ ನಗರಾಭಿವೃದ್ಧಿ ಸಚಿವ ಸ್ಥಾನ: ಸಂಭ್ರಮಾಚರಣೆ



ಗೋಪಾಲಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ತಿ.ನರಸೀಪುರ, ಜೂ.5– ಡಾ.ಯತೀಂದ್ರ ಸಿದ್ದರಾಮಯ್ಯ ಅವರು ನಗರಾಭಿವೃದ್ಧಿ ಸಚಿವರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಗೋಪಾಲಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಗ್ರಾಮಸ್ಥರು ಸಂಭ್ರಮಾಚರಣೆ ನಡೆಸಿದರು.

ಗೋಪಾಲಪುರದ ಬಸ್ ನಿಲ್ದಾಣದ ಬಳಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಬೆಂಬಲಿಗರು ಡಾ. ಯತೀಂದ್ರ ಅವರ ಬೃಹತ್ ಕಟೌಟ್ ಅನ್ನು ಮುಖ್ಯ ರಸ್ತೆಯಲ್ಲಿ ಅಳವಡಿಸಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಮಹೇಶ್ ಮಾತನಾಡಿ, ಡಿ.ಕೆ.ಶಿವಕುಮಾರ್ ಪಕ್ಷ ಸಂಘಟನೆ ಹಾಗೂ ಜನಸೇವೆ ಮೂಲಕ ರಾಜ್ಯದ ಜನರ ವಿಶ್ವಾಸ ಗಳಿಸಿರುವ ನಾಯಕರು. ಅವರ ನೇತೃತ್ವದಲ್ಲಿ ರಾಜ್ಯವು ಅಭಿವೃದ್ಧಿ ಪಥದಲ್ಲಿ ಸಾಗಲಿದೆ. ಅದೇ ರೀತಿ ಡಾ.ಯತೀಂದ್ರ ಅವರು ಯುವ ನಾಯಕತ್ವದ ಪ್ರತೀಕವಾಗಿದ್ದು, ಇದೀಗ ಸಚಿವರಾಗಿರುವ ಅವರು ರಾಜ್ಯದ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು.

ರಾಜ್ಯದ ಅಭಿವೃದ್ಧಿ, ರೈತರ ಕಲ್ಯಾಣ, ಸಾಮಾಜಿಕ ನ್ಯಾಯ, ಶಿಕ್ಷಣ, ಆರೋಗ್ಯ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗೆ ನೂತನ ಸರ್ಕಾರ ಹೆಚ್ಚಿನ ಆದ್ಯತೆ ನೀಡಲಿದೆ ಎಂಬ ನಿರೀಕ್ಷೆ ಇದ್ದು, ವಿಶೇಷವಾಗಿ ಗ್ರಾಮೀಣ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯುವ ವಿಶ್ವಾಸವಿದೆ ಎಂದರು.

ಕೆಪಿಸಿಸಿ ಮಾಧ್ಯಮ ವಕ್ತಾರ ಈಶ್ವರಗೌಡನಹಳ್ಳಿ ರೇವಣ್ಣ ಮಾತನಾಡಿ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ನೂತನ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಬೇಕು. ಇದು ನಮ್ಮ ಹಳೆ ಮೈಸೂರು ಭಾಗದ ಪ್ರತಿಯೊಬ್ಬರ ಬೇಡಿಕೆ. ಮಹದೇವಪ್ಪ ಅವರು ತಮಗೆ ಅವಕಾಶ ಸಿಕ್ಕಾಗಲೆಲ್ಲಾ ಕ್ರಾಂತಿಕಾರಿ ಬದಲಾವಣೆ ಮಾಡಿ, ಇಲಾಖೆಗೆ ಅನುಗುಣವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಿ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದರು.

ಈ ವೇಳೆ ಸಿದ್ದರಾಮನಹುಂಡಿ ರಮೇಶ್, ಡಿಸಿಸಿ ಸದಸ್ಯ ಶಿವಕುಮಾರ್, ರಾಮಚಂದ್ರ, ಶಿವಣ್ಣ, ನಂಜುಂಡಯ್ಯ, ಮಹದೇವಯ್ಯ, ಶಿವಕುಮಾರ, ರವಿ, ಪುಟ್ಟಮ್ಮ, ರಾಜಮ್ಮ, ಗ್ರಾಮಸ್ಥರು ಹಾಗೂ ಮಹಾದೇವಪ್ಪ ಅಭಿಮಾನಿ ಬಳಗದವರು ಇದ್ದರು.

ಪರಿಸರ ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ



ಹುಣಸೂರಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು.

ಹುಣಸೂರು, ಜೂ.5– ಕಾಡುಗಳಿಲ್ಲದ, ಕಾಡು ಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿರುತ್ತದೆ. ಹೀಗಾಗಿ ಮುಂದಿನ ಪೀಳಿಗೆಯ ಸುಂದರ ಜೀವನ ಹಾಗೂ ಆರೋಗ್ಯಕರ, ಸಂತೋಷಕರ ವಾತಾವರಣಕ್ಕಾಗಿ ಗಿಡ ಮರಗಳನ್ನು ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹೀಗಾಗಿ ಪ್ರತಿಯೊಬ್ಬರೂ ಗಿಡ ಮರಗಳನ್ನು ಬೆಳೆಸಲು ಮುಂದಾಗಬೇಕು ಎಂದು ಎಪಿಎಂಸಿ ಅಧ್ಯಕ್ಷೆ ಶುಭ ತಿಳಿಸಿದರು.

ನಗರದ ಹೃದಯ ಭಾಗದಲ್ಲಿರುವ ಹೆಚ್‌ಪಿಬಿಎಸ್ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲಾವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಡೆದ ಗಿಡ ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಾಲೆ ಆವರಣದಲ್ಲಿ ವಿವಿಧ ಜಾತಿ ಸಸ್ಯಗಳನ್ನು ನೆಟ್ಟು, ಅವುಗಳಿಗೆ ನೀರೆರೆದು ಬೆಳೆಸಿ ಕಾಪಾಡುವ ಬಗ್ಗೆ ತಿಳಿಸಿದರು. ಅಲ್ಲದೇ ಮಾನವನ ದುರಾಸೆಯಿಂದ ಪರಿಸರ ಹಾಳಾಗುತ್ತಿದೆ. ಹೀಗಾಗಿ ಈಗಿನಿಂದಲೇ ಮಕ್ಕಳಿಗೆ ಪರಿಸರ ನಾಶದಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ ಅವರಿಗೆ ಜಾಗೃತಿ ಮೂಡಿಸಬೇಕು. ಅಲ್ಲದೇ ಪರಿಸರ ಸಂರಕ್ಷಣೆಗೆ ಮುಂದಾಗುವಂತೆ ಸಲಹೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಮೊಹಮ್ಮದ್ ರಫೀಕ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಮೇಶ್, ಸದಸ್ಯರಾದ ಶಿವರಾಂ, ವೆಂಕಟೇಶ್, ಬೆಳ್ತೂರ್ ವೆಂಕಟೇಶ್, ಚೆಲುವರಾಜ್, ನರ್ಮದಾ, ಪಲ್ಲವಿ, ಲಕ್ಷ್ಮಿ, ಮಂಜುಳಾ ಮುಖ್ಯ ಶಿಕ್ಷಕ ಸುರೇಶ್, ಶಿಕ್ಷಕರಾದ ಡಾ.ಸಾಹಿತಿ ಮಧುಪ್ರಸಾದ್, ನರಸಿಂಹಯ್ಯ, ಚೆಲುವರಾಜ್, ಸೋಮಸುಂದರ್, ಮಹೇಶ್, ಜಯರಾಮೇಗೌಡ, ಕೃಷ್ಣಮೂರ್ತಿ, ಕವಿತಾ, ಶಿಲ್ಪಾ, ಮೇರಿ ವಸಂತ, ಸುಧಾ, ವೀಣಾ, ಪುಷ್ಪ, ರಾಧಿಕಾ ಇನ್ನಿತರರಿದ್ದರು.

ವಿದ್ಯಾರ್ಥಿಗಳು ಪರಿಸರದ ಬಗ್ಗೆ ಹೆಚ್ಚು ಕಾಳಜಿ ವಹಿಸಿ

ಮಾಜಿ ಸಚಿವ ಕೆ.ವೆಂಕಟೇಶ್ ಸಲಹೆ



ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾಜಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

ಬೆಟ್ಟದಪುರ, ಜೂ.5– ವಿದ್ಯಾರ್ಥಿಗಳು ಪರಿಸರದ ಬಗ್ಗೆ ಹೆಚ್ಚು ಕಾಳಜಿ ವಹಿಸಿದರೇ ಉತ್ತಮ ಪರಿಸರ ನಿರ್ಮಾಣ ಸಾಧ್ಯ ಎಂದು ಮಾಜಿ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕು ಕಿತ್ತೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಅರಣ್ಯ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಗಿಡ ನೆಟ್ಟು ಮಾತನಾಡಿದ ಅವರು, ತಾಲೂಕಿನಲ್ಲಿ ಕೆಲವು ಕಡೆ ತಂಬಾಕು ಹದ ಮಾಡಲು ಮರಗಳನ್ನು ಕಡಿಯುತ್ತಿರುವುದರಿಂದ ಉತ್ತಮ ಪರಿಸರ ನಿರ್ಮಾಣ ಸಾಧ್ಯವಾಗುತ್ತಿಲ್ಲ. ಹೀಗಾಗಿ ವಿದ್ಯಾರ್ಥಿಗಳು ತಮ್ಮ ಮನೆ, ಜಮೀನಿನ ಸುತ್ತಮುತ್ತ ಗಿಡಗಳನ್ನು ನೆಡುವ ಮೂಲಕ ಉತ್ತಮ ಪರಿಸರ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳೊಂದಿಗೆ ಪೋಷಕರು ಕೈ ಜೋಡಿಸಿದಾಗ ಮಾತ್ರ ಉತ್ತಮ ಪರಿಸರ ನಿರ್ಮಿಸಲು ಸಾಧ್ಯವಾಗುತ್ತದೆ ಎಂದರು.

ತಾಲೂಕು ವಲಯ ಅರಣ್ಯಾಧಿಕಾರಿ ಪದ್ಮಶ್ರೀ ಮಾತನಾಡಿ, ಮನುಷ್ಯ ದುರಾಸೆಯಿಂದ ಪರಿಸರ ಹಾಳು ಮಾಡುತ್ತಿದ್ದಾನೆ. ಇದರಿಂದಾಗಿ ಉತ್ತಮ ಆರೋಗ್ಯ, ಮಳೆ ಬೆಳೆ ಎಲ್ಲವೂ ಕ್ಷೀಣಿಸುತ್ತಿದೆ. ಹೀಗಾಗಿ ಉತ್ತಮ ಪರಿಸರ ನಿರ್ಮಿಸಲು ಯುವ ಜನಾಂಗ ಮುಂದಾಗಬೇಕು. ಆಗ ಮಾತ್ರ ಉತ್ತಮ ಪರಿಸರ ನಿರ್ಮಾಣ ಸಾಧ್ಯ ಎಂದರು.


ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ರವಿಪ್ರಸನ್ನ, ತಹಸೀಲ್ದಾರ್ ನಿಸರ್ಗಪ್ರಿಯ, ತಾಪಂ ಇಓ ಸುನೀಲ್, ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎಂ.ಸಿ. ಪ್ರಶಾಂತ್, ಪ್ರಾಂಶುಪಾಲ ಜವರೇಗೌಡ, ಜಿಪಂ ಮಾಜಿ ಸದಸ್ಯ ಮಂಜುನಾಥ್, ಎಸ್‌ಡಿಎಂಸಿ ಉಪಾಧ್ಯಕ್ಷ ಕೆ.ಪಿ.ವೆಂಕಟೇಶ್ ಪಿಎಸಿಎಸ್ ಅಧ್ಯಕ್ಷ ಸಚಿನ್, ಜಗದೀಶ್, ದೀಪು, ಪ್ರಕಾಶ್, ಜಯಚಂದ್ರ, ಮುಖ್ಯೋಪಾಧ್ಯಾಯ ವಿಜಯಕುಮಾರ್ ಇದ್ದರು.

ನಾಳೆ ವಿದ್ಯುತ್ ವ್ಯತ್ಯಯ

ನಂಜನಗೂಡು, ಜೂ.5– ತಾಲೂಕಿನ ಸುತ್ತೂರು, ಗೋಳೂರು, ಅಡಕನಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಕಾರಣ ಜೂ.7ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಅಡಕನಹಳ್ಳಿ, ಇಮ್ಮಾವು ಕೈಗಾರಿಕಾ ಪ್ರದೇಶ, ಗೀಕಹಳ್ಳಿ, ಹೊರಳವಾಡಿ, ಬಸವೇಶ್ವರನಗರ, ಆಲಂಬೂರು, ಆಲಂಬೂರು ಮಂಟಿ, ಕುಳ್ಳಂಕನಹುಂಡಿ, ಸುತ್ತೂರು, ಬಿಳಿಗೆರೆ, ನಗರ್ಲೆ ಗ್ರಾಪಂ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿ

ನಟ ಅರ್ಜುನ್ ರಮೇಶ್ ಕರೆ



ಶಿಬಿರದಲ್ಲಿ ಯುವಕರು ರಕ್ತದಾನ ಮಾಡಿದರು.

ತಿ.ನರಸೀಪುರ, ಜೂ.5– ರಕ್ತದಾನ ಮಾನವೀಯ ಸೇವೆಗಳಲ್ಲಿ ಅತ್ಯಂತ ಶ್ರೇಷ್ಠವಾಗಿದ್ದು, ಪ್ರತಿಯೊಬ್ಬರೂ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ನಟ ಅರ್ಜುನ್ ರಮೇಶ್ ಕರೆ ನೀಡಿದರು.

ಬಸವ ರಾಜೇಂದ್ರ ಬ್ಲಡ್ ಬ್ಯಾಂಕ್ ವತಿಯಿಂದ ಗೋಪಾಲಪುರದಲ್ಲಿ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಋಣ ತೀರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಹುಟ್ಟುಹಬ್ಬದ ಸಂದರ್ಭ ಬಡವರಿಗೆ ನೆರವು ನೀಡುವುದು, ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಮಗ್ರಿಗಳನ್ನು ವಿತರಿಸುವುದು, ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ ಹಾಗೂ ಪರಿಸರ ಸಂರಕ್ಷಣೆಯಂತಹ ಕಾರ್ಯಕ್ರಮ ಹಮ್ಮಿಕೊಳ್ಳುವುದರಿಂದ ಸಮಾಜಕ್ಕೆ ಉತ್ತಮ ಸಂದೇಶ ರವಾನೆಯಾಗುತ್ತದೆ ಎಂದರು.

ಪ್ರಸ್ತಿತ ಯುವಕರು ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದು ಸಂತಸದ ಸಂಗತಿ. ರಕ್ತದಾನದಿಂದ ಯಾವುದೇ ಆರೋಗ್ಯ ಸಮಸ್ಯೆಗಳು ಉಂಟಾಗುವುದಿಲ್ಲ ಎಂಬ ಅರಿವು ಜನರಲ್ಲಿ ಮೂಡಬೇಕಿದ್ದು, ಆರೋಗ್ಯವಂತ ವ್ಯಕ್ತಿಗಳು ನಿಯಮಿತವಾಗಿ ರಕ್ತದಾನ ಮಾಡುವ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬಹುದು ಎಂದರು.

ರಕ್ತದಾನ ಶಿಬಿರಗಳು ಕೇವಲ ರಕ್ತ ಸಂಗ್ರಹಿಸುವ ಕಾರ್ಯಕ್ರಮವಾಗಿರದೇ ಜನರಲ್ಲಿ ಮಾನವೀಯತೆ, ಸಾಮಾಜಿಕ ಕಾಳಜಿ ಹಾಗೂ ಸೇವಾ ಮನೋಭಾವ ಬೆಳೆಸುವ ವೇದಿಕೆಗಳಾಗಿವೆ. ಆದ್ದರಿಂದ ವಿವಿಧ ಸಂಘ–ಸಂಸ್ಥೆಗಳು, ಯುವಕ ಸಂಘಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಶಿಬಿರಗಳಲ್ಲಿ ಭಾಗವಹಿಸಬೇಕು ಎಂದರು.

10 ಕೋಟಿ ಅನುದಾನ ಎಲ್ಲಿ: ಪಟ್ಟಣದ ಅಭಿವೃದ್ಧಿಗೆ ಸರ್ಕಾರ ಹಾಗೂ ಪುರಸಭೆಯಿಂದ ಬಿಡುಗಡೆಯಾಗಿದ್ದ ಅನುದಾನದ ಸಮರ್ಪಕ ಬಳಕೆ ಕುರಿತು ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿ ನೀಡಬೇಕಾಗಿದೆ. ಪುರಸಭೆ ವ್ಯಾಪ್ತಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 10 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅದನ್ನು ಯಾವ ಕಾಮಗಾರಿಗೆ ಬಳಸಲಾಗಿದೆ ಎಂಬುದರ ಬಗ್ಗೆ ಜನರಿಗೆ ಸ್ಪಷ್ಟತೆ ಇಲ್ಲ. ಅಭಿವೃದ್ಧಿ ಕಾರ್ಯಗಳ ಕುರಿತು ಪಾರದರ್ಶಕತೆ ಇರಬೇಕು ಹಾಗೂ ಜನರ ಹಣವನ್ನು ಜನರ ಅಭಿವೃದ್ಧಿಗೆ ಬಳಸಲಾಗಿದೆ ಎಂಬುದನ್ನು ಆಡಳಿತ ಮಂಡಳಿ ವಿವರಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಕನ್ನಡ ಸೇನೆ–ಕರ್ನಾಟಕ ಸಂಘಟನೆಯ ತಾಲೂಕು ಅಧ್ಯಕ್ಷ ಭೈರಾಪುರ ರಾಚು ಮಾತನಾಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್, ಬೆನಕನಹಳ್ಳಿ ವಿಜಯ ಕುಮಾರ್, ಚೌಹಳ್ಳಿ ಸಿದ್ದರಾಜು, ಕೆ.ರಾಜು, ಸಂದೀಪ್, ವಿಶ್ವನಾಥ, ಪ್ರದೀಪ, ಪುಟ್ಟಸ್ವಾಮಿ, ನಂಜುಂಡ, ನಾಗರಾಜು, ವೆಂಕಟರಾಜು, ಕರ್ನಾಟಕ ಮಾದಾರ ಮಹಾಸಭಾ ತಾಲೂಕು ಅಧ್ಯಕ್ಷ ಬಲ್ಲಯ್ಯ ಸೇರಿದಂತೆ ಮತ್ತಿತರರಿದ್ದರು.

ಬಾರ್‌ಗೆ ಅನುಕೂಲ ಕಲ್ಪಿಸಲು ಪುರಸಭೆ ಗೇಟ್ ಬಂದ್

ತಿ.ನರಸೀಪುರ: ಅಭಿವೃದ್ಧಿ ವಿಚಾರದಲ್ಲಿ ಕಾಂಗ್ರೆಸ್ ಮುಖಂಡರು ಪ್ರಚಾರ ಪಡೆದುಕೊಂಡಿದ್ದು, ನಿಜವಾದ ಸ್ಥಿತಿಗತಿ ಬಗ್ಗೆ ಜನರಿಗೆ ಸಂಪೂರ್ಣ ಮಾಹಿತಿ ನೀಡಿಲ್ಲ ಎಂದು ಅರ್ಜುನ್ ರಮೇಶ್ ಟೀಕಿಸಿದರು.

ಪಟ್ಟಣದ ಪುರಸಭೆಗೆ ಹೊಂದಿಕೊಂಡಿರುವ ಬಾರ್‌ಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಪುರಸಭೆ ಮುಖ್ಯ ದ್ವಾರವನ್ನೇ ಮುಚ್ಚಿರುವುದು ಸಾರ್ವಜನಿಕರ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆಯನ್ನು ಸಾರ್ವಜನಿಕರ ಸೇವೆಗಾಗಿ ನಿರ್ಮಿಸಲಾಗಿದ್ದು, ಜನರು ಸುಲಭವಾಗಿ ಕಚೇರಿಗೆ ಪ್ರವೇಶಿಸಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವಂತಿರಬೇಕು. ಆದರೆ ಕೆಲವು ಖಾಸಗಿ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಮುಖ್ಯ ಪ್ರವೇಶ ದ್ವಾರ ಮುಚ್ಚಿರುವುದು ಜನರಿಗೆ ತೊಂದರೆ ಉಂಟು ಮಾಡುತ್ತಿದೆ ಎಂದರು.

ಕೋಟೆಯಲ್ಲಿ ವಿಶ್ವ ಪರಿಸರ ದಿನಾಚರಣೆ



ಹೆಚ್.ಡಿ.ಕೋಟೆ ಶ್ರೀಚಂದ್ರಮೌಳೇಶ್ವರ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು.

ಹೆಚ್.ಡಿ.ಕೋಟೆ, ಜೂ.5– ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ವೇಣುಗೋಪಾಲ್ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪಟ್ಟಣದ ಶ್ರೀಚಂದ್ರಮೌಳೇಶ್ವರ ಪ್ರೌಢಶಾಲೆ ಆವರಣದಲ್ಲಿ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರದ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಮತ್ತು ಪರಿಸರ ರಕ್ಷಣೆಗೆ ಮಹತ್ವ ಕೊಡುವುದು ದಿನಾಚರಣೆ ಉದ್ದೇಶವಾಗಿದೆ. ಪರಿಸರ ಸಂರಕ್ಷಣೆಗಾಗಿ ಡಾ. ವೀರೇಂದ್ರ ಹೆಗ್ಗಡೆಯವರು ಶ್ರಮಿಸುತ್ತಿದ್ದಾರೆ. ಯೋಜನೆ ವತಿಯಿಂದ ನಮ್ಮ ಊರು ನಮ್ಮ ಕೆರೆ ಯೋಜನೆಯಡಿ ತಾಲೂಕಿನಲ್ಲಿ 5 ಕೆರೆ ಗಳ ಹೂಳು ತೆಗೆದು ಅಭಿವೃದ್ಧಿಪಡಿಸಲಾಗಿದೆ ಎಂದರು.

ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಚಂದ್ರಮೌಳೇಶ್ವರ ಪ್ರೌಢಶಾಲೆ ಮುಖ್ಯ ಶಿಕ್ಷಕ ಮಹದೇವಪ್ಪ, ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಗುರುಸ್ವಾಮಿ, ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ಜೆ.ಪಿ.ಶಿವರಾಜು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೇಲ್ವಿಚಾರಕರಾದ ಗುಣಶ್ರೀ, ತಿರುಮಲೇಶ್, ಶಾಲೆ ಶಿಕ್ಷಕರು ಇದ್ದರು.

ಮೈಸೂರು ಮಿತ್ರ

ಕೇಂದ್ರ ಸಂಸ್ಕೃತಿ-ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್

ಐದನೇ ಆವೃತ್ತಿಯ ಮೈಸೂರು ಟ್ರಾವೆಲ್ ಮಾರ್ಟ್‌ಗೆ ಚಾಲನೆ

● ಮೈಸೂರು ಇಡೀ ದಕ್ಷಿಣ ಭಾರತದ ಪ್ರವಾಸೋದ್ಯಮದ ಕೇಂದ್ರ ಬಿಂದುವಾಗಬೇಕು ● ವರ್ಷ ಪೂರ್ತಿ ಪ್ರವಾಸೋದ್ಯಮ ಬೆಳವಣಿಗೆಗೆ ಆದ್ಯತೆ ನೀಡಲು ಸಲಹೆ

ಮೈಸೂರು, ಜೂ.5(ವಿವಿಹೆಚ್)– ಮೈಸೂರು ಕೇವಲ ಒಂದು ನಗರವಷ್ಟೇ ಅಲ್ಲ, ಇಡೀ ದಕ್ಷಿಣ ಭಾರತದ ಪ್ರವಾಸೋದ್ಯಮದ ಕೇಂದ್ರಬಿಂದುವಾಗಬೇಕು ಎಂದು ಕೇಂದ್ರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅಭಿಪ್ರಾಯಿಸಿದರು.

ನಗರದ ವಿಜಯನಗರ 2ನೇ ಹಂತದ ಜೆಸಿಎಸಿ ಸಭಾಂಗಣದಲ್ಲಿ ಎಂಟಿಎ (ಮೈಸೂರು ಟ್ರಾವೆಲ್ ಅಸೋಸಿಯೇಷನ್), ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿರುವ ಐದನೇ ಆವೃತ್ತಿಯ ಮೈಸೂರು ಟ್ರಾವೆಲ್ ಮಾರ್ಟ್ (ಎಂಟಿಎಂ–2026) ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಉತ್ತರ ಭಾರತದಲ್ಲಿ ಜೈಪುರ, ಉದಯಪುರ ಮತ್ತು ಆಗ್ರಾ ಹೇಗೆ ಪ್ರಮುಖ ಪ್ರವಾಸಿ ಆಕರ್ಷಣಾ ಕೇಂದ್ರಗಳಾಗಿವೆಯೋ, ಅದೇ ರೀತಿಯಲ್ಲಿ ಮೈಸೂರನ್ನು ಅಭಿವೃದ್ಧಿಪಡಿಸಲು ಕೇಂದ್ರೀಕೃತ ಪ್ರಯತ್ನಗಳು ಮತ್ತು ದೂರದೃಷ್ಟಿ ಯೋಜನೆಗಳ ಅಗತ್ಯವಿದೆ. ಭವ್ಯ ದಸರಾ ಉತ್ಸವದ ಸಂದರ್ಭದಲ್ಲಿ ಮೈಸೂರು ಅರಮನೆಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ತಾಜ್ ಮಹಲ್‌ಗೆ ಬರುವ ಪ್ರವಾಸಿಗರ ಸಂಖ್ಯೆಯನ್ನೂ ಮೀರಿಸುತ್ತಿದೆ. ಆದರೆ, ಕೇವಲ ಉತ್ಸವದ ಅವಧಿಗೆ ಸೀಮಿತವಾಗದೆ ವರ್ಷಪೂರ್ತಿ ಪ್ರವಾಸೋದ್ಯಮ ಬೆಳವಣಿಗೆಯತ್ತ ನಾವು ಗಮನಹರಿಸಬೇಕಾಗಿದೆ ಎಂದು ತಿಳಿಸಿದರು.

ವಾಸ್ತವ್ಯಕ್ಕೆ ಆದ್ಯತೆ: ಮೈಸೂರಿಗೆ ಪ್ರವಾಸಿಗರು ಬರುತ್ತಾರೆ, ಪ್ರಮುಖ ಸ್ಥಳಗಳನ್ನು ವೀಕ್ಷಿಸುತ್ತಾರೆ ಮತ್ತು ಅದೇ ದಿನ ಹಿಂದಿರುಗುತ್ತಾರೆ. ಇದರಿಂದ ಸ್ಥಳೀಯ ಆರ್ಥಿಕತೆಯ ಮೇಲೆ ಸೀಮಿತ ಪರಿಣಾಮ ಮಾತ್ರ ಉಂಟಾಗುತ್ತದೆ. ಇದನ್ನು ಬದಲಾಯಿಸಲು, ಪ್ರವಾಸಿಗರು ಹೆಚ್ಚು ದಿನ ಇಲ್ಲಿ ಉಳಿಯುವಂತೆ ನಾವು ಪ್ರೋತ್ಸಾಹಿಸಬೇಕು ಎಂದು ವಿವರಿಸಿದರು.

ವೈವಿಧ್ಯಮಯ ಅನುಭವ ಕೇಂದ್ರ ಇಂದಿನ ಪ್ರವಾಸಿಗರು ವಿಶೇಷವಾಗಿ ಜೆನ್–ಝಿ ಮತ್ತು ಜೆನ್–ಆಲ್ಫಾ ಕೇವಲ ಸ್ಮಾರಕಗಳು ಅಥವಾ ಐತಿಹಾಸಿಕ ಸ್ಥಳಗಳನ್ನು ನೋಡಲು ಬಯಸುವುದಿಲ್ಲ. ಅವರು ನೈಜ, ತಲ್ಲೀನಗೊಳಿಸುವ ಮತ್ತು ಜೀವಿತಾವಧಿಯ ನೆನಪಾಗಿ ಉಳಿಯುವ ಅನುಭವಗಳನ್ನು ಬಯಸುತ್ತಾರೆ. ಆದ್ದರಿಂದ, ಮೈಸೂರು ಕೇವಲ ಪರಂಪರೆಯ ತಾಣವಾಗಿರುವುದನ್ನು ಮೀರಿ, ವೈವಿಧ್ಯಮಯ ಅನುಭವಗಳ ಕೇಂದ್ರವಾಗಿ ರೂಪುಗೊಳ್ಳಬೇಕು.

ಉತ್ಸವಗಳ ಕ್ಯಾಲೆಂಡರ್ ರೂಪಿಸಬೇಕು: ಸಾಂಸ್ಕೃತಿಕ, ಪಾಕಶಾಸ್ತ್ರೀಯ, ಆಧ್ಯಾತ್ಮಿಕ, ಪರಿಸರ ಸ್ನೇಹಿ ಮತ್ತು ಮನರಂಜನಾ ಕ್ಷೇತ್ರಗಳಲ್ಲಿ ವೈವಿಧ್ಯಮಯ ಅನುಭವಗಳನ್ನು ರೂಪಿಸಿ ಪ್ರಚಾರ ಮಾಡಬೇಕು. ದಸರಾ ಮೈಸೂರಿನ ವಿಶಿಷ್ಟ ಗುರುತಾಗಿಯೇ ಉಳಿಯಲಿ. ಆದರೆ ಅದರ ಜೊತೆಗೆ ವರ್ಷಪೂರ್ತಿ ನಡೆಯುವ ಕಾರ್ಯಕ್ರಮಗಳು ಮತ್ತು ಉತ್ಸವಗಳ ಕ್ಯಾಲೆಂಡರ್‌ನ್ನೂ ರೂಪಿಸಬೇಕು. ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳು, ಕಲಾ ಉತ್ಸವಗಳು, ಆಹಾರ ಉತ್ಸವಗಳು ಹಾಗೂ ಅನುಭವಾಧಾರಿತ ಪ್ರವಾಸೋದ್ಯಮ ಚಟುವಟಿಕೆಗಳು ಪ್ರವಾಸಿಗರ ಆಸಕ್ತಿಯನ್ನು ಉಳಿಸಿಕೊಳ್ಳುವುದರ ಜೊತೆಗೆ ಅವರು ಹೆಚ್ಚು ದಿನ ಉಳಿಯಲು ಸಹಕಾರಿಯಾಗುತ್ತವೆ. ಇಂದಿನ ಪ್ರವಾಸಿಗರು ಒಂದು ತಾಣವನ್ನು ಕೇವಲ ನೋಡಲು ಬಯಸುವುದಿಲ್ಲ; ಆ ತಾಣದ ಜೀವನಶೈಲಿಯನ್ನು ಅನುಭವಿಸಲು ಬಯಸುತ್ತಾರೆ ಎಂದು ವಿವರಿಸಿದರು.

ಕರ್ನಾಟಕವು ಐತಿಹಾಸಿಕ ಪರಂಪರೆ, ವನ್ಯಜೀವಿ ಸಂಪತ್ತು, ಸುಂದರ ಕಡಲತೀರಗಳು ಮತ್ತು ಆಧುನಿಕ ಅನುಭವಗಳು ಎಲ್ಲವನ್ನು ಒಳಗೊಂಡಿದೆ. ಸರಿಯಾದ ದೃಷ್ಟಿಕೋನ ಮತ್ತು ಪರಿಣಾಮಕಾರಿ ಅನುಷ್ಠಾನದ ಮೂಲಕ ಮೈಸೂರು, ಕರ್ನಾಟಕ ಮತ್ತು ಭಾರತ ಒಟ್ಟಾಗಿ ಜಾಗತಿಕ ಪ್ರವಾಸೋದ್ಯಮದ ಮಹಾಶಕ್ತಿಯಾಗಿ ಹೊರಹೊಮ್ಮಬಹುದು ಎಂದು ತಿಳಿಸಿದರು.

ಮೈಸೂರು ಮಹಾನಗರವು ಶ್ರೀಮಂತ ಪರಂಪರೆ, ಸುಂದರ ಕೆರೆಗಳು, ನೈಸರ್ಗಿಕ ಸೌಂದರ್ಯ, ವೈಭವಯುತ ಉತ್ಸವಗಳು ಮತ್ತು ಕಾಲಾತೀತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಮೈಸೂರು ಭಾರತದ ಪ್ರವಾಸೋದ್ಯಮದ ಶಕ್ತಿಯನ್ನು ನಿಜವಾದ ಅರ್ಥದಲ್ಲಿ ಪ್ರತಿಬಿಂಬಿಸುತ್ತದೆ. ಭಾರತ ಮತ್ತು ಮೈಸೂರಿನ ಈ ವಿಶಿಷ್ಟ ಸಂಯೋಜನೆಯೇ ನಮಗೆ ವಿಶಿಷ್ಟ ಪ್ರವಾಸೋದ್ಯಮದ ಮುನ್ನಡೆ ನೀಡುತ್ತದೆ. ಈ ಸಾಮರ್ಥ್ಯವನ್ನು ಆತ್ಮವಿಶ್ವಾಸ ಮತ್ತು ಹೆಮ್ಮೆಯಿಂದ ವಿಶ್ವದ ಮುಂದೆ ಪ್ರದರ್ಶಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ. ಆದರೆ ನನ್ನ ಅಭಿಪ್ರಾಯದಲ್ಲಿ ಅದರ ಪಾತ್ರ ಇನ್ನೂ ವಿಶಾಲವಾಗಿದೆ. ಇದು ಕೇವಲ ಸಾಂಸ್ಕೃತಿಕ ಕೇಂದ್ರವಲ್ಲ, ಇಡೀ ದಕ್ಷಿಣ ಭಾರತದ ಪ್ರವಾಸೋದ್ಯಮಕ್ಕೆ ಬಲಿಷ್ಠ ಆಧಾರ ಕೇಂದ್ರವಾಗಿದೆ ಎಂದರು.

ಮೈಸೂರಿನ ಅಸ್ತಿತ್ವ ಅದರ ಸ್ಪಷ್ಟ ಮತ್ತು ಅಮೂರ್ತ ಪರಂಪರೆಯಲ್ಲಿ ಆಳವಾಗಿ ಬೇರೂರಿದೆ. ನಗರದ ಸೌಂದರ್ಯ, ವೈಶಿಷ್ಟ್ಯ ಹಾಗೂ ಜಾಗತಿಕ ಆಕರ್ಷಣೆಯ ಮೂಲ ಅದರ ಐತಿಹಾಸಿಕ ಕಟ್ಟಡಗಳು, ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿದೆ. ಕೆಲವೊಮ್ಮೆ ಪರಂಪರೆ ಸಂರಕ್ಷಣೆಗೆ ಅಗತ್ಯವಾದ ಗಮನ ದೊರೆಯಲಿಲ್ಲ ಎಂಬುದು ಕಳವಳಕಾರಿ ಸಂಗತಿಯಾಗಿದೆ. ಆದರೆ ಸಮಯೋಚಿತ ಕ್ರಮಗಳು ಮತ್ತು ಬೆಂಬಲದ ಫಲವಾಗಿ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಜಾರ್‌ಗಳಂತಹ ಹಲವು ಪ್ರಮುಖ ಪರಂಪರೆಯ ಕಟ್ಟಡಗಳು ರಕ್ಷಣೆ ಪಡೆದಿವೆ. ಅಲ್ಲದೆ, ದೇಶದ ಉನ್ನತ ನ್ಯಾಯಾಂಗ ಮಟ್ಟದಲ್ಲಿಯೂ ಅವುಗಳ ಮಹತ್ವಕ್ಕೆ ಮಾನ್ಯತೆ ದೊರೆತಿದೆ. ಈ ಪ್ರಯತ್ನಗಳನ್ನು ನಾವು ಮೆಚ್ಚಲೇಬೇಕು. ಆದರೆ, ಕೇವಲ ರಕ್ಷಣೆ ನೀಡುವುದಷ್ಟೇ ಸಾಕಾಗುವುದಿಲ್ಲ ನಿರಂತರ ಸಂರಕ್ಷಣೆಯ ಅಗತ್ಯವಿದೆ ಎಂದರು.

ಪ್ರವಾಸಿ ತಾಣಗಳ ಪ್ರವೇಶ ದ್ವಾರ ಮೈಸೂರು ದಕ್ಷಿಣ ಭಾರತದ ಅನೇಕ ಅದ್ಭುತ ಪ್ರವಾಸಿ ತಾಣಗಳಿಗೆ ಪ್ರವೇಶದ್ವಾರವಾಗಿದೆ. ಇಲ್ಲಿಂದ ಪ್ರವಾಸಿಗರು ಬಂಡೀಪುರ, ಕಬಿನಿ, ನಾಗರಹೊಳೆ, ಬಿಳಿಗಿರಿರಂಗನ ಬೆಟ್ಟ (ಬಿ.ಆರ್. ಹಿಲ್ಸ್) ಕೊಡಗು, ಕೇರಳ, ಕರಾವಳಿ ಭಾಗಗಳಿಗೆ ಪ್ರಯಾಣ ಆರಂಭಿಸುವ ಸಹಜ ಕೇಂದ್ರವೂ ಮೈಸೂರೇ ಆಗಿದೆ. ಜೊತೆಗೆ ಪ್ರಾಚೀನ ಗಂಗರ ಪರಂಪರೆಯನ್ನು ಸಾರುವ ತಲಕಾಡು ಹಾಗೂ ಹೊಯ್ಸಳ ಸಾಮ್ರಾಜ್ಯದ ವೈಭವದ ನೆನಪುಗಳನ್ನು ಹೊತ್ತಿರುವ ದ್ವಾರಸಮುದ್ರ ಸೇರಿದಂತೆ ಅನೇಕ ಐತಿಹಾಸಿಕ ತಾಣಗಳು ಮೈಸೂರಿನಿಂದ ಸುಲಭವಾಗಿ ತಲುಪಬಹುದಾದ ದೂರದಲ್ಲಿವೆ. ಪ್ರತಿಯೊಂದು ಅರ್ಥದ ಲ್ಲಿಯೂ ಮೈಸೂರು ದಕ್ಷಿಣ ಭಾರತದ ಪ್ರವಾಸೋದ್ಯಮದ ಪ್ರಮುಖ ಕೊಂಡಿಯಾಗಿದೆ.

ಈ ಕಾರ್ಯತಂತ್ರದ ಮಹತ್ವವನ್ನು ಗಮನದಲ್ಲಿಟ್ಟುಕೊಂಡು, ಮೈಸೂರನ್ನು ಬಲಿಷ್ಠ ಆಧಾರ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವುದು ಅತ್ಯಗತ್ಯ. ನಗರದೊಳಗೆ, ನಗರದ ಸುತ್ತಮುತ್ತ ಹಾಗೂ ಸುತ್ತಲಿನ ಪ್ರದೇಶಗಳಿಗೆ ವಿಸ್ತರಿಸುವ ಪ್ರವಾಸೋದ್ಯಮ ಬೆಳವಣಿಗೆಗೆ ಉತ್ತೇಜನ ನೀಡಬೇಕು. ಇದಕ್ಕಾಗಿ ಸರ್ಕಾರ, ಮೈಸೂರು ಟ್ರಾವೆಲ್ ಮಾರ್ಟ್‌ನಂತಹ ಸಂಸ್ಥೆಗಳು ಹಾಗೂ ಪ್ರವಾಸೋದ್ಯಮದ ಎಲ್ಲ ಹಿತಾಸಕ್ತಿಪಕ್ಷಗಳ ನಡುವೆ ಸಮನ್ವಯ ಅಗತ್ಯವಾಗಿದೆ ಎಂದು ವಿವರಿಸಿದರು.

ಈ ವೇಳೆ ಮೈಸೂರಿನ ಪರಂಪರೆ, ಸ್ಥಳೀಯ ಮಾಹಿತಿ ಒಳಗೊಂಡ ಪ್ರವಾಸಿ ಪುಸ್ತಕ ಬಿಡುಗಡೆ ಮಾಡಲಾಯಿತು. ನಂತರ ಜೆಸಿಎಸಿ ಸಂಸ್ಥಾಪಕ ಜಗನ್ನಾಥ ಶೆಣೈ ಅವರಿಗೆ ಜೀವಮಾನ ಶ್ರೇಷ್ಠ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಡಾ.ಕೆವಿ. ತ್ರಿಲೋಕ್‌ಚಂದ್ರ ಮೈಸೂರು ಟ್ರಾವೆಲ್ಸ್ ಅಸೋಸಿಯೇಶನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಮೈಸೂರು ಟ್ರಾವೆಲ್ ಮಾರ್ಟ್ ಛೇರ್ಮನ್ ಸಿ.ಎ.ಜಯಕುಮಾರ್, ಉಪಾಧ್ಯಕ್ಷ ಸಿ.ನಾರಾಯಣಗೌಡ, ಬಾಳಿಗಾ ಇನ್‌ವೆಸ್ಟ್‌ಮೆಂಟ್ ಪ್ರೈ.ಲಿ.ನ ಎಂಡಿ ಯೋಗೇಶ್ ಡಾಂಗೆ ಉಪಸ್ಥಿತರಿದ್ದರು.



ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು, ಜೆಸಿಎಸಿ ಸಂಸ್ಥಾಪಕ ಜಗನ್ನಾಥ ಶೆಣೈ ಅವರಿಗೆ 'ಜೀವಮಾನ ಶ್ರೇಷ್ಠ ಸಾಧನೆ' ಪ್ರಶಸ್ತಿ ನೀಡಿದ ಗೌರವಿಸಿದರು.

> ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರವಾಸೋದ್ಯಮ ಸಚಿವಾಲಯಕ್ಕೆ ಸ್ಪಷ್ಟ ಮಾರ್ಗದರ್ಶನ ನೀಡಿದ್ದು, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸುವ ನಮ್ಮ ಗುರಿಯಲ್ಲಿ, ಪ್ರವಾಸೋದ್ಯಮವು ದೇಶದ ಜಿಡಿಪಿಗೆ 10%ಕ್ಕಿಂತ ಹೆಚ್ಚಿನ ಕೊಡುಗೆ ನೀಡಬೇಕು. ಅಲ್ಪಾವಧಿಯ ಗುರಿಯಾಗಿ, 2030ರ ವೇಳೆಗೆ ಈ ಕೊಡುಗೆಯನ್ನು 7%ಕ್ಕೆ ಏರಿಸುವ ಉದ್ದೇಶ ಹೊಂದಿದ್ದೇವೆ.
> – ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ಸಚಿವ

> ಮೈಸೂರು ಅರಮನೆಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ತಾಜ್ ಮಹಲ್ ನಂತರದ ಸ್ಥಾನವಿದೆ. ಈ ವರ್ಷದ ಕೆಲವು ತಿಂಗಳುಗಳಲ್ಲಿ ಅದು ತಾಜ್ ಮಹಲ್‌ನ್ನೇ ಮೀರಿಸಿರುವುದು ಗಮನಾರ್ಹ. ಆದರೆ ಈ ಅಪಾರ ಸಂಖ್ಯೆಯ ಪ್ರವಾಸಿಗರನ್ನು ನಗರದ ನಿರಂತರ ಆರ್ಥಿಕ ಬೆಳವಣಿಗೆಯಾಗಿ ಪರಿವರ್ತಿಸಲು ನಾವು ಇನ್ನೂ ಸಂಪೂರ್ಣ ಯಶಸ್ವಿಯಾಗಿಲ್ಲ.
> –ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ಮೈಸೂರು ಟ್ರಾವೆಲ್ ಮಾರ್ಟ್ ಅಂಗವಾಗಿ ಜೂ.5 ರಿಂದ 7 ವರೆಗೆ ಮೂರು ದಿನಗಳ ಕಾಲ ನಡೆಯುವ ಈ ಎಕ್ಸ್ ಪೋನಲ್ಲಿ ಕರ್ನಾಟಕ, ಕೇರಳ, ತಮಿಳುನಾಡು, ರಾಜಸ್ಥಾನ್, ಜಮ್ಮು–ಕಾಶ್ಮೀರ ಸೇರಿದಂತೆ ದೇಶದ ನಾನಾ ರಾಜ್ಯದ ಪ್ರತಿನಿಧಿಗಳು ಭಾಗವಹಿಸಿದ್ದಾರೆ. ದಕ್ಷಿಣ ಭಾರತದ ರಾಜ್ಯಗಳ ಪ್ರವಾಸಿ ತಾಣಗಳಿಗೆ ಸಂಬಂಧಿಸಿದಂತೆ ಸೌಲಭ್ಯಗಳನ್ನು ಒದಗಿಸುವ ಹೋಟೆಲ್, ರೆಸಾರ್ಟ್, ಪ್ರವಾಸಿ ಮಾರ್ಗದರ್ಶಿ ಸೇರಿದಂತೆ 120ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿದ್ದು, ಮೊದಲ ದಿನವೇ ಸಾಕಷ್ಟು ಮಂದಿ ಮಾಹಿತಿ ಪಡೆದುಕೊಂಡರು.

ಶಾಸಕ ಜಿ.ಟಿ.ದೇವೇಗೌಡರಿಂದ ಜಯಪುರ ಹೋಬಳಿ ರೈತ ಸಂಪರ್ಕ ಕಟ್ಟಡ ಉದ್ಘಾಟನೆ...



ಮೈಸೂರು ತಾಲೂಕು ಜಯಪುರ ಹೋಬಳಿ ಕೇಂದ್ರದಲ್ಲಿ 1 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣ ಮಾಡಿದ ಜಯಪುರ ಹೋಬಳಿ ರೈತ ಸಂಪರ್ಕ ಕಟ್ಟಡವನ್ನು, ಶಾಸಕ ಜಿ.ಟಿ.ದೇವೇಗೌಡರು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ಈ ವೇಳೆ ಜಯಪುರ ರೈತ ಸಂಪರ್ಕ ಕೇಂದ್ರದ ವತಿಯಿಂದ ಶಾಸಕರನ್ನು ಸನ್ಮಾನಿಸಲಾಯಿತು. ಮೈಸೂರು ಜಿಲ್ಲಾ ಉಪಕೃಷಿ ನಿರ್ದೇಶಕ ರಾಜು, ಮೈಸೂರು ತಾಲೂಕು ಸಹಾಯಕ ಕೃಷಿ ನಿರ್ದೇಶಕ ಜಯರಾಂ, ಮೈಸೂರು ತಾಪಂ ಕಾರ್ಯನಿರ್ವಹಣಾಧಿಕಾರಿ ಕೃಷ್ಣ, ಕೃಷಿ ಅಧಿಕಾರಿ ಡಾ.ಅರುಣಾ, ತಾಂತ್ರಿಕ(ಆತ್ಮ) ವ್ಯವಸ್ಥಾಪಕರಾದ ಪಲ್ಲವಿ, ಎಸ್.ಜೆ.ಹೇಮಂತ್, ಮೈಸೂರು ತಾಲೂಕು ಕೃಷಿಕ ಸಮಾಜದ ಸದಸ್ಯರಾದ ಶಿವಶಂಕರ್, ಮಹದೇವಪ್ಪ, ಟಿ.ಪಿ.ನಂಜುಂಡಸ್ವಾಮಿ, ಮುಖಂಡರಾದ ನಂಜುಂಡಸ್ವಾಮಿ, ಮಹದೇವಸ್ವಾಮಿ, ಸಿದ್ದರಾಮು, ಲೆಕ್ಕ ಸಹಾಯಕ ವಿಜಯಕುಮಾರ್, ದಾರಿಪುರ ಚಂದ್ರಶೇಖರ್, ಸಮಾಜ ಸೇವಕರಾದ ಎಸ್.ಶ್ರೀಕಾಂತ್, ಬಿ.ಡಿ.ಬಸವಣ್ಣ, ದಾರಿಪುರ ಬಸವಣ್ಣ, ಜವರನಾಯಕ, ಅಬ್ದುಲ್ ಮುತಾಲಿಫ್, ಅಭಿಷೇಕ್, ರಾಜೇಶ್, ನಾಗರಾಜು, ರೇಣುಕಾ, ಟಿ.ಪಿ.ನಾಗರಾಜು, ಭೈರೇಶ್, ಗೋವಿಂದನಾಯಕ, ಶಿವರಾಜು, ಮಾದೇವಯ್ಯ ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

ಮೈಸೂರಲ್ಲೊಂದು ಅಮಾನವೀಯ ಘಟನೆ

ಅನುಮಾನಾಸ್ಪದವಾಗಿ ಸಾವನ್ನಪ್ಪಿದ ವ್ಯಕ್ತಿಯಿಂದ ಮೊಬೈಲ್ ದೋಚಿದ್ದ ಯುವಕನ ಬಂಧನ

ಮೈಸೂರು, ಜೂ.5(ಜಿಎ)–ಮೈಸೂರಿನಲ್ಲಿ ಅಮಾನವೀಯ ಘಟನೆಯೊಂದು ಬೆಳಕಿಗೆ ಬಂದಿದೆ. ಅನುಮಾನಾಸ್ಪದವಾಗಿ ಸಾವನ್ನಪ್ಪಿದ ವ್ಯಕ್ತಿಯ ಬಳಿಯಿದ್ದ ಮೊಬೈಲ್ ಸೇರಿದಂತೆ ಮತ್ತಿತರ ವಸ್ತುಗಳನ್ನು ಮಾನವೀಯತೆ ಮರೆತು ಕಳವು ಮಾಡಿಕೊಂಡು ಪರಾರಿಯಾಗಿರುವ ಘಟನೆ ಸಂಭವಿಸಿದೆ. ಈ ಕೃತ್ಯವೆಸಗಿದ್ದ ಯುವಕನನ್ನು ಎನ್.ಆರ್. ಮೊಹಲ್ಲಾ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಕಲ್ಯಾಣಗಿರಿಯ ಶ್ರೀನಗರದ ನಿವಾಸಿ ಮುಜಾಹಿದ್ ಖಾನ್(24) ಬಂಧಿತ ಆರೋಪಿ. ಸ್ಟಾರ್ ಮಾರ್ಕ್ ಸಾಫ್ಟ್‌ವೇರ್ ಕಂಪನಿಯಲ್ಲಿ ಕಾರು ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ಹೆಬ್ಬಾಳಿನ ಭೈರವೇಶ್ವರ ನಗರದ ನಿವಾಸಿ ಹೆಚ್.ನಾಗರಾಜು(48) ಅನುಮಾನಾಸ್ಪದವಾಗಿ ಸಾವನ್ನಪ್ಪಿದವರಾಗಿದ್ದಾರೆ.

ಜೂ.2ರಂದು ನಾಗರಾಜು ಓಡಿಸುತ್ತಿದ್ದ ಕಂಪನಿಯ ಕಾರು ಉನ್ನತಿ ನಗರದ ರಿಂಗ್ ರಸ್ತೆಯ ಬಳಿ ಅಪಘಾತವಾಗಿದ್ದು, ಈ ಸಂದರ್ಭದಲ್ಲಿ ಅದೇ ರಸ್ತೆಯಲ್ಲಿ ಸಾಗುತ್ತಿದ್ದ ಮತ್ತೊಂದು ಕಂಪನಿಯ ಕಾರು ಚಾಲಕ ಇದನ್ನು ಗಮನಿಸಿ, ತಕ್ಷಣ ಸ್ಟಾರ್ ಮಾರ್ಕ್ ಸಾಫ್ಟ್‌ವೇರ್ ಕಂಪನಿಯ ಸಿಬ್ಬಂದಿ ಗಮನಕ್ಕೆ ತಂದಿದ್ದಾರೆ. ಕಂಪನಿ ಸಿಬ್ಬಂದಿ ನಾಗರಾಜು ಕುಟುಂಬಸ್ಥರಿಗೆ ಈ ವಿಷಯವನ್ನು ತಿಳಿಸಿದ್ದಾರೆ.

ವಿಷಯ ತಿಳಿದ ತಕ್ಷಣ ನಾಗರಾಜು ಸಹೋದರ ವೆಂಕಟೇಶ್ ಸ್ಥಳಕ್ಕೆ ತೆರಳಿ ನೋಡಿದಾಗ ತನ್ನಣ್ಣ ಚಾಲನೆ ಮಾಡುತ್ತಿದ್ದ ಕಾರು (ಕೆಎ09 ಎಬಿ2179) ಎರಿಟಿಗ ಸರ್ವಿಸ್ ರಸ್ತೆಯಲ್ಲಿದ್ದ ಎಂ ಸ್ಯಾಂಡ್ ಗುಡ್ಡೆ ಮೇಲೆ ನಿಂತಿರುವುದು ಹಾಗೂ ಅಣ್ಣನ ಶವ ಕಾರಿನಿಂದ ಐದಾರೂ ಅಡಿ ದೂರದಲ್ಲಿ ಬಿದ್ದಿರುವುದನ್ನು ಗಮನಿಸಿ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಅಣ್ಣ ಯಾವ ಕಾರಣಕ್ಕೆ ಸಾವನ್ನಪ್ಪಿದ್ದಾನೆ ಎಂಬ ಬಗ್ಗೆ ತನಿಖೆ ನಡೆಸುವಂತೆ ದೂರು ಸಲ್ಲಿಸಿದ್ದಾರೆ.

ದೂರು ಬಂದ ಹಿನ್ನೆಲೆಯಲ್ಲಿ ನರಸಿಂಹರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಮೊದಲು ನಾಗರಾಜು ಬಳಸುತ್ತಿದ್ದ ಮೊಬೈಲ್ ನಾಪತ್ತೆಯಾಗಿರುವುದರ ಬಗ್ಗೆ ತನಿಖೆ ಕೈಗೊಂಡು ಅವರ ನಂಬರ್‌ಗೆ ಬಂದ ಕರೆ, ಮೆಸೇಜ್‌ಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಸಿಡಿಆರ್ ಮಾಹಿತಿ ಪಡೆದುಕೊಂಡಿದ್ದಾರೆ.

ಸಿಡಿಆರ್ ವರದಿ ಪ್ರಕಾರ ನಾಗರಾಜು ಮೊಬೈಲ್‌ನಿಂದ ಜೂ.2ರಂದು ಬೆಳಗ್ಗೆ 3.15ಕ್ಕೆ ಒಂದು ಮೆಸೇಜ್, ನಂತರ ಬೆಳಗ್ಗೆ 7ಕ್ಕೆ ಮತ್ತು 8.18ಕ್ಕೆ ಮತ್ತೊಂದು ಮೆಸೇಜ್ ಬಂದಿದೆ. ಈ ಎರಡು ಸಮಯದಲ್ಲಿ ಅದೇ ಮೊಬೈಲ್‌ನ ಐಎಂಇಐ ನಂಬರ್ ಬಳಕೆಯಾಗಿದೆ. ಆದರೆ ಸಂಜೆ 5.30ಕ್ಕೆ ಮೃತ ನಾಗರಾಜು ಮೊಬೈಲ್‌ಗೆ ಮತ್ತೊಂದು ನಂಬರ್‌ನಿಂದ ಕರೆ ಬಂದಿದ್ದು, 40 ಸೆಕೆಂಡ್ ಮಾತನಾಡಿರುವ ಮಾಹಿತಿ ಲಭ್ಯವಾಗಿದೆ.

ನಂತರ ಪೊಲೀಸರು ಕರೆ ಮಾಡಿದ ನಂಬರ್ ಪರಿಶೀಲಿಸಿದಾಗ ಆ ನಂಬರ್ ಮೈಸೂರಿನ ಬನ್ನಿಮಂಟಪದ ಎಸ್‌ಎಸ್ ನಗರದ ನಿವಾಸಿ ಹಸೀನಾ ಭಾನು ಎಂದು ತಿಳಿದು ಬಂದಿದೆ. ತಕ್ಷಣ ಆಕೆಯನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದಾಗ ಮೊದಲು ಆ ನಂಬರ್‌ನಿಂದ ಮಿಸ್ ಕಾಲ್ ಬಂತು. ಅದಕ್ಕೆ ಅದೇ ನಂಬರ್‌ಗೆ 5.30ಕ್ಕೆ ಕರೆ ಮಾಡಿದಾಗ ನನ್ನ ಅಕ್ಕನ ಮಗ ಮುಜಾಹಿದ್ ಖಾನ್ ಮಾತನಾಡಿದ ಎಂದು ತಿಳಿಸಿದ್ದಾರೆ.

ವಿಚಾರ ತಿಳಿಯುತ್ತಿದ್ದಂತೆ ತನಿಖೆ ಚುರುಕುಗೊಳಿಸಿದ ಪೊಲೀಸರು ತಕ್ಷಣ ಮೈಸೂರಿನ ಕಲ್ಯಾಣಗಿರಿ ಮುಜಾಹಿದ್ ಖಾನ್‌ನ್ನು ವಶಕ್ಕೆ ಪಡೆದು, ಠಾಣೆಗೆ ಕರೆ ತಂದು ವಿಚಾರಣೆ ನಡೆಸಿದ್ದಾರೆ. ಆತನ ಚಿಕ್ಕಮ್ಮನಿಗೆ ಕರೆ ಮಾಡಿದ ಬಗ್ಗೆ ಹಾಗೂ ಐಎಂಇಐ ನಂಬರ್‌ನ ಮೊಬೈಲ್ ಕುರಿತು ವಿಚಾರಿಸಿದ್ದಾಗ ಆತನ ಬಳಿ ಇದ್ದ ಮೊಬೈಲ್ ಫೋನ್ ಪೊಲೀಸರಿಗೆ ನೀಡಿದ್ದಾನೆ. ಮೊಬೈಲ್ ಪರಿಶೀಲಿಸಿದಾಗ ಮೃತ ವ್ಯಕ್ತಿ ನಾಗರಾಜು ಮೊಬೈಲ್ ನಂಬರ್ ಬಳಕೆಯಾಗಿದ್ದ ಅದೇ ಐಎಂಇಐ ನಂಬರ್ ಆಗಿದ್ದು, ಸ್ಪಷ್ಟವಾಗಿದೆ.

ಈ ಬಗ್ಗೆ ವಿಚಾರಿಸಿದಾಗ ಮುಜಾಹಿದ್ ಖಾನ್ ಸತ್ಯ ಬಿಚ್ಚಿಟ್ಟಿದ್ದು, ಜೂ.2ರಂದು ಬೆಳಗ್ಗೆ 4.30ಕ್ಕೆ ಸಿದ್ದಿಖಿನಗರದಲ್ಲಿರುವ ಚಿಕ್ಕಮ್ಮ ಹಸೀನಾ ಭಾನು ಮನೆಯಿಂದ ತಮ್ಮ ಮನೆ ಕಲ್ಯಾಣಗಿರಿಗೆ ತೆರಳುವಾಗ ಉನ್ನತಿನಗರದ ರಿಂಗ್ ರಸ್ತೆಯ ಪಕ್ಕದಲ್ಲಿ ಕಾರೊಂದು ಅಪಘಾತವಾಗಿ ಹೆಡ್‌ಲೈಟ್ ಆನ್ ಆಗಿತ್ತು. ನಾನು ಕಾರಿನ ಬಳಿ ತೆರಳಿ ನೋಡಿದ್ದಾಗ ಕಾರಿನ ಡ್ರೈವರ್ ಡೋರ್ ಗ್ಲಾಸ್ ತೆಗೆದಿತ್ತು. ಕಾರಿನ ಸೀಟ್‌ನಲ್ಲಿದ್ದ ವ್ಯಕ್ತಿಯನ್ನು ನೋಡಿದಾಗ ಅವರು ಸೀಟ್ ಬೆಲ್ಟ್ ಧರಿಸಿದ್ದರು. ಬಾಯಿಯಲ್ಲಿ ನೊರೆ ರೀತಿ ಜೊಲ್ಲು ಬಂದಿತ್ತು, ಹಾಗೇ ಮೂಗಿನಲ್ಲಿ ರಕ್ತ ಬಂದಿತ್ತು. ನಂತರ ಅವರನ್ನು ಎಬ್ಬಿಸಲು ಪ್ರಯತ್ನ ಪಟ್ಟೆ ಆದರೆ ಅದು ಸಾಧ್ಯವಾಗಲಿಲ್ಲ.

ನಂತರ ಡ್ರೈವರ್ ಡೋರ್ ತೆಗೆಯಲು ಪ್ರಯತ್ನಿಸಿದೆ, ಆದರೆ ಅದೂ ಆಗಲಿಲ್ಲ. ನಂತರ ಪಕ್ಕದ ಡೋರ್ ತೆಗೆದು ಡ್ರೈವರ್ ಸೀಟಿನಲ್ಲಿದ್ದ ವ್ಯಕ್ತಿಯನ್ನು ಕಾರಿನಿಂದ ಹೊರಗೆ ಎಳೆದು ಕಾರಿನ ಮುಂಭಾಗದ ಎಂ ಸ್ಯಾಂಡ್ ಗುಡ್ಡೆ ಮೇಲೆ ಮಲಗಿಸಿದೆ.

ವ್ಯಕ್ತಿಯೂ ಧರಿಸಿದ ಪ್ಯಾಂಟ್ ಬೆಲ್ಟ್, ಮೊಬೈಲ್ ಫೋನ್ ಹಾಗೂ ಎರಡು ಡೇಟಾ ಕೇಬಲ್‌ಗಳನ್ನು ಕಳ್ಳತನ ಮಾಡಿ, ಡೇಟಾ ಕೇಬಲ್ ಹಾಗೂ ಬೆಲ್ಟ್ ಅನ್ನು ರೈಲ್ವೆ ಹಳಿಯ ಪಕ್ಕದ ಪಾಳು ಬಿದ್ದ ಮನೆಯಲ್ಲಿ ಬಚ್ಚಿಟ್ಟಿದ್ದೇನೆ ಎಂದು ಒಪ್ಪಿಕೊಂಡಿದ್ದಾನೆ.


ಮೃತರ ಮೊಬೈಲ್‌ನಲ್ಲಿದ್ದ ಸಿಮ್ ತೆಗೆದು ನನ್ನ ಬಳಿ ಇದ್ದ ಮೊಬೈಲ್ ಫೋನ್‌ಗೆ ಹಾಕಿಕೊಂಡು ಚಿಕ್ಕಮ್ಮನಿಗೆ ಕರೆ ಮಾಡಿ ಮಾತನಾಡಿದೆ. ನನ್ನ ಜೊತೆ ಬಂದರೆ ಬಚ್ಚಿಟ್ಟಿರುವ ಎಲ್ಲಾ ವಸ್ತುಗಳನ್ನು ತೋರಿಸುತ್ತೇನೆ ಎಂದು ತಪ್ಪೊಪ್ಪಿಕೊಂಡಿದ್ದಾನೆ. ಈ ಸಂಬಂಧ ನರಸಿಂಹರಾಜ ಪೊಲೀಸರು ಮುಜಾಹಿದ್ ವಿರುದ್ಧ ಪ್ರಕರಣ ದಾಖಲಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಾಗರಾಜು ಮೃತ ಪಟ್ಟಿರುವ ಬಗ್ಗೆ ವೈದ್ಯಕೀಯ ವರದಿಗಳು ಬರಬೇಕಿದೆ ಸದ್ಯಕ್ಕೆ ಏನು ಹೇಳಲ್ಲೂ ಸಾಧ್ಯವಿಲ್ಲ ಎಂದು ಪೊಲೀಸರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೊಬೈಲ್ ಮೆಸೇಜ್, ಕರೆಯಿಂದ ಸಿಕ್ಕಿಬಿದ್ದ ವ್ಯಕ್ತಿ



ಮುಜಾಹಿದ್ ಖಾನ್.



ಕಾರು ಅಪಘಾತವಾದ ಸ್ಥಳ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೈ ಜವಾನಿ ತೋ ಇಷ್ಕ್ ಹೋನಾ ಹೈ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಮ್ಯಾಂಗೋ ಪಚ್ಚ (ಕ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ನಾಳೆ ಕೆಂಪು ಚೆಲುವರಾಜಮ್ಮಣ್ಣಿ ನಗರದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿ ಹಬ್ಬ ಆಚರಣೆ

ಮೈಸೂರು,ಜೂ.5(ಜಿಎ)–ಮೈಸೂರಿನ ಕೆಂಪು ಚೆಲುವರಾಜಮ್ಮಣ್ಣಿ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿಹಬ್ಬ ಆಚರಣಾ ಕಾರ್ಯಕ್ರಮ ಜೂ.7 ರಂದು ಬೆಳಗ್ಗೆ 10ಕ್ಕೆ ಕೆ.ಸಿನಗರದ ಜಯಚಾಮರಾಜೇಂದ್ರ ರಸ್ತೆಯಲ್ಲಿ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಹೆಚ್.ಆರ್.ಯೋಗೇಂದ್ರ ಈ ವಿಷಯ ತಿಳಿಸಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟನೆ ಹಾಗೂ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಕನ್ನಡ– ಸಂಸ್ಕೃತ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮೈಸೂರು ಕಥೆಗಳು ಖ್ಯಾತಿಯ ಧರ್ಮೇಂದ್ರಕುಮಾರ್ ಮುಖ್ಯ ಭಾಷಣ ಮಾಡುವರು. ಸಂಜೆ 4 ಗಂಟೆಗೆ ಪೊಲೀಸ್ ಬ್ಯಾಂಡ್, ಬಳಿಕ ಚಿತ್ರಗೀತೆ ಗಾಯನ, ಹಾಸ್ಯ ರಸಮಂಜರಿ ನಡೆಯಲಿದೆ. ರಾತ್ರಿ 9 ಗಂಟೆಗೆ ಶಾಸಕ ಟಿ.ಎಸ್.ಶ್ರೀವತ್ಸ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಟಿ.ಪಿ.ವಿಶ್ವನಾಥ್, ಎಸ್.ಸೋಮಶೇಖರ್, ಎನ್.ಬಿ.ಚೆನ್ನಕೇಶವ್, ಹೆಚ್.ಎಸ್. ದೀಪಕ್, ಚಿನ್ನಪ್ಪ ಉಪಸ್ಥಿತರಿದ್ದರು.

ಇಂದು, ನಾಳೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು, ಜೂ.5–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತದ ಯಂತ್ರಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ 66/11 ಕೆವಿ ವಿತರಣಾ ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತ್ರೈಮಾಸಿಕ ನಿರ್ವಹಣೆಯನ್ನು ಹಮ್ಮಿಕೊಂಡಿರುವುದರಿಂದ ಜೂನ್ 6 ಮತ್ತು 7 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಮೈಸೂರು ನಗರ ಪಾಲಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ನೀರು ವ್ಯತ್ಯಯ ಉಂಟಾಗುವ ಪ್ರದೇಶಗಳು: ವಾರ್ಡ್ ನಂ 1ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42 ರಿಂದ 45, ವಾರ್ಡ್ ನಂ.47ಕ್ಕೆ ಸಂಬಂಧಿಸಿದ ಪ್ರದೇಶಗಳಾದ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲು, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ. ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 2, 3ನೇ ಹಂತ, ಗೋಕುಲಂ 1,2,3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್ ಬಡಾವಣೆ, ಯಾದವಗಿರಿ, ಬನ್ನಿಮಂಟಪ ಎಬಿಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್‌ನಗರ, ಬಡೇಮಕಾನ್, ಹಲೀಂ ನಗರ, ದೇವರಾಜಮೊಹಲ್ಲಾ ಭಾಗಶಃ, ಎನ್‌ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ ಹಾಗೂ ಇತ್ಯಾದಿ ಪ್ರದೇಶಗಳು.

ಅರುಣ ಕುಮಾರಿಗೆ ಪಿಹೆಚ್.ಡಿ



ಮೈಸೂರು: ಡಾ.ವೆಂಕಟೇಶ.ಪಿ ಅವರ ಮಾರ್ಗದರ್ಶನದಲ್ಲಿ ಅರುಣಕುಮಾರಿ.ಎಸ್ ಅವರು ಇಂಗ್ಲಿಷ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮರಗಳ ಬುಡ ಕಾಂಕ್ರೀಟ್, ಟೈಲ್ಸ್ ಮುಕ್ತಗೊಳಿಸಿ ಪರಿಸರ ದಿನ ಆಚರಣೆ



ಎಸ್‌ಜೆಸಿಇ ಕಾಲೇಜಿನ ಬಳಿ ಮರಗಳ ಸುತ್ತ ಅಳವಡಿಸಿದ್ದ ಕಾಂಕ್ರೀಟ್ ಹಾಗೂ ಇಂಟರ್ ಲಾಕ್ ಟೈಲ್ಸ್ ತೆರವುಗೊಳಿಸುವ ಮೂಲಕ ಪರಿಸರ ದಿನ ಆಚರಿಸಲಾಯಿತು.

ಮೈಸೂರು, ಜೂ.5– ಪರಿಸರಕ್ಕಾಗಿ ನಾವು ಸಂಘಟನೆಯು ಆರ್‌ಎಲ್‌ಎಚ್‌ಪಿ ಮತ್ತು ಯೂತ್ ಫಾರ್ ಸಸ್ಟೈನಬಿಲಿಟಿ ಸಂಘಟನೆಗಳ ಜೊತೆಗೂಡಿ ಶುಕ್ರವಾರ ನಗರದ ಜೆಸಿಇ ಕಾಲೇಜು ಮುಂಭಾಗದ ರಸ್ತೆಯಲ್ಲಿರುವ 24 ಮರಗಳ ಸುತ್ತಲೂ ಕಾಂಕ್ರೀಟ್, ಟೈಲ್ಸ್ ತೆರವುಗೊಳಿಸುವ ಮೂಲಕ 'ವಿಶ್ವ ಪರಿಸರ ದಿನ'ವನ್ನು ವಿಶಿಷ್ಟವಾಗಿ ಆಚರಿಸಲಾಯಿತು.

ಬಳಿಕ ಮಾತನಾಡಿದ ಪರಿಸರಕ್ಕಾಗಿ ನಾವು ಸಂಘಟನೆ ಪ್ರಧಾನ ಕಾರ್ಯದರ್ಶಿ ಪರುಶುರಾಮೇಗೌಡ, ಅವೈಜ್ಞಾನಿಕವಾಗಿ ಮರಗಳ ಸುತ್ತ ಹಾಕಲಾಗಿರುವ ಕಾಂಕ್ರೀಟ್, ಟೈಲ್ಸ್ ಮತ್ತು ಡಾಂಬಾರನ್ನು ಎನ್‌ಜಿಟಿ ಮತ್ತು ಸರ್ಕಾರದ ಆದೇಶವನ್ನು ಪಾಲಿಸಿ ತೆಗೆದುಹಾಕುವಂತೆ ಪಾಲಿಕೆ ಮತ್ತು ಅರಣ್ಯ ಇಲಾಖೆಯನ್ನು ಆಗ್ರಹಿಸಿದರು.

ಜಾಗತಿಕ ತಾಪಮಾನ ಏರಿಕೆ, ಹವಾಮಾನ ವೈಪರಿತ್ಯ ಮನುಷ್ಯನೂ ಸೇರಿದಂತೆ ಸಕಲ ಜೀವಸಂಕುಲವನ್ನು ತೀವ್ರವಾಗಿ ಬಾಧಿಸುತ್ತಿವೆ. ಈ ಹಿನ್ನೆಲೆಯಲ್ಲಿ ನಗರದಲ್ಲಿರುವ ಮರಗಳನ್ನು ಉಳಿಸಿಕೊಳ್ಳಲು ನಾವೆಲ್ಲ ಪ್ರಯತ್ನ ಮಾಡೋಣ ಎಂದು ಕರೆ ಕೊಟ್ಟರು.

ಆರ್‌ಎಲ್‌ಎಚ್‌ಪಿ ಸಂಸ್ಥೆಯ ಸರಸ್ವತಿ ಮಾತನಾಡಿ, ಪರಿಸರ ಸಂರಕ್ಷಣೆಯ ಮಹತ್ವವನ್ನು ವಿದ್ಯಾರ್ಥಿಗಳು, ಯುವ ಸಮೂಹ ಹಾಗೂ ಗ್ರಾಮೀಣ ಭಾಗದ ಜನರಿಗೆ ತಿಳಿಸುವ ಕೆಲಸ ಮಾಡಿಕೊಂಡು ಬರಲಾಗುತ್ತಿದೆ. ಪರಿಸರ ಸಂರಕ್ಷಣೆಗೆ ಸಮೂಹ ಹೋರಾಟ, ಪರಿಸರ ಸಂಬಂಧ ತಿಳುವಳಿಕೆ ಅತ್ಯಗತ್ಯವಾಗಿದೆ ಎಂದರು.

ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ, ಜಾವೀದ್ ನಯೀಮ್, ಎನ್.ಎಸ್.ರಂಗರಾಜು, ಪ್ರೊ. ಕಾಳಚನ್ನೇಗೌಡ, ಶ್ಯಾಮಲಾ, ನಬೀಜಾನ್, ಸರಸ್ವತಿ, ರವಿ ಬಳೆ, ಲೋಲಕುಮಾರ್, ಕೃಷ್ಣ ಬಾನು ಪ್ರಶಾಂತ್, ಗುಂಟಯ್ಯ, ಕಾಮಾಕ್ಷಿ ಗೌಡ, ವಿಶ್ವನಾಥ್, ಲೀಲಾ ಶಿವಕುಮಾರ್, ಲೀಲಾ ವೆಂಕಟೇಶ, ಅಂಜನಾ, ಮನ್ಸೂರ್ ಅಹ್ಮದ್, ನಸ್ರುಲ್ಲಾ, ಸುಧೀರ್, ಶಿವಶಂಕರ್, ಬಂಗಾರ ನಾಯಕ, ಚೇತನ್, ಪ್ರಭಾ, ಶೋಭಾ, ಭಾಗ್ಯ , ಶೈಲಜೇಶ್, ಗಣೇಶ್, ಇಂದಿರಾ, ಸುಶೀಲಾ, ಮಹದೇವಸ್ವಾಮಿ, ಚೇತನ್, ಸಾರಾ ಮಿತ್ರ, ಜಯಲಕ್ಷ್ಮಿ, ಸ್ವಪ್ನ, ಸೃಷ್ಟಿ, ಪ್ರವೀಣ್, ಚರಣ್, ಪ್ರಭಾಕರ್ ಭಾಗವಹಿಸಿದ್ದರು.


ಮೈಸೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರಾದ
ಎಂ.ಜೆ. ರವಿಕುಮಾರ್ ಅಣ್ಣನವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು : ನಾಗರಾಜು, ವಿನಯ್‌ಕುಮಾರ್,
ನವೀನ್ ಮತ್ತು ಎಂ.ಜೆ. ರವಿಕುಮಾರ್‌ರವರ ಸ್ನೇಹ ಬಳಗ, ಮೈಸೂರು
JK ARTS